MANGALORE'S PREMIER SILK HOUSE

Invites you to come and choose your Clothing requirements.

NEW ARRIVALS

Kashmere
Woolen
Coatings of
a hundred Varieties

* * * * *

Shirtings new
& up-to-date
("Silray" etc.)

* * * * *

Dhoties

* * * * *

Shawls

* * *

Towels
&

SARIES

hundreds of designs
& borders!
Inexhaustive stock
to choose from.
New — New.

ALL NEW STOCK!

ಹೊಸತಾಗಿ ಬಂದುದು

ಕಾಶ್ಮೀರ್
ವೂಲನ್
ಮೊದಲಾದ ನೂರಾರು
ಬಗೆಯ ಕೋಟಿಂಗ್;

* * * * *

"ಸಿಲ್ರೇ" — "ಆರ್ಟ್ಲಿನ್"
ಮೊದಲಾದ ಶರ್ಟಿಂಗುಗಳು

* * * * *

ಧೋತಿಗಳು

* * * *

ಶಾಲುಗಳು

* * * *

ಮತ್ತು

ಸೀರೆಗಳು

ನೂರಾರು ಬಗೆ; ವಿಧವಿಧದ
ಅಂಚು ಮತ್ತು "ಮೈ"
ನೀವು ಆರಿಸಿ ತೆಗೆವಷ್ಟು ವಿಪುಲ!
ಹೊಸತು — ಹೊಸತು

'SUJIRKARS' MEANS 'SAVING'

By your Clothing requisites To-day.

Visit our shop—a feast for your eyes!

SUJIRKAR BROTHERS,

MARKET ROAD, MANGALORE.

ಸೂಜೀರ್ಕಾರ್ ಬ್ರದರ್ಸ್, ಮಾರ್ಕೆಟು ರಸ್ತೆ, ಮಂಗಳೂರು.



ಶ್ರೀಯುತ ಸುಭಾಷಚಂದ್ರ ಬೋಸರು

ಐವತ್ತೊಂದನೇ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರು.

ವಾರ್ಷಿಕ ಚಂದಾ ರೂ. 1—8—0. ಅಂಚೆವೆಚ್ಚ ಸೇರಿ ರೂ. 2—5—0.

ಪೊಡವಿಸಿರಿ ಜಯುವಡೆದು ಓಲಗಕೆ
ಬಹಕಾಲ
ವಮರಿಹುದು, ಮುಂಜಾನೆ
ಯೆಂಬ ತನಿಬೆಳಗಂ
ರವಿಪಿಡಿದು ಬಹನೆಂದು ದೂತ್ಯ
ಪೇಳ್ವೊಲು, ಸು—ಪ್ರ—
ಭಾ—ತ—ವಾಣಿಯುದಿದೋ
ಸಾರ್ದಪುದು ಮುನ್ನಂ

ಪ್ರಭಾತ

ಜನಕೆ ಜಾಗೃತಿಯುದಯುವಿದುವೆ.
ತಾಮಸ ಜಡತೆ—
ಗಳೆವ ವಿಜಯುವ ಸಾರ್ವ
ಮೊದಲ ತೂರ್ಯಂ
ಬಗೆಗೆ ಬಾಹ್ಯಜ್ಞಾನವೀವಾದ್ಯ
ಶಕ್ತಿಯಿದು,
ಸದಮಲಾಂತಃಕರಣ ತರುಣ
ಪ್ರಭಾತಂ.

ಸಂಪುಟ ೪. ಸಂಚಿಕೆ ೧.

ಪ್ರಭಾತ ವಿಶೇಷಾಂಕ **1938** **Prabhath Annual**

ನೂರು ವರ್ಷ (1838ರಲ್ಲಿ) ಗಳ ಹಿಂದೆ.

ಹಿಂದಣ ವರ್ಷದಲ್ಲಿ ಹಿಡಿದುಕೊಂಡ ಭರವಸೆ-ಆಸೆಗಳೊಂದಿಗೆ ೧೯೩೮ರಲ್ಲಿ ಪದಾರ್ಪಣಮಾಡಿದೆ ಪ್ರಪಂಚ. ಆ ಭರವಸೆ-ಆಸೆಗಳಲ್ಲಿ ಕೆಲವು ಕೈಗೂಡಲೂಬಹುದು; ಮತ್ತೆ ಕೆಲವು ನಿರರ್ಥಕವಾಗಲೂಬಹುದು. ಆದರೆ, ಮಾನವನಿಗೆ ಆಸೆಪಡುವುದೊಂದು ಸ್ವಾಭಾವಿಕ; ಭರವಸೆಯು ಅವನ ಜೀವನಾಧಾರ.

ಚೀನಾ-ಜಾಪಾನ್ ಯುದ್ಧವಲ್ಲಿ; ಸ್ಪೈನ್ ಯುದ್ಧ ಮತ್ತೊಂದೆಡೆಯಲ್ಲಿ; ಅಮೇರಿಕ— ಬ್ರಿಟೈನ್ - ಫ್ರಾನ್ಸುಗಳು ಇತರ ದೇಶಗಳಂತೆ, ಸ್ವರಕ್ಷಣೋಪಾಯಗಳನ್ನು ಚಿಂತಿಸುತ್ತಿರುವ ವರುಷವಿದು. ಹೊಟ್ಟೆಗಿಲ್ಲದವರು ಅನ್ನಕ್ಕಾಗಿ ಹುಡುಕುತ್ತಿರುವರು; ಇದ್ದವರು, ಇದ್ದುದನ್ನು ಕಾಪಾಡಿಕೊಳ್ಳುವ ಯತ್ನಗಳಲ್ಲಿ ನಿಮಗ್ನರು.

ಇಂದಿಗೆ ನೂರು ವರ್ಷಗಳ ಹಿಂದೆ, ಹಿಂದೂದೇಶದಲ್ಲೇನಾಯಿತೆಂದು ನೋಡಿ, ೧೮೩೮ನ್ನು ೧೯೩೮ಕ್ಕೆ ಹೋಲಿಸಿ ನೋಡಲಿಚ್ಛೆಪಡುವವರು ಹಲವರು.

೧೮೩೮,-ಇದು ಹಿಂದೂದೇಶಕ್ಕೆ ಸು[illegible] ವರುಷವಾಗಿರಲಿಲ್ಲ. ಉತ್ತರ [illegible]ದೂದೇಶದಲ್ಲಿ ಭಯಂಕರ ಕ್ಷಾಮವೊಂದು ಹಬ್ಬಿ, ಜನರಲ್ಲಿ ಹಾಹಾಕಾರವೆಬ್ಬಿಸಿತ್ತು. ಇದಕ್ಕೆ ಒಂದೂವರೆ ವರುಷಗಳ ಹಿಂದೆ ಉಂಟಾದ ನೀರಿನ ಕ್ಷಾಮವು ಯಮುನಾ ಮತ್ತು ಗಂಗಾನದಿಯ ತೀರಗಳನ್ನೂ ಬಯಲುಗಳನ್ನೂ ಮರ-ಭೂಮಿಯಂತೆ ಮಾರ್ಪಡಿಸಿತ್ತು. ಸಾವಿರಾರು ಜನರು, ತಿನ್ನಲನ್ನವಿಲ್ಲದೆ, ರಸ್ತೆಗಳಲ್ಲಿ ಬಿದ್ದು ಮಡಿವ ದೃಶ್ಯಗಳು ಅಪರೂಪವಾಗಿರಲಿಲ್ಲ. ೧೮೩೭ ಮತ್ತು ೧೮೩೮-ಇವೆರಡು ವರುಷಗಳಲ್ಲೇ ಹತ್ತು ಲಕ್ಷ ಜನರು, ಕ್ಷಾಮರಾಕ್ಷಸನಿಗೇ ತುತ್ತಾದರೆಂದು ಲೆಕ್ಕವಿದೆ!

೧೮೩೮ರಲ್ಲಿ ಅಫಘಾನ ಯುದ್ಧವು ಭೀಕರತೆಯನ್ನು ತಾಳಿತು. ಅದಕ್ಕೆರಡು ವರ್ಷಗಳ ಮುಂಚಿತವಾಗಿಯೇ, ಆಗಣ ಹಿಂದೂದೇಶದ ಗವರ್ನರ ಜನರಲರಾಗಿದ್ದ ಲೊರ್ಡ್ ಆಕ್ಲೆಂಡರವರ ನಿರೂಪದಂತೆ, ಕೆಪ್ಟನ್‌ಬರ್ನ್ಸ್ ಎಂಬವರು, ಅಫಘಾನ ಅಮೀರನೊಡನೆ ಸಂಧಿಪ್ರಸ್ತಾಪಕ್ಕಾಗಿ ತೆರಳಿದ್ದರು. ಅಲ್ಲಿ, ಅಮೀರನಾದ ದೋಸ್ತ್ ಮಹಮ್ಮದನು ಬರ್ನ್ಸ್ ಸಾಹೇಬನನ್ನು ಮಾನಮರ್ಯಾದೆಗಳಿಂದ ಸ್ವೀಕರಿಸಿ ಒಂದು ತಿಂಗಳಾಗುವುದರಲ್ಲೆ, ಅತ್ತ ರಷ್ಯದ ಪ್ರತಿನಿಧಿ ಬಂದನು. ಬರ್ನ್ಸನು ಕೊಟ್ಟ ಶರ್ತಗಳು ದೋಸ್ತ್ ಮಹಮ್ಮದನಿಗೆ ಸ್ವೀಕೃತವಾಗಲಿಲ್ಲ. ದೋಸ್ತ್ ಮಹಮ್ಮದನ ಸುಲಭ ಶರ್ತಗಳಾದರೂ ನಮ್ಮ ಗವರ್ನರ್ ಜನರಲರಿಗೆ ಒಪ್ಪಿಗೆಯಾಗಲಿಲ್ಲ. ದೋಸ್ತ್‌ನಿಗೆ ರೇಗಿತು. ಬರ್ನ್ಸನನ್ನು ಆಸ್ಥಾನದಿಂದ ಹೊರತಳ್ಳಿದನು. ಬ್ರಿಟಿಷ್ ಮುತ್ಸದ್ದಿತನವು ಅಲ್ಲಿ ಮುಗಿಯಿತು. ೧೯೩೮ನೇ ಎಪ್ರಿಲ್ ತಾ. ೨೫ರಲ್ಲಿ ಬರ್ನ್ಸನು ಕಾಬೂಲಿನಿಂದ ಹಿಂದೂದೇಶಕ್ಕೆ ಮರಳಿಬಂದನು. ಗವರ್ನರ್ ಜನರಲ ಆಕ್ಲೆಂಡನು ಅಫಘಾನರ ಮೇಲೆ ಯುದ್ಧ ಸಾರಿದನು.

೧೮೩೮ರಲ್ಲಿ, ರಣಜಿತಸಿಂಘ, ಶಹಾಶೂಜಾ (ಅಫಘಾನದ ಹಿಂದಣ ಅಮೀರ, ದೇಶಭ್ರಷ್ಟ) ಮತ್ತು ಬ್ರಿಟಿಷ್ ಸರಕಾರ-ಇವರೊಳಗೊಂದು ಒಪ್ಪಂದವಾಯಿತು. ಮೂವರೂ ಅಫಘಾನಸ್ಥಾನದ ಮೇಲೆ ದಂಡೆತ್ತಿಹೋಗಿ, ಕಾಬೂಲು ಸಿಂಹಾಸನವನ್ನು ದೋಸ್ತ್‌ನಿಂದ ಕಿತ್ತುತೆಗೆದು ಶಹಾಶೂಜನಿಗೆ ಕೊಡಿಸುವುದೆಂದಾಯಿತು. ಬಂಗಾಳದಿಂದ ಬ್ರಿಟಿಷರ ೧೯,೦೦೦ ಸೈನ್ಯವು ಈ ಬಗ್ಗೆ, ಫಿರೋಜಪುರಕ್ಕೆ ಬಂತು. ಮೂವರ ಸೈನ್ಯಗಳೂ ಒಟ್ಟಾಗಿ ಅಫಘಾನಸ್ಥಾನದ ಮೇಲೆ, ೧೮೩೮ನೇ ಅಕ್ಟೋಬರ ತಾ. ೧ರಲ್ಲಿ ದಂಡೆತ್ತಿಹೋದುವು.

ಏನು ನಾಚಿಕೆಗೇಡು! ಈ ಸೈನ್ಯವೆಲ್ಲಾ ಹೇಳ ಹೆಸರಿಲ್ಲದಂತೆ, ಅಫಘಾನಸ್ಥಾನದಲ್ಲಿ ಮಡಿದುಬಿತ್ತು. ಕೆಲವೇ ಮಂದಿ ಸೈನಿಕರು ಹೇಗೋ ತಲೆಮರೆಸಿಕೊಂಡು ಬಂದು, ಅಲ್ಲಿಯ ಭೀಕರ ಚರಿತ್ರವನ್ನು ಇಲ್ಲಿ ನಿವೇದಿಸಿದರು!

೧೮೩೮ರಲ್ಲಿ, ದಕ್ಷಿಣದಲ್ಲಿ, ಕರ್ನೂಲ್ ನವಾಬನು ಬ್ರಿಟಿಷರಿಗೆದುರಾಗಿ ದಂಗೆಯೆದ್ದನು. ಮದರಾಸಿನಿಂದ, ನವಾಬನ "ಶಿಕ್ಷೆ"ಗಾಗಿ ಸೈನ್ಯಬಂತು. ಆತನ ಕೋಟೆಕೊತ್ತಳಗಳು ಹೋದುವು. ನವಾಬನೂ ಸಿಕ್ಕಿಬಿದ್ದನು. ಆತನನ್ನು ತ್ರಿಚಿನಾಪಳ್ಳಿಗೆ ಕಳುಹಿದರು. ಅಲ್ಲಿ, ಮುಸ್ಲಿಂ ಧೂರ್ತನೊಬ್ಬನು ನವಾಬನನ್ನು ತಿವಿದು ಕೊಂದನಾಗಿ ಚರಿತ್ರೆಯು ಹೇಳುತ್ತದೆ.

೧೮೩೮ರಲ್ಲಿ, ಸಾವಂತವಾಡಿಯ ಅರಸು ಖೇಮ ಸಾವಂತನು, ತನ್ನ ಸಂಸ್ಥಾನವನ್ನು ಬ್ರಿಟಿಷರಷ್ಟು ಚೆನ್ನಾಗಿ ತನ್ನಿಂದ ಆಳಲಾಗುವುದಿಲ್ಲವೆಂಬ ದೌರ್ಬಲ್ಯವನ್ನು ಪ್ರಕಟಿಸಿ, ಅದರ ಆಡಳಿತವನ್ನು ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಿಕೊಟ್ಟು, ಅಲ್ಪಸ್ವಲ್ಪವಾಗಿ ಉಳಿದ ದೇಶದ ಸ್ವಾತಂತ್ರ್ಯದ ಮತ್ತೊಂದು ಕೀಲನ್ನು ಮುರಿದು ಹಾಕಿದನು! ಆತನ ಅಪೇಕ್ಷೆಯಂತೆ ಆ ಸಂಸ್ಥಾನಕ್ಕೆ, ಬ್ರಿಟಿಷ್ ಆಫೀಸರನ ನೇಮಕವಾಯಿತು!

೧೮೩೮ನೇ ನವಂಬರ ತಾ. ೨[illegible]ರಲ್ಲಿ, ಕೊಲ್ಹಾಪುರ ಸಂಸ್ಥಾನಾಧೀಶ ಬಾವಾ ಸಾಹೇಬನು ಮರಣಹೊಂದಲು, ಆತನ ಪುತ್ರ ಶಿವಾಜಿಯನ್ನು, ಇತರರ ರಿಜೆನ್ಸಿ ಅಧಿಕಾರದಲ್ಲಿ ಪಟ್ಟಕ್ಕೇರಿಸಿದರು. ಈ ಆಡಳಿತವು ಸರಿಯಲ್ಲವೆಂದು ತೋರಿ, ದಾಜಿ ಕೃಷ್ಣಪಂಡಿತನೆಂಬ ಒಬ್ಬ ಬ್ರಾಹ್ಮಣನನ್ನು ಮಂತ್ರಿಯಾಗಿ ನೇಮಿಸಲಾಯಿತು. ಜನರು ತೃಪ್ತಿಹೊಂದಿದರು.

೧೮೩೮ನೇ ಜುಲೈ ತಾ. ೯ರಲ್ಲಿ, ಬೊಂಬಾಯಿ ಪ್ರಾಂತ್ಯದ ಗವರ್ನರರಾಗಿದ್ದ ಸರ್ ಚಾರ್ಲ್ಸ್ ಗ್ರಾಂಟ್‌ರವರು, ಅಪಸ್ಮಾರದಿಂದ ಕಾಲವಾದರು. "ಈಸ್ಟ್ ಇಂಡಿಯಾ ಕಂಪೆನಿಯ ಚರಿತ್ರ"ವನ್ನು ಮೊದಲಾಗಿ ಲಿಖಿಸಿದ ಗವರ್ನರರು ಇವರು.


೧೮೩೮ರಲ್ಲಿ, "ವಂದೇಮಾತರಂ" ಗೀತೆದ ರಚಯಿತರಾದ, ಪ್ರಖ್ಯಾತ ಕಾದಂಬರೀಕಾರ ಬಂಕಿಂಚಂದ್ರ ಚತರ್ಜಿಯವರು ಜನಿಸಿದರು. ೧೮೩೮ನೇ ಜೂನ್ ತಾ. ೨೬ರಲ್ಲಿ ಇವರ ಜನನ; ಈಸ್ಟ್ ಇಂಡಿಯಾ ಕಂಪೆನಿಯ ಕೈಕೆಳಗೆ ಒಬ್ಬ ಡಿಪ್ಯುಟಿ ಕಲೆಕ್ಟರರಾಗಿದ್ದ ಯಾದವಚಂದ್ರ ಚತರ್ಜಿ ಎಂಬವರು ಬಂಕಿಮರ ತಂದೆ. ಬಂಕಿಂ ಚಂದ್ರರು ಪ್ರಾಥಮಿಕ ಶಿಕ್ಷಣವನ್ನು ಹಳ್ಳಿಯಲ್ಲಿ ಪಡೆದು, ಮುಂದೆ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಬಿ. ಎ. ಡಿಗ್ರಿಯನ್ನು ತನ್ನ ೨೦ನೇ ವಯಸ್ಸಿನಲ್ಲಿ ಪಡೆದರು. ಆ ವಿಶ್ವವಿದ್ಯಾಲಯದಲ್ಲಿ ಆ ಡಿಗ್ರಿಪಡೆದ ಮೊದಲನೆ ತಂಡದವರಲ್ಲಿ ಇವರು ಒಬ್ಬರು. ಇವರು ಹಲವು ಕಾದಂಬರಿಗಳನ್ನು ಬರೆದಿರುವರು. ಇವುಗಳಲ್ಲಿ ಎಲ್ಲವೂ ಕನ್ನಡಕ್ಕೆ ತರ್ಜುಮೆಯಾಗಿವೆ. ಹಾಗೆಯೇ ಹಿಂದೂದೇಶದ ಅನೇಕ ಪ್ರಾಮುಖ್ಯ ಭಾಷೆಗಳಲ್ಲೂ ಇಂಗ್ಲಿಷಿನಲ್ಲೂ ಇವರ ಗ್ರಂಥಗಳು ತರ್ಜುಮೆಮಾಡಲ್ಪಟ್ಟಿವೆ. "ವಂದೇಮಾತರಂ" ತವು, ಬಂಕಿಮರು ರಚಿಸಿದ ಂದಮಠ"ವೆಂಬ ಗ್ರಂಥದಲ್ಲಿದೆ.

೧೮೩೮ರ ಕೊನೆಯಲ್ಲೆ, ಏಡನ್ ಬಂದರವನ್ನು ವಶಪಡಿಸುವ ಹಂಚಿಕೆಯೂ, ಕಾರ್ಯಾರಂಭವೂ [illegible]ಯಿತಾಗಿ [illegible] ಹೇಳುತ್ತಿ[illegible] ೧೮೩೮ನೇ ದಶಂಬರದಲ್ಲಿ ಈಸ್ಟ್ ಇಂಡಿ[illegible] ಕಂಪೆನಿಯವರ ಐದು ಹಡಗುಗಳು [illegible] "[illegible]ಜ್"-"ಕ್ರೂಸರ್" ಇವೆರಡು ಯುದ್ಧಹಡಗುಗಳೊಂದಿಗೆ, ಕಮಾಂಡರ್ ಹೈನ್ಸ್‌ರವರ ಮುಂದಾಳುತನದಲ್ಲಿ ಬ್ರಿಟಿಷ್ ಸೈನ್ಯವು ಏಡನಿನ ಮೇಲೆ ಯುದ್ಧ ಹೂಡಲು ಹೊರಟಿತು. ೧೮೩೯ನೇ ಜನವರಿ ಕೊನೆಗೆ, ಯುದ್ಧವು ಮುಗಿದು, ಏಡನ್ ಬಂದರವು ಬ್ರಿಟಿಷರ ವಶವಾಯಿತು.

೧೮೩೮ನೇ ವರುಷವು ಹಿಂದೂದೇಶದಲ್ಲಿನ ದಾರಿದ್ರ್ಯ, ಕ್ಷಾಮ, ದೇಶದ್ರೋಹಿಗಳ ಜೀವನ, ದೇಶದ ಸ್ವತಂತ್ರಾಪಹರಣ, ಬ್ರಿಟಿಷ್ ರಾಜನೀತಿಯ ಜಯ-ಇವುಗಳ ಚಿತ್ರವನ್ನು ಮಾತ್ರ ಉಳ್ಳುದಾಗಿದೆ. ಇದೀಗ ೧೯೩೮! ಇಂದಿನ ಚಿತ್ರವೇನು? ನೋಡುತ್ತಿರುವಿರಷ್ಟೆ!

ಅಧ್ಯಾಪಕರು

ಬ್ರಿಟಿಷ್ ಇಂಡಿಯದಲ್ಲಿ ೩೨೦,೦೦೦ ಮಂದಿ ಪ್ರಾಥಮಿಕ ಅಧ್ಯಾಪಕರಿರುವರು. ಇವರಲ್ಲಿ ೩೫,೦೦೦ ಹೆಂಗುಸರು, ೧೬೦,೦೦೦ ಮಂದಿ ಟ್ರೈನಿಂಗ್ ಇಲ್ಲದವರು.



ಸ್ವರ್ಗಸುಖ!

[ಲೇಖಕರು:—ಶ್ರೀ। ಅ. ನ. ಕೃಷ್ಣರಾಯರು, ಸಂಪಾದಕರು: 'ವಿಶ್ವವಾಣಿ' ಬೆಂಗಳೂರು.]

ಎಲ್ಲ ಸಂಸ್ಥೆಗಳು ತಮ್ಮವು, ಎಲ್ಲ ಮತಗಳು ತಮ್ಮವು ಎಂದು ಭಾವಿಸಿಕೊಂಡು ನಡೆಕೊಳ್ಳುತ್ತಿದ್ದ ರಾಯರು; ವಿಧಿಯು ಅವರನ್ನೂ ಬಿಡದೆ, ಒಯ್ದನು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲು ಸಭೆ ಜರಗಿತು. ಸಭೆ ಮುಗಿಯುವ ಹೊತ್ತಿಗೂ ರಾಯರು ಸ್ವರ್ಗದ ಬಾಗಿಲು ಸೇರುವ ಹೊತ್ತಿಗೂ ಸರಿಹೋಯಿತು. ರಾಯರು ನೋಡಿದರು: ಎಲ್ಲೆಲ್ಲಿಯೂ ಹೂವಿನ ಅಲಂಕಾರ, ಬಾಗಿಲಲ್ಲಿ ಸ್ವಾಗತ ಬಯಸುವ ದೊಡ್ಡ ಹಲಗೆ . . . . .

೧.

ಭಾರತ ವರ್ಷವನ್ನು ನೋಡಲು ವಿದೇಶಗಳಿಂದ ಬರುವ ಪ್ರವಾಸಿಗಳು ಹಿಮಾಲಯಾ, ತಾಜಮಹಲು, ಗಾಂಧಿಯವರುಗಳನ್ನು ನೋಡಿದರೆ ನಮ್ಮ ಯಾತ್ರೆ ಸಫಲವಾಯಿತೆಂದು ಭಾವಿಸುವರು. ಹಾಗೆಯೇ ಭಾಗ್ಯನಗರಕ್ಕೆ ಬರುತ್ತಿದ್ದ ಪ್ರವಾಸಿಗಳು ನಗರಮಧ್ಯದಲ್ಲಿದ್ದ ಗಡಿಯಾರದ ಕಂಬ ಊರಿನ, ಸುಂದರ ಉಪವನ, ಅಣ್ಣಾಸ್ವಾಮಿರಾಯರುಗಳನ್ನು ನೋಡಿದರೆ ತಮ್ಮ ಯಾತ್ರೆಯ ಪೂರ್ಣ ಫಲ ದೊರೆಯಿತೆಂದು ಭಾವಿಸುತ್ತಿದ್ದರು. ಒಂದೊಂದು ವೇಳೆ ಕಾರ್ಯಬಾಹುಳ್ಯದಿಂದ ಗಡಿಯಾರದ ಕಂಬವನ್ನೂ ಉಪವನವನ್ನೂ ನೋಡದೆ ಹೋದರೂ ಅವರಷ್ಟು ದುಃಖಿಸುತ್ತಿರಲಿಲ್ಲ. ಆದರೆ ಅಣ್ಣಾಸ್ವಾಮಿರಾಯರ ದರ್ಶನ ದೊರೆಯದೆ ಹೋದರೆ ಅವರ ದುಃಖವು ಅಪಾರವಾಗಿ ಬಿಡುತಿತ್ತು.

ಧರ್ಮಪ್ರಕಾಶ ರಾವ್‌ಬಹದ್ದೂರ್ ಗೂಳೂರು ಅಣ್ಣಾಸ್ವಾಮಿರಾಯರೆಂದರೆ ಭಾಗ್ಯನಗರಕ್ಕೆ ಭಾಗ್ಯಪ್ರಾಯರಾಗಿದ್ದರು. ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದಿದ್ದರೂ ಸಾವಿರ ರೂಪಾಯಿ ಸಂಬಳದ ಸರಕಾರಿ ಹುದ್ದೆಯನ್ನು ಮಾಡಿ, ವಿರಾಮವೇತನ ಸಿಕ್ಕಿದನಂತರ ಸಾರ್ವಜನಿಕ ಜೀವನಕ್ಕೆ ನುಗ್ಗಿ ಅದನ್ನು ಕೈಸೆರೆ ಹಿಡಿದಿದ್ದರು. ಕೆಲವು ವರುಷ ಪೌರಸಭೆಯ ಅಧ್ಯಕ್ಷರಾಗಿ ದುಡಿದು ಕೀರ್ತಿಯನ್ನೂ ರಾವ್ ಬಹದ್ದೂರ್ ಗಿರಿಯನ್ನೂ ಸಂಪಾದಿಸಿಕೊಂಡಿದ್ದರು. ಆಸ್ಪತ್ರೆ, ಅನ್ನಸತ್ರ, ಪಿಂಜರಾ ಪೋಲ್, ವೇದಾಂತ ಪ್ರವರ್ತಕ ಸಭೆಯೇ ಮೊದಲಾದ ಅನೇಕ ಉದಾತ್ತ ಸಂಸ್ಥೆಗಳಿಗೆ ಧಾರಾಳವಾಗಿ ಸಹಾಯಮಾಡಿ ಚಿರಸ್ಥಾಯಿಯಾದ ಕೀರ್ತಿಯನ್ನೂ ಧರ್ಮಪ್ರಕಾಶ ಬಿರುದನ್ನೂ ದೊರಕಿಸಿಕೊಂಡಿದ್ದರು.

ಸಾರ್ವಜನಿಕ ಸಂಪ್ರೀತಿಗೆ ಧರ್ಮಪ್ರಕಾಶರು ಸಂಪೂರ್ಣ ಬಾಧ್ಯರಾಗಲಿಕ್ಕೆ ಮತ್ತೊಂದು ಮುಖ್ಯ ಕಾರಣವಿತ್ತು. ಸ್ವಾಮಿ ಶ್ರೀ ರಾಮತೀರ್ಥರಂತೆ ರಾಯರು ಎಲ್ಲ ಸಂಸ್ಥೆಗಳೂ ತಮ್ಮವು, ಎಲ್ಲ ಮತಗಳೂ ತಮ್ಮವು, ಎಲ್ಲ ಧರ್ಮಗಳೂ ತಮ್ಮವು ಎಂದು ಭಾವಿಸಿಕೊಂಡು ಎಲ್ಲಾ ಸಂಸ್ಥೆಗಳೊಂದಿಗೆ ಒಂದಲ್ಲ ಒಂದು ರೀತಿಯನ್ನು ಸಂಬಂಧವನ್ನು ಸ್ಥಾಪಿಸಿಕೊಂಡಿದ್ದರು. ರಾಮಕೃಷ್ಣಾಶ್ರಮದ ಬಳ್ಳಿಯನ್ನು ಭಾಗ್ಯನಗರದಲ್ಲಿ ಸ್ಥಾಪಿಸಲು ಸ್ವಾಮಿ ಶಿವಾನಂದರು ಬಂದಿದ್ದಾಗ ಅವರಿಗೆ ಎಲ್ಲಾ ರೀತಿಯಲ್ಲಿಯೂ ಸಹಾಯಮಾಡಿದವರೇ ರಾಯರು. ಡಾಕ್ಟರ್ ಜೋನ್ಸ್ ಅವರೆಂಬ ಕ್ರೈಸ್ತಪಾದ್ರಿಗಳ ಉದ್ದಾಮ ಭಾಷಣಗಳ ಸಭೆಗಳಲ್ಲಿ ಅಧ್ಯಕ್ಷತೆ ವಹಿಸಿ ಕ್ರೈಸ್ತ ಹಿಂದೂ ಧರ್ಮಗಳ ಸಮನ್ವಯವನ್ನು ಬೋಧಿಸಿದ್ದವರೇ ರಾಯರು. ಮೌಲಾನಾ ಮಹಮ್ಮದ್ ಅಲ್ಲಿಗಳೆಂಬ ಮುಸಲ್ಮಾನ ಪಂಡಿತರು ತಮ್ಮ ಮಹಮ್ಮದೀಯ ಚಳವಳಿಯ ಪ್ರಸಾರಕ್ಕೆ ಬಂದಿದ್ದಾಗ ಅವರ ನೆರವಿಗೆ ನಿಂತವರೇ ರಾಯರು, ಬ್ರಹ್ಮಜ್ಞಾನ ಸಮಾಜದ ಡಾಕ್ಟರ್ ಅನಿಬಿಸೆಂಟರು ಭಾಗ್ಯನಗರದಲ್ಲಿ ತಮ್ಮ ಸಮಾಜದ ಶಾಖೆಯಾಗಬೇಕೆಂದು ಸೂಚಿಸಿದಾಗ ಆ ಮಹತ್ಕಾರ್ಯಕ್ಕೆ ಕಂಕಣ ಕಟ್ಟಿದವರೇ ರಾಯರು, ಸಾಧುವಾಸ್ವಾನಿಯವರ "ಶಕ್ತಿಸಂಘ" ಅಮೇರಿಕೆಯ ಸ್ವಾಮಿ ಯೋಗಾನಂದರ "ಸತ್-ಸಂಘ ಸಂಸ್ಥೆ," ಅಂಗರೀಕ ಧರ್ಮಪಾಲರ "ಮಹಾಬೋಧಿ ಸಂಘ", ಋಷಿ ದಯಾನಂದರ "ಆರ್ಯಸಮಾಜ" ರಾಜಾರಾಮಮೋಹನರಾಯರ "ಬ್ರಹ್ಮಸಮಾಜ" ಪ್ರೊಫೆಸರ್ ಇನಾಯಿತ್ ಖಾನರ "ಸೂಫಿ ಸಂಘ" ಮೊದಲಾದ ಅಸಂಖ್ಯಾತ ಸಂಸ್ಥೆಗಳ ಅಸ್ತಿತ್ವವು ಭಾಗ್ಯನಗರದಲ್ಲಿಯುಂಟಾಗಲು ರಾಯರ ಸಾಹಸ, ಔದಾರ್ಯ, ಲೋಕಸೇವಾಕಾಂಕ್ಷೆಗಳೇ ಕಾರಣವೆಂದರೆ ತಪ್ಪಾಗುವುದಿಲ್ಲ.

ನಿರ್ಘೃಣನಾದ, ಪಾಪಿಯಾದ, ಕಠಿಣಾತ್ಮನಾದ ವಿಧಿಯು ಇಂತಹ ಮಹಾನುಭಾವರ ಮೇಲೆಯೂ ತನ್ನ ಪಾಶವೀಬಲವನ್ನು ತೋರಿದನು. ಮನೆಯಲ್ಲಿ ದುಃಖಿಸಲು ಹದಿಮೂರು ಜನ ಮಕ್ಕಳು, ಚಿಕ್ಕವಯಸ್ಸಿನ ಎರಡನೆಯ ಹೆಂಡತಿ, ಮನೆಯ ಹೊರಗೆ ದುಃಖಿಸಲು ಎಲ್ಲಾ ಜಾತಿ, ಮತ, ಪಂಥ, ಕೋಮಿಗೆ ಸೇರಿದ ಭಾಗ್ಯ ನಗರದ ಪ್ರಜೆಗಳನ್ನು ಅಪಾರವಾದ ದುಃಖ ಸಮುದ್ರದಲ್ಲಿ ಕೆಡಹಿ ರಾಯರು ಪರಲೋಕಯಾತ್ರೆ ಮಾಡಿಬಿಟ್ಟರು. ಊರ ಜನರೆಲ್ಲರೂ ಸೇರಿ ಅನ್ಯಾದೃಶ್ಯವಾದ ಭಕ್ತಿಯಿಂದ ರಾಯರ ಕಳೇಬರವನ್ನು ಮೆರವಣಿಗೆ ಮಾಡಿ ರುದ್ರಭೂಮಿಗೆ ಒಯ್ದರು.

೨.

ಅಂದೇ ಸಂಜೆ ನಗರದ ಉಪವನದಲ್ಲಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ದಯೆಪಾಲಿಸೆಂದು ಪ್ರಾರ್ಥಿಸಲು ರಾವ್ ಸಾಹೇಬ್ ಲಕ್ಷ್ಮಣಗೌಡರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಗೌಡರು ಮೊದಲಿನಿಂದಲೂ ರಾಯರ ಸ್ಥಾನಕ್ಕೆ ಬರಬೇಕೆಂದು ಹವಣಿಸುತ್ತಿದ್ದರು. ಅದು ಇಷ್ಟು ವರುಷಗಳ ಮೇಲೆ ದೊರೆಯಲು ತಮ್ಮ ಸ್ಥಾನವನ್ನು ಭದ್ರವಾಗಿ ಆಕ್ರಮಿಸಿಕೊಂಡರು. ಅಧ್ಯಕ್ಷರ ಆರಂಭ ಭಾಷಣವಾದ ಮೇಲೆ ವೇದಮಂತ್ರಗಳನ್ನು ಪಠಿಸಿ ವಿದ್ಯಾವಾಗೀಶ ಮಹಾಮಹೋಪಾಧ್ಯಾಯ, ಉಭಯ ಭಾಷಾವಿಶಾರದ, ಕವಿಕಂಠಾಭರಣ ಮಹದೇವ ಶಾಸ್ತ್ರಿಗಳು ರಾಯರ ಗುಣಗಾನಮಾಡಿ ಆರ್ಯಧರ್ಮಕ್ಕೆ ರಾಯರ ಸ್ವರ್ಗಾರೋಹಣದಿಂದಾದ ಮಹಾ ನಷ್ಟವನ್ನು ನಿರೂಪಿಸಿ ಪಶ್ಚಾತ್ತಾಪ ಪಟ್ಟರು. ಅವರಾನಂತರ ಮೌಲಾನಾ ಹುಸೇನ್ ಅಲ್ಲಿಯವರು ಕುರಾನಿನ ಕೆಲವು ಮಂತ್ರಗಳನ್ನು ಪಠಿಸಿ ಇಸ್ಲಾಂ ಧರ್ಮವು ಎಂತಹ ಸೋದರನನ್ನು ಕಳೆದುಕೊಂಡಿತೆಂಬುದನ್ನು ವಿಸ್ತರಿಸಿ ಹೇಳಿ ಎಲ್ಲರೂ ಸ್ವರ್ಗವಾಸಿಗಳ ಮೇಲ್ಪಂಕ್ತಿಯನ್ನು ಅನುಸರಿಸಿ ಹಿಂದೂ ಮುಸಲ್ಮಾನ್ ಭೇದವನ್ನು ಮನಸ್ಸಿನಲ್ಲಿ ಧರಿಸದೆ ಅನ್ಯೋನ್ಯವಾಗಿರಬೇಕೆಂದು ಬೋಧಿಸಿದರು. ಸಾಹೇಬರ ನಂತರ ರೆವರೆಂಡ್ ಸ್ಮಿತ್‌ರವರು ಬೈಬಲಿನ ಪ್ರಾರ್ಥನೆಯನ್ನು ಪಠಿಸಿ ರಾಯರ ಗುಣಗಾನವನ್ನು ದೀರ್ಘಭಾಷಣದಲ್ಲಿ ಕಳಕಳಿಯ ಹೃದಯದಿಂದ ಮಾಡಿ ರಾಯರ ಹೆಸರಿಗೆ ತಕ್ಕ ಸ್ಮಾರಕವನ್ನು ಮಹಾಜನರು ರಚಿಸಬೇಕೆಂದು ಸೂಚಿಸಿದರು.

ಇನ್ನೂ ಅನೇಕರು ಮಾತನಾಡಿದ ಮೇಲೆ ಎಲ್ಲರೂ ಎದ್ದುನಿಂತು "ರಾಯರ ಆತ್ಮಕ್ಕೆ ಶಾಂತಿದೊರೆಯಲಿ, ಸ್ವರ್ಗದಲ್ಲಿ ಅವರಿಗೆ ಅಮರಾನಂದ ಲಭಿಸಲಿ" ಎಂದು ಪ್ರಾರ್ಥಿಸಿ ಚದುರಿದರು. ಭಾಗ್ಯನಗರದ ಇತಿಹಾಸದಲ್ಲಿ ಆ ಸಭೆಯ ಕಾರ್ಯಕ್ರಮವು ಸುವರ್ಣಾಕ್ಷರಗಳಿಂದ ಬರೆದಿಡತಕ್ಕದ್ದಾಗಿತ್ತು. ಜನತೆಯು ತಾವು ಏನು ಮಾಡಿದರೂ ಏನು ಆಡಿದರೂ ಅಣ್ಣಾಸ್ವಾಮಿರಾಯರು ಹಿಂದಕ್ಕೆ ಬರುವುದಿಲ್ಲ ಎಂಬುದನ್ನು ನೆನೆದು ದುಃಖವನ್ನು ಮರೆಯಲೆತ್ನಿಸಿದರು.

ಸಭೆ ಮುಗಿಯುವ ಹೊತ್ತಿಗೂ ರಾಯರು ಸ್ವರ್ಗದ ಬಾಗಿಲು ಸೇರುವ ಹೊತ್ತಿಗೂ ಸರಿಹೋಯಿತು. ತಮ್ಮ ಕಣ್ಣುಮುಂದಿನ ನೋಟವನ್ನು ತಾವೇ ನಂಬಲಾರದಾದರು. ಎಲ್ಲೆಲ್ಲಿಯೂ ಹೂವಿನ ಅಲಂಕಾರ, ಬಾಗಿಲಿನಲ್ಲಿ ಸ್ವಾಗತ ಬಯಸುವ ದೊಡ್ಡ ಹಲಗೆ, ಲಕ್ಷದೀಪೋತ್ಸವ ಇವಲ್ಲದೆ ಬಗೆಬಗೆಯ ರೂಪಿನ, ಅಂದಚೆಂದದ ಉಡುಗೆತೊಡುಗೆಯ ಕೋಟ್ಯಾಂತರ ಜನರು ಸ್ವಾಗತ ಬಯಸಲು ನೆರೆದಿದ್ದರು. ರಾಯರು ತಮ್ಮ ಚಟ್ಟವನ್ನು ಬಿಟ್ಟು ಇಳಿದೊಡನೆಯೇ ಭೇರಿ ನಿನಾದವಾಯಿತು, ವಾದ್ಯಘೋಷವಾಯಿತು, ಮಂತ್ರಘೋಷವಾಯಿತು, ವಂದಿಮಾಗದರ ಸ್ತುತಿಪಾಠವಾಯಿತು. ಹಿಂದೂಧರ್ಮದ ಪ್ರತಿನಿಧಿಯಾಗಿ ಸಾಕ್ಷಾತ್ ಧರ್ಮಾವತಾರನೇ ದಯೆಮಾಡಿಸಿದ್ದನು. ಕ್ರೈಸ್ತ ಧರ್ಮದ ದೂತನಾಗಿ ಗಾಬ್ರಿಯಲ್ಲನು ಸಿದ್ಧವಾಗಿದ್ದನು. ಇಸ್ಲಾಂ ಧರ್ಮದ ಪ್ರವಾದಿಯಾಗಿ ಇಸ್ರೇಯಿಲನು ಆಗಮಿಸಿದ್ದನು. ಪ್ರತಿಯೊಬ್ಬರೂ ಉತ್ತಮ ರಥ ಪಲ್ಲಕ್ಕಿಗಳನ್ನು ಜತೆಯಲ್ಲಿಯೇ ಕರೆತಂದಿದ್ದರು.

ಸ್ವಾಗತ ಭಾಷಣಗಳಾದವು. ಧರ್ಮಾವತಾರನು ತಾನು ತಂದಿದ್ದ ಶ್ವೇತಾಶ್ವರಥವನ್ನು ತೋರುತ್ತಾ "ದಯಮಾಡಿಸಬೇಕು" ಎಂದನು. ಆ ಕ್ಷಣವೇ ಗಾಬ್ರಿಯಲ್ಲನು ತಾನು ತಂದಿದ್ದ ಮುತ್ತಿನ ಪಲ್ಲಕ್ಕಿಯ ಕಡೆ ಕೈತೋರಿ "ಹಾಗಲ್ಲಾ ಹೀಗೆ ದಯೆಮಾಡಿಸಬೇಕು" ಎಂದನು. ಇಸ್ರೇಯಿಲನು ಹಚ್ಚ ಹಸುರಿನ ತನ್ನ ವಿಮಾನದ ಕಡೆ ಕೈತೋರಿಸುತ್ತಾ, "ಅವರಿಬ್ಬರೂ ಭ್ರಾಂತರು, ತಾವು ಹೀಗೆ ಬರಬೇಕು" ಎಂದು ಪ್ರಾರ್ಥಿಸಿದನು.

ರಾಯರಿಗೆ ಬಹಳ ಕಷ್ಟಕ್ಕೆ ಬಂತು. ವೈಭವ, ಸಂಭ್ರಮ. ಆದರಗಳಲ್ಲಿ ಒಬ್ಬರನ್ನೊಬ್ಬರು ಮೀರಿಸಿದ್ದರು. ಆದರೆ ತಾವು ಯಾರ ಸಂಗಡ ಹೋಗುವುದು? ರಾಯರು ಯೋಚಿಸುತ್ತಲೇ ಇರಲು ಅವರ ಧರ್ಮಸಂಕಟವನ್ನರಿತ ಧರ್ಮಾವತಾರನು "ಗಾಬ್ರಿಯಲ್, ಇಸ್ರೇಯಿಲ್ ಪ್ರವಾದಿ ಮಹಾಶಯರೇ ರಾಯರು ಹುಟ್ಟಿದ್ದು ಹಿಂದೂ ಧರ್ಮ, ಬೆಳೆದು ಸ್ವರ್ಗಕ್ಕೆ ಬಂದಿರುವುದೂ ಹಿಂದೂ ಧರ್ಮದಿಂದ, ನೀವು ಹೀಗೆ ಗಲಭೆಮಾಡಿ ಅವರನ್ನು ತೊಂದರೆಗೀಡು ಮಾಡುವುದು ನ್ಯಾಯವಲ್ಲ" ಎಂದು ಹೇಳಿದನು.

ಗಾಬ್ರಿಯಲ್ಲನು ಅರೆಮುನಿಸಿನಿಂದ ತನ್ನ ಮೊಂಡು ಗಡ್ಡವನ್ನು ಉಜ್ಜುತ್ತಾ,

"ರಾಯರು ಸರ್ವಧರ್ಮ ಸಮನ್ವಯ ಕರ್ತರು. ಅವರ ಮೇಲೆ ನಿಮ್ಮ ಹಿಂದೂ ಧರ್ಮದ ಅಧಿಕಾರವೇನೂ ನಡೆಯುವ ಹಾಗಿಲ್ಲ" ಎಂದು ಹೇಳಿದನು.

ಇಸ್ರೇಯಿಲನು "ಇಬ್ಬರ ಜಗಳ ಮೂರನೆಯವನಿಗೆ ಲಾಭ" ಎಂಬುದನ್ನು ಜ್ಞಾಪಿಸಿಕೊಂಡು "ಹಾಗಲ್ಲಾ ಮಹಾಶಯರೇ, ನಮ್ಮ ಭಕ್ತರ ಶಕ್ತಿ, ಯೋಗ್ಯತೆ ನಿಮ್ಮ ಭಕ್ತರದಕ್ಕಿಂತಲೂ ಬಹಳ ಹೆಚ್ಚು. ನಮ್ಮ ಹುಸೇನ್ ಅಲಿಗಳೇನು ಸಾಮಾನ್ಯರೆಂದು ತಿಳಿದಿರುವಿರೇನು? ಅವರುಗಳಿಂದ ನಮಗೆ ಹುಕುಂ ಬಂದಿದೆ. ನಮ್ಮ ಕರ್ತವ್ಯವನ್ನು ನಾವು ಪಾಲಿಸಲು ಅಡ್ಡಿ ಬರಬೇಡಿ" ಎಂದು ಹೇಳಿ ವಿಮಾನ ನಡೆಸುವವನಿಗೆ ಕಣ್ಣು ಸಂಜ್ಞೆಮಾಡಿದನು. ಅವನು ವಿಮಾನವನ್ನು ತಂದು ರಾಯರ ಪಕ್ಕದಲ್ಲಿ ನಿಲ್ಲಿಸಿದನು. ಇದು ಉಳಿದಿಬ್ಬರನ್ನು ಬಹಳ ಕೆರಳಿಸಿತು. ಇಬ್ಬರೂ ಅಸ್ಪಷ್ಟವಾಗಿ ಇಸ್ರೇಯಿಲನನ್ನು ಬಯ್ಯುತ್ತಾ ಅವನ ಮೇಲೆ ಬಿದ್ದರು. ಮೂವರಲ್ಲಿಯೂ ಹೊಡೆದಾಟ ಪ್ರಾರಂಭವಾಯಿತು. ರಾಯರು ಈ ವಿನೋದವನ್ನು ಬಹಳ ವಿಷಾದದಿಂದ ನೋಡುತ್ತಾ ನಿಂತಿದ್ದರು.

ಎಷ್ಟು ಹೊತ್ತಿಗೂ ಜಗಳ ಮುಗಿಯುವ ಸಂಭವವೇ ಕಾಣಬರಲಿಲ್ಲ. ರಾಯರು ಮಧ್ಯೆ ಬಂದರು. ಸಲ ಜಗಳ ಬಿಡಿಸಲು ಪ್ರಯತ್ನಿಸಿದರು. ಅವರಿಗೇ ಏಟುಗಳು ಬೀಳಲು ಮೂಗು ಕಣ್ಣುಗಳನ್ನು ಒರಸಿಕೊಳ್ಳುತ್ತಾ ಒಂದು ಕಡೆ ನಿಂತರು. ಜಗಳ ಬಲಿಯುತ್ತಾ ಬಂತು, ರಾಯರಿಗೆ ಬೇಸರವಾಗುತ್ತಾ ಬಂತು. ಕೆಳಗೆ ಬಿದ್ದಿದ್ದ ಗಾಬ್ರಿಯಲ್ಲನ ಕೊಂಬನ್ನು ತೆಗೆದುಕೊಂಡು ಗಟ್ಟಿಯಾಗಿ ಊದಿದರು. ಮೂವ್ವರೂ ಅದರ ಧ್ವನಿಗೆ ಎಚ್ಚೆತ್ತು ಜಗಳವನ್ನು ನಿಲ್ಲಿಸಿದರು. ರಾಯರು ಮೂವರಿಗೂ ಸಮಾಧಾನ ಹೇಳುತ್ತಾ "ಹೀಗೆಲ್ಲಾ ವ್ಯಾಜ್ಯವಾದರೆ ಏನು ಪ್ರಯೋಜನ ಮಹಾನುಭಾವರೇ. ನಿಮ್ಮ ನಿಮ್ಮಲ್ಲಿಯೇ ನಿಶ್ಚಯಿಸಿ ಹೇಳಿ ನಾನು ಯಾರೊಂದಿಗೆ ಬರಬೇಕೆಂಬುದನ್ನು" ಎಂದು ರಾಯರು ಶಾಂತವಾಗಿ ನುಡಿದರು. "ನಮ್ಮ ಜತೆ–ನಮ್ಮ ಜತೆ–ನಮ್ಮ ಜತೆ" ಎಂದು ಕೋಲಾಹಲವು ಆರಂಭವಾಯಿತು. ಮತ್ತೆ ಅದರಿಂದ ಹಾಲಾಹಲವು ಹುಟ್ಟೀತೆಂದು ರಾಯರು "ಹಾಗಾದರೆ ನಾನೊಂದು ನಿರ್ಧಾರ ಹೇಳುತ್ತೇನೆ. ಹಾಗೆ ಮಾಡೋಣವೇ?"

"ಆಗಬಹುದು" ಎಂದು ಎಲ್ಲರೂ ಹೇಳಿದರು.

"ನಿಮ್ಮಲ್ಲಿ ಇಬ್ಬರು ಇಬ್ಬರು ಜತೆ ಹಾಕಿಕೊಂಡು ಕದನವಾಡಿ. ಮೊದಲಿನ ಜತೆಯಲ್ಲಿ ಗೆದ್ದವರು ಉಳಿದವನೊಂದಿಗೆ ಕದನವಾಡಬೇಕು. ಕೊನೆಯಲ್ಲಿ ಯಾರು ಉಳಿಯುತ್ತಾರೆಯೋ ಅವರೊಂದಿಗೆ ನಾನು . . . ."

"ಆಗಬಹುದು, ಆಗಬಹುದು. ಆಗಬಹುದು" ಎಂದು ಜಟ್ಟಿಗಳು ಸಿದ್ಧರಾದರು. ರಾಯರು ಚೀಟಿಗಳನ್ನು ಬರೆದು ಪಕ್ಕದಲ್ಲಿ ನಿಂತಿದ್ದ ಒಬ್ಬ ಹುಡುಗನ ಕೈಯಲ್ಲಿ ಎತ್ತಿಸಿ ಧರ್ಮಾವತಾರನಿಗೂ, ಗಾಬ್ರಿಯಲ್ಲನಿಗೂ ಜತೆಬಿಟ್ಟರು. ಕದನವು ತಾಮಸವಾಗಿಯೇ ಆರಂಭವಾದರೂ ಬರಬರುತ್ತ ಬಹಳ ಭೀಕರವಾಗುತ್ತ ಬಂದಿತು. ಇಬ್ಬರಿಗೂ ಹದಿನೆಂಟು ಅಹೋರಾತ್ರಿಗಳು ಯುದ್ಧವಾಯಿತು. ಇಬ್ಬರ ಮೈಕೈ, ಕಣ್ಣುಮೂಗುಗಳಿಂದ ರಕ್ತದ ಚಿಲುಮೆ ಚಿಮ್ಮಿತು. ಹದಿನೆಂಟನೆಯ ದಿವಸ ಯಾವುದೋ ಮಾಯೆಯಲ್ಲಿ ಗಾಬ್ರಿಯಲ್ಲನು ಧರ್ಮಾವತಾರನನ್ನು ಹೊಡೆದುಬಿಟ್ಟಿದ್ದನು. ಅವನ ಪಕ್ಷವೆಲ್ಲಾ ಗಗನವನ್ನು ಭೇದಿಸುವಂತೆ ಜಯಜಯಕಾರಮಾಡಿತು.

ಮಾರನೆಯ ದಿವಸ ಗಾಬ್ರಿಯಲ್ಲನಿಗೂ, ಇಸ್ರೇಯಿಲನಿಗೂ ಜತೆಬಿದ್ದಿತು. ಹದಿನೆಂಟು ದಿವಸ ಕಾಳಗವಾಡಿದ್ದ ಗಾಬ್ರಿಯಲ್ಲನನ್ನು ಮೂರೇ ದಿವಸಗಳಲ್ಲಿ ಇಸ್ರೇಯಿಲನು ಸೋಲಿಸಿ ಹಣ್ಣುಹಣ್ಣು ಮಾಡಿಬಿಟ್ಟನು. ಅವನು ಪೆಚ್ಚುಮೋರೆ ಹಾಕಿಕೊಂಡು ಒಂದುಕಡೆ ನಿಂತನು. ಇಸ್ರೇಯಿಲನ ಪಕ್ಷದವರು ಗಂಟಲು ಕಿತ್ತು ಬರುವಂತೆ ಜಯಜಯಕಾರ ಕೂಗಿದರು. ಗೆಲುವಿನ ಸುಮ್ಮಾನದಲ್ಲಿ ಇಸ್ರೇಯಿಲನ ಹೃದಯ ಹಿಗ್ಗಿಹೋಯಿತು.

ರಾಯರು ಇಸ್ರೇಯಿಲನನ್ನು ಈಗ ಅನುಸರಿಸಿ ಹೋಗಲೇಬೇಕಾಯಿತು. ಈ ದೇವದೂತರ ನಡೆನುಡಿಯನ್ನು ನೋಡಿದ್ದ ರಾಯರಿಗೆ ಹೊಸಬಲ ಬಂದಂತಾಗಿತ್ತು. ರಾಯರು ಏನೋ ಯೋಚಿಸುತ್ತಿರಲು ಇಸ್ರೇಯಿಲನು ವಿಜಯೋನ್ಮತ್ತತೆಯಿಂದ "ರಾಯರೇ ಹೊರಡಿ ಇನ್ನೇತಕ್ಕೆ ತಡಾ" ಎಂದನು. ಅವನ ದರ್ಪ, ಅಧಿಕಾರವಾಣಿ ರಾಯರ ರಕ್ತವನ್ನು ಕುತಕುತ ಕುದಿಸಿತು. ಆದರೆ ತಾವು ಕೋಪಮಾಡಿಕೊಂಡರೆ ಕೆಲಸ ಕೆಡುವುದೆಂದು "ಅಯ್ಯ, ನೀನೇನೋ ಮಹಾವೀರನೇ ಸರಿ. ಆದರೆ ನನ್ನನ್ನು ಕರೆದುಕೊಂಡು ಹೋಗುವಷ್ಟು ವೀರನೆಂದಿಗೂ ಅಲ್ಲ" ಎಂದು ಮೂದಲಿಸಿದರು. ಇಸ್ರೇಯಿಲನಿಗೂ ರೇಗಿತು. ಈ ಬಡ ಮರ್ತ್ಯಲೋಕದ ಪ್ರಾಣಿ ತನ್ನ ಮೇಲೆ ಅಧಿಕಾರ ತೋರಿಸುವನಲ್ಲಾ ಎಂದು ರೇಗಿತು. ಇಸ್ರೇಯಿಲನು ಕಪಟ ಸೌಜನ್ಯ ನಸುನಗೆಗಳನ್ನು ತೋರಿಸುತ್ತಾ,

"ರಾಯರೇ, ನಾವು ಸ್ವರ್ಗನಿವಾಸಿಗಳು. ಸ್ವರ್ಗೀಯ ದ್ರಾಕ್ಷಾರಸವನ್ನು ಕುಡಿದು ಅಮರರಾಗಿರುವವರು. ನಮ್ಮ ಮೇಲೆ ಸ್ಪರ್ಧೆಹೂಡುವಷ್ಟು ಬಲ್ಮೆ ನಿಮ್ಮಲ್ಲಿದೆಯೇ?"

"ಇಸ್ರೇಯಿಲ್, ನೀವು ಸ್ವರ್ಗೀಯ ದ್ರಾಕ್ಷಾರಸವನ್ನು ಕುಡಿದು ಅಮರರಾಗಿದ್ದರೆ ನಾವು ಮರ್ತ್ಯಲೋಕದ ಮಹಾಪಾನೀಯ ಕಾಫಿಯನ್ನು ಕುಡಿದು ಮೃತ್ಯುಂಜಯರಾಗಿದ್ದೇವೆ. ನೀನು ಬಹಳ ಸೊಕ್ಕಿನವನ ಹಾಗೆ ಕಾಣುವೆ. ಆ ಬಡ ದೇವದೂತರನ್ನು ಗೆದ್ದೆನೆಂದು ಹಿಗ್ಗುತ್ತಿರುವೆ. ನನ್ನ ಮೇಲೆ ಕದನಹೂಡಿ ಗೆದ್ದರಲ್ಲವೇ ನಿನ್ನ ಬಲ್ಮೆಯು ಹೊರಪಡುವುದು."

"ಹಾಗೇನು?"

ಎಂದು ಬಟ್ಟೆಕಳಚಿ ಇಸ್ರೇಯಿಲನು ಕಾಳಗಕ್ಕೆ ನಿಂತನು. ರಾಯರೂ ಇಳಿದರು. ಅವನ ಆಜಾನುಬಾಹುವಾದ ವಜ್ರಕಾಯದ ಮುಂದೆ ತಮ್ಮ ದೇಹವು ಅಸ್ಥಿಪಂಜರದ ಹಾಗಿದ್ದುದನ್ನು ಕಂಡು ರಾಯರಿಗೆ ಮೊದಲು ಭಯವಾಯಿತು. ಇಸ್ರೇಯಿಲನು ತೊಡೆತಟ್ಟಿ ರಾಯರ ಕುತ್ತಿಗೆಗೆ ಕೈಹಾಕಿದ. ರಾಯರೂ, ಕೈಹಾಕಿದರು. ಎವೆಮುಚ್ಚುವುದರೊಳಗಾಗಿ ಕದನವು ಮುಗಿದೇ ಹೋಗಿತ್ತು. ರಾಯರು ಇಸ್ರೇಯಿಲನ ಎದೆಯ ಮೇಲೆ ಕುಳಿತು ಸವಾರಿಮಾಡುತ್ತಿದ್ದರು. ಅವನು ತ್ರಾಹಿ-ಬೇಡುತ್ತಾ ಹಾಹಾಕಾರ ಮಾಡುತ್ತಿದ್ದನು. ರಾಯರು ದಯೆಗೊಂಡು ಅವನನ್ನ ಬಿಟ್ಟು ಎದ್ದುನಿಂತರು. ಮೂವ್ವರು, ಪ್ರವಾದಿಗಳ ಪರಿವಾರವೂ ರಾಯರ ಜಯಜಯಕಾರವನ್ನು ಕೂಗಿದವು.

೩

ಇಷ್ಟು ಹೊತ್ತಿಗೆ ರಾಯರ ಹೊಟ್ಟೆ ಚುರ್‌ಚುರ್ ಎನ್ನಹತ್ತಿತ್ತು. ಧರ್ಮಾವತಾರನನ್ನು ಜತೆಯಲ್ಲಿ ಕರೆದುಕೊಂಡು ಅವನ ಸ್ವರ್ಗವನ್ನು ಪ್ರವೇಶಿಸಿದರು. ಅಂತಹ ಆಶಾಭಂಗವು ತಮಗೆ ಸಿದ್ಧವಾಗಿರುತ್ತದೆಂದು ರಾಯರು ಯೋಚಿಸಿದ್ದಲ್ಲಿ ಆ ಸ್ವರ್ಗದಲ್ಲಿ ಕಾಲೇ ಇಡುತ್ತಿರಲಿಲ್ಲ. ಒಂದು ಹೋಟಲಿಲ್ಲ, ಒಂದು ಆಯುಷ್ಕರ್ಮ ಶಾಲೆಯಿಲ್ಲ, ಒಬ್ಬ ಲಾಯರ್ ಅಂಗಡಿಯಿಲ್ಲ, ಒಬ್ಬ ಡಾಕ್ಟರ್ ಮಳಿಗೆಯಿಲ್ಲ, ಜನಗಳು ಕಣ್ಣು ಕೂಡ ಮಿಟುಕಿಸದೆ. ಓಡಿಯಾಡುತ್ತಿದ್ದುದನ್ನು ನೋಡಿ ರಾಯರು 'ಇದೇನು ತಮಾಷೆ ಬಂಗಲೆ'ಯೋ ಎಂದುಕೊಂಡರು. ಒಬ್ಬರ ಮುಖದಲ್ಲಿಯೂ ಜೀವಕಳೆಯಿಲ್ಲ. ಯಾರನ್ನು ನೋಡಿದರೂ, ತಾವು ಗ್ಲೋಬ್ ಸಿನೀಮಾ ಮಂದಿರದಲ್ಲಿ ನೋಡುತ್ತಿದ್ದ ಗ್ರೇಟಾಗಾರ್ಬೋಳ ಅಭಿನಯದ ಜ್ಞಾಪಕ ತರುತ್ತಿದ್ದವು. ರಾಯರು ಧರ್ಮಾವತಾರನನ್ನು ಕುರಿತು—

"ನಿಮಗೆ ಹಸಿವೇ ಆಗುವುದಿಲ್ಲವೋ?"

"ಇಲ್ಲ."

"ಹಾಗಾದರೆ ನೀವೆಲ್ಲಾ 'ವಿಂಕಾರ್ನಿಸ್‌ವೈನ್' (Wincarnis wine) ತೆಗೆದುಕೊಳ್ಳುವುದು ಒಳ್ಳೆಯದು."

"ನಾವು ಒಂದು ಬಗೆಯ ದ್ರಾಕ್ಷಾರಸವನ್ನು ಕುಡಿದಿರುವುದಕ್ಕೆ ನಮಗೆ ಹಸಿವು ಬಾಯಾರಿಕೆಗಳೊಂದೂ ಆಗುವುದಿಲ್ಲ. ಎಲ್ಲಿ, ತೆಗೆದುಕೊಂಡು ಬನ್ನಿ."

ಧರ್ಮಾವತಾರನು ಒಂದು ಪಾತ್ರೆಯಲ್ಲಿ ಅಮೃತವನ್ನು ತಂದಿತ್ತನು. ರಾಯರು ಬೆರಳದ್ದಿ ರುಚಿನೋಡಿ ಮುಖವನ್ನು ಹುಳಿಹುಳಿಮಾಡಿಕೊಂಡರು. ಅದನ್ನು ನೋಡಿ ಧರ್ಮಾವತಾರನು.

"ಏಕೆ? ರುಚಿಸುವುದಿಲ್ಲವೇ?"

"ಥೂ! ಶುದ್ಧ ಹುಳಿಹೆಂಡ ಇದ್ದ ಹಾಗಿದೆ. ಎಷ್ಟು ದಿವಸದ್ದು ಇದು?"

"ಕಲ್ಪಾಂತರದ್ದು; ಹಿಂದೆ ದೇವದಾನವರು ವಾಸುಕಿಯನ್ನೆ ಹಗ್ಗಮಾಡಿಕೊಂಡು, ಹಿಮವತ್ಪರ್ವತವನ್ನೇ ಕಡೆಗೋಲು ಮಾಡಿಕೊಂಡು ಸಮುದ್ರವನ್ನು ಕಡೆದರಲ್ಲಾ, ಆಗ ಹುಟ್ಟಿದ್ದು."

"ಅಯ್ಯೋ ಮೂರ್ಖರಿರಾ" ಈ ಹುಳಿಹೆಂಡಕ್ಕೆ ಇಷ್ಟೊಂದು ಕಾದಾಡಿದಿರಾ! ನಮಗೆ ತಿಳಿಸಿದ್ದರೆ ವೂಡ್ಲಿ (Woodly) ಕಂಪೆನಿಗೆ ಹೇಳಿ ಸೊಗಸಾದ "ಪೋರ್ಟಿಲೊ" ಮಾಡಿಸಿ ನೀವು ಕುಡಿಯುವಷ್ಟು ಕಳುಹಿಸುತ್ತಿದ್ದೆವಲ್ಲಾ. ಅದು ಇರಲಿ! ನಿಮ್ಮ ರಂಭೆ ಮೇನಕೆ ಊರ್ವಶಿ ಇವರೆಲ್ಲಾ ಏನಾದರು!"

"ಅವರ ಸುದ್ದಿ ಬೇಡಿ ಸ್ವಾಮಿ..."

"ಏಕೆ?"

"ಸ್ವರ್ಗಕ್ಕೇ ಅಪಕೀರ್ತಿ ತಂದರು."

"ಹೇಗೆ?"

"ನಮ್ಮ ಸ್ವರ್ಗಾಧಿಪತಿ ಅವರನ್ನು ಕಾರ್ಯಾರ್ಥವಾಗಿ ಭೂಲೋಕಕ್ಕೆ ಕಳುಹಿಸಿದರೆ ಶುಕಮಹರ್ಷಿಯಲ್ಲಿ ರಂಭೆ ಅನುರಕ್ತಳಾದಳು. ಆ ಮಹಾಮುನಿ ಅವಳನ್ನು ತಿರಸ್ಕರಿಸಲು ಅವಳಿಗೆ ಹುಚ್ಚು ಹಿಡಿದು ಯಾವುದೋ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವಳಂತೆ. ಮೇನಕೆಯು ಹಾಗೆಯೇ! ಒಬ್ಬ ಗಡ್ಡದ ಜೋಗಿಗೆ ಗಂಟುಬಿದ್ದು ಸ್ವರ್ಗವನ್ನೇ ತ್ಯಜಿಸಿದಳು. ಆ ಊರ್ವಶಿಯಂತೂ ನಟಿಯೇ ಸರಿ. ವಿಕ್ರಮನೊಂದಿಗೆ ಸಂಸಾರಮಾಡಿಕೊಂಡು, ಮನೆ ತುಂಬ ಮಕ್ಕಳು ಹೆತ್ತುಕೊಂಡಿರುವಳು."

"ಸರಿ ಹಾಗಾದರೆ, ನಿಮ್ಮ ಸ್ವರ್ಗದಲ್ಲಿ ಏನು ಇಲ್ಲವಲ್ಲಾ ಧರ್ಮಾವತಾರರೇ?"

ಎಂದು ರಾಯರು ಬೇಸರಪಟ್ಟುಕೊಂಡು ಇಸ್ರೇಯಿಲನೊಂದಿಗೆ ಹೊರಟರು. ಉಮರಖಯ್ಯಾಂಕವಿಯ "ರುಭಾಯತ್," ನಿಜಾಮಿಕವಿಯ "ಲೈಲಾ-ಮಜನು," ಪೆಮಿಕನಿಯ "ಸುಲೇಮಾನ್ ಬಿಲ್ಕೈಸ್" ಇವುಗಳಿಂದ ರಾಯರಿಗೆ ಮುಸಲ್ಮಾನರ ಸ್ವರ್ಗದಲ್ಲಿ ನಿಜವಾದ ಸುಖವಿರುತ್ತದೆ ಎಂಬ ಕಲ್ಪನೆಯಿತ್ತು. ರಾಯರು ಅವರ ಸ್ವರ್ಗವನ್ನು ಪ್ರವೇಶಿಸಿದಾಗ ಸಹಸ್ರಾರು ಮಾಲ್ವ ಮುಲ್ಲಾ ಉಲೇಮಾಗಳು "ನವಾಜಿಗೆ" ಕುಳಿತಿದ್ದರು. ತೇಜಸ್ವಿಯೊಬ್ಬನು ಅವರ ಮುಂದೆ ಕುಳಿತು" ತಾನು "ನವಾಜಿ" ನಲ್ಲಿ ಮಗ್ನನಾಗಿದ್ದನು. ರಾಯರು ಇಸ್ರೇಯಿಲನನ್ನು ಕುರಿತು,—

"ಮೊದಲಲ್ಲಿ ಇರುವ ಅವರು ಯಾರು?"

"ಅವರೇ ಹಜರತ್ ಮುಹಮ್ಮದರು (ಅವರ ಆತ್ಮಕ್ಕೆ ಶಾಂತಿಯಿರಲಿ)" ಎಂದನು.

ರಾಯರು ನಿಂತಲ್ಲಿಯೇ ಹಜರತ್ತರಿಗೆ ಕೈಮುಗಿದರು. ನವಾಜು ಮುಗಿಯಲೆಂದು ಕುಳಿತರು. ಯಾವ ಜನ್ಮಕ್ಕೂ ಅದು ಮುಗಿಯುವ ಸಂಭವವೇ ಕಾಣಲಿಲ್ಲ, ರಾಯರಿಗೆ ಹಸಿವು ಕ್ಷಣಕ್ಷಣಕ್ಕೂ ಹೆಚ್ಚುತ್ತಿತ್ತು.

"ಇಸ್ರೇಯಿಲ್, ಈ ನವಾಜು ಮುಗಿಯುವುದು ಯಾವಾಗ?"

"ಪ್ರಳಯ ಬಂದಾಗ."

"ನಿಮ್ಮ ದ್ರಾಕ್ಷಾವನಗಳೂ, 'ಸಾಕಿ'ಯರೂ, ಸುರಸುಂದರಿಯರೂ ಎಲ್ಲಿ?"

"ರಾಯರೇ, ಅದೆಲ್ಲಾ ಉಮರ್ ಖಯ್ಯಾಂ, ಹಾಫಿಜ್, ನಿಜಾಮಿಯವರ ಕಾವ್ಯಗಳಲ್ಲಿ. ಸ್ವರ್ಗವೆಂದರೆ ಭೋಗ ಮಂದಿರವಲ್ಲ, ಯೋಗಮಂದಿರ."

"ಸರಿ ಹಾಗಾದರೆ, ಬಂದ ಕೆಲಸ ವಾಯಿತು."

ಎಂದು ಗಾಬ್ರಿಯಲನೊಂದಿಗೆ ಹೊರಟರು. ಕ್ರಿಸ್ತರ ಸ್ವರ್ಗದ ಬಾಗಿಲಿನಲ್ಲಿಯೇ ಒಂದು ದೊಡ್ಡ ಹಲಗೆ ನೇತು ಹಾಕಿತ್ತು.

"ಇಲ್ಲಿ ನೋವಿಲ್ಲ, ಹಸಿವಿಲ್ಲ, ತೃಷೆಯಿಲ್ಲ, ಭೂತಕಾಲದ ಸ್ಮರಣೆಯಿಲ್ಲ, ಭವಿಷ್ಯದ ಭಯವಿಲ್ಲ, ಜ್ಞಾನದ ಲೋಪವಿಲ್ಲ, ಕೆಟ್ಟ ಯೋಚನೆಗಳ ಚಿಂತೆಯಿಲ್ಲ, ಅವಿವೇಕವಿಲ್ಲ, ವಕ್ರವ್ಯವಹಾರವಿಲ್ಲ, ಅಪಚಾರದ ವ್ಯಥೆಯಿಲ್ಲ, ತಿರಸ್ಕೃತ ಪ್ರಣಯವಿಲ್ಲ, ಘಾತಿಸಿದ ವಿಶ್ವಾಸವಿಲ್ಲ, ಕ್ರೋಧವಿಲ್ಲ, ಸ್ಪೃಹೆಯಿಲ್ಲ, ಈರ್ಷೆಯಿಲ್ಲ, ಪರರ ಬಗ್ಗೆ ಅಸಂತೋಷವಿಲ್ಲ, ಸುಳ್ಳು, ಮೋಸ, ಕಪಟ, ವಂಚನೆ, ಆಂತಕ್ಷ್ಯಾಪ, ಪಶ್ಚಾತ್ತಾಪಗಳಿಲ್ಲ, ಬಿಟ್ಟಾರೆ ಪಾಪವಿಲ್ಲ, ಅದನ್ನು ಹಿಂಬಾಲಿಸುವ ಬಾಧೆಯೂ ಇಲ್ಲ"

ಎಂದು ಅದರ ಮೇಲೆ ಬರೆದಿತ್ತು. ರಾಯರು ಸಾವಕಾಶವಾಗಿ ಹಲಗೆಯನ್ನು ಓದಿ,—

"ಏನು? ಎಲ್ಲಾ "ಇಲ್ಲ ಇಲ್ಲ"ಗಳ ಸಂತೆ, ಇರುವುದೇನೂ ಹೇಳೇ ಇಲ್ಲ. ಒಂದು ಹೋಟೆಲ್ ಇದೆಯೇನಯ್ಯಾ?"

"ಇಲ್ಲಾ ರಾಯರೇ."

"ಒಂದು ಸಿನೀಮಾ."

"ಅದೂ ಇಲ್ಲ."

"ಕೊನೆಗೊಂದು ಸೋಡಾ ಸ್ಟೇಷನ್."

"ಅದೂ ಇಲ್ಲ ಸ್ವಾಮಿ."

"ಬಹಳ...ಬಹಳ ಹಿಂದುಳಿದಿದ್ದೀರಿ. ಕ್ರೈಸ್ತ ಧರ್ಮವನ್ನು ಅನುಸರಿಸುವ ಲಂಡನ್, ಪ್ಯಾರಿಸ್, ಬರ್ಲಿನ್, ಚಿಕಾಗೋ ಮೊದಲಾದ ದೇಶಗಳನ್ನು ನೋಡಿ ಕೊಂಚ ಬುದ್ಧಿ ಕಲಿಯಬಾರದೇ?"

ಎಂದು ಹೇಳಿ ಈ ಸ್ವರ್ಗಗಳ ಸುಖಗಳನ್ನು ನೆನೆದು ಅಸಹ್ಯಪಟ್ಟುಕೊಂಡರು. "ಈ ಸುಖವನ್ನು ಉಪಭೋಗಿಸುವುದಕ್ಕೆ ಮರ್ತ್ಯರು ಎಷ್ಟು ವ್ರತ, ಎಷ್ಟು ಪೂಜೆ, ಎಷ್ಟು ಮಠಗಳು, ಎಷ್ಟು ಸನ್ಯಾಸಿಗಳನ್ನು ಆಶ್ರಯಿಸುತ್ತಾರೆ" ಎಂದುಕೊಂಡು—

"ಗಾಬ್ರಿಯಲ್, ಭಾಗ್ಯನಗರಕ್ಕೆ ರೈಲು ಎಷ್ಟು ಹೊತ್ತಿಗೆ ಹೊರಡುತ್ತದಯ್ಯ."

"ರೈಲು ಇಲ್ಲ. ನೀವು ಹೋಗಲಿಚ್ಛಿಸಿದರೆ ಯೋಗಶಕ್ತಿಯಿಂದ ಕಳುಹಿಸಿಕೊಡುತ್ತೇವೆ."

"ನನ್ನ ಅಷ್ಟು ಮಾಡಿದರೆ ತುಂಬಾ ಉಪಕಾರವಾಗುತ್ತೆ. ಮನೆಗೆ ಹೋಗಿ ಹೊಟ್ಟೆ ತುಂಬ ಊಟಮಾಡಿ ಮಲಗುತ್ತೇನೆ." ಎಂದು ಹೇಳಿದರು.

ರಾಯರು ಊರೇನೋ ತಲುಪಿದರು. ಆದರೆ ಅವರ ಆಶೆ ಈಡೇರಲಿಲ್ಲ. ಊಟಮಾಡುವುದಕ್ಕೆ ಎರಡು ವರುಷವಾದರೂ ಕಾಯಬೇಕಾಗಿ ಬಂತು. ಅದನ್ನೂ ಅವರಷ್ಟು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಆದರೆ ತಮ್ಮ ಮಗನ ಹೊಟ್ಟೆಯಲ್ಲಿ ಹುಟ್ಟಿ ಅವನನ್ನು "ಅಪ್ಪಾ" ಎಂದೂ, ತಮ್ಮ ಸೊಸೆಯನ್ನೆ "ಅಮ್ಮಾ" ಎಂದು ಕರೆಯಬೇಕಲ್ಲಾ ಎಂದು ವ್ಯಥೆಪಟ್ಟುಕೊಂಡರು. ಮರ್ತ್ಯಲೋಕದ ಸುಖಕ್ಕಾಗಿ ಅದನ್ನೂ ಮರೆಯಲು ಸಿದ್ಧರಾಗಿದ್ದರು. ಆದರೆ ತಮ್ಮ ಹೆಂಡತಿಯನ್ನೇ "ಅಜ್ಜೀ" ಎಂದು ಕರೆದು ಆಕೆಯಿಂದ "ಕಂದಾ" ಎನ್ನಿಸಿಕೊಳ್ಳಬೇಕಲ್ಲಾ ಎಂದು ಬಹಳ ದುಃಖಪಟ್ಟುಕೊಂಡರು.

ಕರ್ಮಸಿದ್ಧಾಂತ ರಾಯರ ನೆರವಿಗೆ ಬಂದು ನಿಂತಿತು. "ಇದೇ ನನ್ನ ಪ್ರಾರಬ್ಧ ಕರ್ಮ" ಎಂದುಕೊಂಡು ಸಮಾಧಾನ ಹೊಂದಿದರು.

(ಸದ್ಯದಲ್ಲೆ ಪ್ರಕಟವಾಗುವ ಶ್ರೀಯುತರ "ಕಾಮನ ಸೋಲು" ಕಥಾಸಂಗ್ರಹದಿಂದ.)

ಗಾಳಿಪಟ

ಗಾಳಿಪಟದ ಆಟವು ಇಂದು ನಿನ್ನೆಯದಲ್ಲ. ಅಸಂಖ್ಯಾಕ ವರುಷಗಳಿಂದ, ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಇತ್ತು. ಇಂದಿಗೂ ಈ ಆಟವು ಕೆಲಕಡೆಗಳಲ್ಲಿ, 'ಆಟ'ವೆನ್ನುವುದಕ್ಕಿಂತ "ಯುದ್ಧ"ವೆನ್ನುವಷ್ಟಕ್ಕೆ ವಿಶೇಷ ರೀತಿಯಲ್ಲಿ ಜರಗುತ್ತಿದೆ. ಜಪಾನಿನಲ್ಲಿ, ಪ್ರಾಯಸ್ಥರು ಕೂಡ, ಸುಮಾರು ೪೦ ಅಡಿ ಎತ್ತರ—೨೦ ಅಡಿ ಅಗಲದ ದೊಡ್ಡ ಪಟಗಳನ್ನು ಮಾಡಿ, ದೊಡ್ಡ ಬಿದಿರುಗಳಿಂದ ಕಟ್ಟಿ, ಹಾರಾಡಿಸುವರು. ಇಂತಹ ಪಟವು ಸುಮಾರು ೧೬೦೦ ರಾತಲು ಭಾರವಿರುತ್ತದೆ. ಕಬ್ಬಿಣದ ಸರಿಗೆಯ ಮೂಲಕ ಇದನ್ನು ಹಾರಿಸುತ್ತಾರೆ. ಈ ಸರಿಗೆಗಳಿಗೆ ಇತರ ಹಗ್ಗಗಳನ್ನೂ ಕಟ್ಟುವರು. ಇಂತಹ ಪಟಗಳನ್ನು ಹಾರಿಸಲು ವರ್ಷ ಗಟ್ಟಳೆಯ ಅನುಭವವು ಬೇಕಾಗುತ್ತದೆ. ಜಪಾನಿನ ಹೊಜುಬಾನಾ ಎಂಬ ದೇವಾಲಯದವರು ಇಂತಹ ಗಾಳಿಪಟ ಹಾರಿಸುವ ಹಬ್ಬವನ್ನು ವರ್ಷಂಪ್ರತಿ ಜರಗಿಸುವರು.

ನಮ್ಮ ಕೆಲೆಂಡರ್

ನಮ್ಮಲ್ಲಿ ಇಂಗ್ಲಿಷ್ ಕೆಲೆಂಡರು ಹೆಚ್ಚಾಗಿ ಬಳಕೆಯಲ್ಲಿದೆ. ಹಾಗೆಯೇ ಪೃಥ್ವಿಯ ಇತರ ಭಾಗಗಳಲ್ಲಿ ಬೇರೆ ಬೇರೆ ಕೆಲೆಂಡರುಗಳೂ ಶಕಗಳೂ ಇದ್ದರೂ ವ್ಯವಹಾರದಲ್ಲಿ ಪ್ರಪಂಚಕ್ಕೆಲ್ಲ "ಇಸವಿಯ" ಕೆಲೆಂಡರೇ ಇದೆ. ಹೀಗೆ ಒಂದೇ ಬಗೆಯ ಕೆಲೆಂಡರು ಇರುವುದರಿಂದ, ವ್ಯಾಪಾರ ವಹಿವಾಟುಗಳಿಗೆ ಎಲ್ಲರಿಗೂ ಅನುಕೂಲವಾಗಿದೆ. ಈ ಕೆಲೆಂಡರಿನ ಮೂಲವು ರೋಮ್ ನಗರದಲ್ಲಾಯಿತು. ರೋಮನ್ನು ಸ್ಥಾಪಿಸಿದ ರೊಮುಲಸನು, ಕ್ರಿಸ್ತಪೂರ್ವ ೭೫೩ರಲ್ಲಿ ಇದನ್ನಾರಂಭಿಸಿದನು. ಅನಂತರ ಹಲವು ಮಾರ್ಪಾಟುಗಳಾಗಿ, ಯೇಸುಕ್ರಿಸ್ತನ ಜನನದಿಂದಿತ್ತ, ವರ್ಷಗಳ ಎಣಿಕೆಯಾಯಿತು. ಇದೇ ನಮ್ಮ ಕೆಲೆಂಡರಿನ "ಕ್ರಿಸ್ತಶಕ."



ಕೆಲೆಂಡರ್ ಬೇಟೆ!

ಐನೂರು—ಏಳುನೂರು—ಸಾವಿರದ ವರೆಗೆ ಕೆಲೆಂಡರುಗಳನ್ನು ಕೂಡ ಹಾಕಿದವರಿದ್ದಾರೆ. ಒಂದು ಕೆಲೆಂಡರಿಗಾಗಿ ಐನೂರು ರೂಪ್ಯಾ ವ್ಯಾಪಾರ ಮಾಡುವವರೂ ಇರಬಹುದು. ಆದರೆ, ಅರ್ಧಾಣೆ ವ್ಯಾಪಾರ ಮಾಡಿಯೂ ಕೆಲೆಂಡರ್ ಕೇಳುವವರಿದ್ದಾರೆ. ನಿಮ್ಮ ಮುಂದಿರುವ ಪ್ರತಿಯೊಬ್ಬನೂ ಕೆಲೆಂಡರ್ ಜೇಡ!

ಇದು ನನ್ನ ಪ್ರಾರ್ಥನೆ.

ಭರತಮಾತೆಯೇ,–

"ನಿನ್ನುದರದಲ್ಲಿ ಜನ್ಮಕೊಡು!

ಧರಿಸಲೆನಗೆ ಚಿಂದಿಬಟ್ಟೆಯಿರಲಿ!

ಕನಕಾನ್ನ ಬೇಡವೌ!

ಆದರೆ,–

ಆನೆಕಾಲು ಭಯ ಮತ್ತು ಕೆಲೆಂಡರ್ ಜೇಡವಿಲ್ಲದ ಸ್ಥಳ ಬೇಕಪ್ಪ!"

ನಮ್ಮ ನೆರೆಕರೆಯವರಿಗೆಲ್ಲಾ "ಆನೆ ಕಾಲು." ಪ್ರವಾದ ವಶಾತ್ ನಾನೊಂದು ದಿನ ತಣ್ಣೀರು ಕುಡಿದು ಮುಗಿದಾಗ, ನಮ್ಮ ಅತ್ತೆಯ ಪ್ರತಿರೋಧ "ಅಯ್ಯಯ್ಯೋ! ಹೀಗೆ ಮಾಡಬಹುದೇ? ಕಾಲು . . . .!" ಎಂದಳು. ಮುಂದಿನ ತಿಟ್ಟುಗಳು ನಾನು ಹೇಳಬೇಕೆಂಟಿಗೆ ಬೇಕಾದುದಿಲ್ಲ. ಅಂದಿನಿಂದ ಪ್ರತಿ ರಾತ್ರೆ, ಬೆಳಗಿನ ತನಕ ನನ್ನ ಕಾಲುಗಳನ್ನು ಮುಟ್ಟಿ ನೋಡಿ ಎಷ್ಟು ಬೆಳೆದಿವೆ ಎಂದು ನೋಡುತ್ತೇನೆ! ಬೆಳಗ್ಗಿನ ರಾತ್ರೆ ತನಕ . . .

. . . . ಆದರೆ ಪ್ರಸ್ತುತ ವಿಚಾರ. ಕಳೆದೊಂದು ತಿಂಗಳಿಂದ, ಮೂವತ್ತು ರಾತ್ರಿಗಳನ್ನು, ಆ ರಾಜಮ್ಮಗಳ ಸ್ವಪ್ನದಲ್ಲಿ ಕಳೆವುದಕ್ಕಿಂತಲೂ ಹೆಚ್ಚಿನ ಸಂಕಟವು, ಹಗಲಲ್ಲಿ ಪ್ರಾಪ್ತವಾಗುತ್ತಿದೆ. ಮಧ್ಯಾಹ್ನ ಹನ್ನೆರಡರ ತನಕ ಕಾದಿದ್ದರೂ ಗಿರಾಕಿಯೂ ಕಾಣಲಿಲ್ಲವೇಕೆ ಎಂದು ಆಶ್ಚರ್ಯಪಡುತ್ತಿರುವಾಗಲೆಲ್ಲ, ಬೀದಿಯಾಚೆಯ ಏಕಕ್ಕೇರಿಯಾ ಕೈಲ್ಲೆ ಹಿಡಿದಿದ್ದಲ್ಲಿ ಇದು ಹಿಮಪಕ್ಕೊಂದು ಕೈ ಉಂಟು ಎಂದು ತೋರುತ್ತಿರುವಂತೆ ಕೆಲೆಂಡರ್ ಬೇಟೆಗಾರರು ಬಂದು, ಕಿಸಕ್ಕನೆ ಹಲ್ಲು ಕಿರಿದು ನಗು ನಕ್ಕು, "ಕೆಲೆಂಡರ್ ಇಲ್ಲವೆ?" ಎಂದು ಕೇಳುವರು. ರಾಜಮ್ಮಗಳಾದರೋಟೆಪ್ರೂಂತ ಜಲಾಶಯದ ಪತಾರದಲ್ಲಿ (ಉಸಿರುಕಟ್ಟಿ ಈ ಶಬ್ದವನ್ನೋದಿದರೆ ಅರ್ಥವಾಗುತ್ತದೆಂದು ಸೂಚನೆ) ಒಂದು ದಿನ ಫಕ್ಕನೆ ತಣ್ಣೀರು ಕುಡಿದುದು ಯಾವ ತಾರೀಕಿನಲ್ಲೆಂದು ಗುರುತು ಹಾಕಿಡುವಷ್ಟಕ್ಕೆ ಒಂದು ಕೆಲೆಂಡರ್ ನನ್ನೊಡನೆ ಇಲ್ಲ, ಯಾರೂ ಕೊಟ್ಟುದೂ ಇಲ್ಲ. ಹೀಗಿದ್ದಾಗ, "ಕೆಲೆಂಡರ್ ಇಲ್ಲವೇ?" ಎಂದು ಕೇಳುವವರಿಗೆ ಏನೆನ್ನಬೇಕು?

ಸುಲಭವಿದೆ–ಎಂದು ನೀವು ಹೇಳಬಹುದು. "ಇಲ್ಲ!" ಎಂದರಾಯಿತು–ಅಲ್ಲವೇ? ಇಲ್ಲ! ನೂರು ಬಾರಿಗೂ ಇಲ್ಲ! "ಇಲ್ಲ"ವೆಂದು ನಾನಂದೆ. ಅದಕ್ಕೆ,—

"ಇಲ್ಲ?"

"ಇಲ್ಲ."

"ಏಕೆ ಇಲ್ಲ?"

"ಇಲ್ಲ!"

"ಮಾಡಿಸಲಿಲ್ಲವೇ?"

"ಇಲ್ಲ."

"ಏನು ಮಾಡಿಸಲಿಲ್ಲ?"

"ಇಲ್ಲ."

"ಕಳೆದ ವರ್ಷ ಮಾಡಿಸಿದ್ದಿರಲಿಲ್ಲವೇ?"

"ಇಲ್ಲ"

"ಮಾಡಿಸಿದ್ದಿರಿ; ನನಗೊಂದು ಕೊಟ್ಟಿದ್ದಿರಿ!"

"ಇಲ್ಲ!"

"ಅದೇನು ಇಲ್ಲ?"

"ಇಲ್ಲ!"

ಕೆಲೆಂಡರ್ ಗಿರಾಕಿ ಅಲ್ಲಿಗೆ ಸೋತನೆಂದು ನಿಮ್ಮ ಎಣಿಕೆ. ಆದರೆ, ಕದಲಲಿಲ್ಲ.

"ಏಕಿಲ್ಲ? ಏಕಿಲ್ಲ? ಏಟ್ಟು ಇಲ್ಲ?" ಎಂದ.

"ಇಲ್ಲ" ಎಂದೆ.

"ನಿಮಗೆ ಬೇರೆ ಭಾಷೆಬಾರದೇ?" (ನಗುತ್ತ!)

"ಇಲ್ಲ." (ನಗದೆ!)

"ನೀವೇನು ಇಂದು "ಇಲ್ಲ"ದ ಜಗಳಕ್ಕೆ ಹೊರಟಿದ್ದೀರಿ?"

"ಇಲ್ಲ."

"ಈ 'ಇಲ್ಲ'ವನ್ನು ಮುಗಿಸಿ, ಒಂದು ಕೆಲೆಂಡರ್ ಕೊಟ್ಟುಬಿಡಿ."

"ಇಲ್ಲ."

ನಿಮಗೆ ವಿಶೇಷ ಕಾಣಬಹುದು, ನಾನಂದು ಸುಮಾರು ಮೂವತ್ತು ಇಲ್ಲಗಳನ್ನು ಒಪ್ಪಿಸಿಗೇ ಸಲಿಸಿದೆ. ಅವುಗಳನ್ನು ಆತ ತಣ್ಣಗೆ ಸ್ವೀಕರಿಸಿ, "ನಿಮಗೇನೋ ವಿನೋದ. ಇರಲಿ, ನಾಳೆ ಬರುವೆನು!" ಎಂದು ಹೇಳಿ ಹೋದ. ಹಾಗಾದರೆ, "ಇಲ್ಲ"ಗಳಿಂದ ಕೆಲೆಂಡರ್ ಬೇಟೆಯನ್ನು ತಪ್ಪಿಸಲಾಗದು!

ಗಿರಾಕಿ ಇಲ್ಲದಿದ್ದರೂ ಕೆಲೆಂಡರ್ ಗಿರಾಕಿಗಳಿರುವರೆಂದು ಕೌತುಕಗೊಂಡು, ಮಧ್ಯಾಹ್ನದ ಊಟಕ್ಕೆ ಹೊರಟೆ. ದಾರಿಯಲ್ಲೆಲ್ಲ ಯೋಚನೆ. ಅಷ್ಟರಲ್ಲೆ ದಬ್ಬನೆ ಬೆನ್ನಿಗೊಂದು ಗುದ್ದು ಬಿತ್ತು. ಹೌಹಾರಿ, ಹಿಂದೆ ನೋಡಿದೆ. ಒಂದು ವಿಚಿತ್ರ ವ್ಯಕ್ತಿ! ಇತಿಹಾಸಪೂರ್ವದ ಪ್ರಾಣಿಯ ಶೇಷವೆಂದು ಉಳಿದ ಆ ರಾಜಮ್ಮಗದಂತೆ ಬೆಳೆದು, ಆ ಪ್ರಾಣಿಯಂತೆ ತಾನೂ ಶ್ಮಶ್ರುವಿಹೀನನಾಗಿ, ಸೊಂಡಿಲಿನ ಜದಲಾಗಿ ಒಂದು ಕಾಗದದ ಸುರುಳಿಯನ್ನು ಬಾಯಿಗೆ ಹಿಡಿದು "ಫು ಫು ಫು" ಎನ್ನುತ್ತ ನಗುತ್ತಿದ್ದ ಮಾರಾಯ! ನಾನು ಆತನನ್ನೂ ಅವನು ನನ್ನನ್ನೂ ಚೆನ್ನಾಗಿ ನೋಡಿದೆವು. ನನಗರ್ಥವಾಗಲಿಲ್ಲ.

"ಏಕೆ ಹೊಡೆದಿರಿ? ನಾನೇನಾದರೂ ಮಾಡಿದ್ದೇನೆಯೇ, ಅನ್ಯಾಯ?"

"ಸಾಕು ಬಿಡಿ, ಗುರುತಿಲ್ಲವೇ?"

"ಇಜಿಪ್ಟ್ . . . . "

"ಅಲ್ಲ!"

"ಇಜಿಪ್ಟ್ . . . . "

"ಅಲ್ಲ, ಅಲ್ಲ!"

"ಇಜಿಪ್ಟ್ ಪಿರಮಿಡ್ಡನ್ನು ನೋಡಿದಷ್ಟೆ ಆಶ್ಚರ್ಯವಾಗಿದೆ" ಎಂದು, ಒಂದೇ ಬಾರಿ ಊದಿಬಿಟ್ಟೆ.

ವ್ಯಕ್ತಿ ನನ್ನೆದೆ ಒಡೆವಷ್ಟು ಗಟ್ಟಿಯಾಗಿ ನಕ್ಕು, ಒಡೆಯದೆ ಉಳಿದ ಎದೆಯ ಭಾಗವನ್ನು ಚೂರುಮಾಡಲು ಧಢ್ಢೆಂದು, ಸುರುಳಿಮಾಡಿದ ಕೆಲೆಂಡರಿನಿಂದ ನನ್ನ ಎದೆಯ ಮೇಲೆ ಹೊಡೆಯುತ್ತ, "ಗೊತ್ತಿಲ್ಲವೆ . . . . ಶಿಬ್ಬು!" ಎಂದಿತು.

"ಶಿಬ್ಬು?" ನನಗಾಶ್ಚರ್ಯ! "ಯಾವ ಶಿಬ್ಬು?"

"ಶಿಬ್ಬು ಗೊತ್ತಿಲ್ಲವೇ?"

"ಅದೊಂದು ತರಕಾರಿಯೇ?"

"ಛೇ. ಶಿಬ್ಬು ಎಂದರೆ ನಾನು!"

"ನೀವು!"

"ಅಹುದು ನಾನೇ! ಹೇಗಿದ್ದಿರಿ ನೀವು?"

"ಇದ್ದೇನೆ."

"ಹೇಗೆ ವ್ಯಾಪಾರ?"

"ಆಗುತ್ತಿದೆ."

"ಒಳ್ಳೆದು. ಮತ್ತೇನು ವಿಶೇಷ?"

"ಏನಿಲ್ಲ."

"ನೀವು ಕೆಲೆಂಡರ್ ಮಾಡಿಸಲಿಲ್ಲವೇ?"

"ಇಲ್ಲ."

"ನನಗೆ ಕೊಟ್ಟಿಲ್ಲ."

"ನಾನು ಮಾಡಿಸಿಲ್ಲ, ಆದ ಕಾರಣ ಕೊಟ್ಟಿಲ್ಲ, ಬೇರೆ ಕಡೆಯಿಂದ ನನಗೆ ದೊರೆತಿಲ್ಲ, ನಾನಾಗಿ ಹೋಗಿ ಎಲ್ಲಿಯೂ ಕೇಳಿಲ್ಲ, ಈ ವರುಷಕ್ಕೆ ಇಲ್ಲ" ಎಂದು ಒಂದೇ ಬಾರಿಗೆ ಹೇಳಿ, ...

"ನಾನು ಮಾಡಿಸಿದ್ದರೂ, ತಾವಾರೆಂದು ನನಗರಿಯದೆ ಹೇಗೆ ಕೊಡುತ್ತಿದ್ದೆನೋ ಗೊತ್ತಿಲ್ಲ" ಎಂದು ಮುಗಿಸಿದೆ.

ಮನುಷ್ಯ ಸಪ್ಪಗಾಗಲಿಲ್ಲ. ಒಂದಂಗುಲವೂ ಕದಲದೆ, ಕಣ್ಣುಗಳನ್ನು ವಿಶಾಲವಾಗಿ ತೆರೆದು, "ಏನು, ನಾನಾರೆಂದು ಗೊತ್ತಿಲ್ಲವೇ? ಶಾಲೆಯಲ್ಲಿ ನಾವು ಒಟ್ಟಿಗೆ ಗೋಲಿ ಆಡಿಕೊಂಡಿದ್ದು, ಒಬ್ಬರಿನ್ನೊಬ್ಬರನ್ನು ಬಿಟ್ಟು ಹಾಕಬಾರದೆಂದು ನಿತ್ಯವೂ ಶಪಥಮಾಡಿಕೊಳ್ಳುತ್ತಿರಲಿಲ್ಲವೇ?" ಎಂದ.

"ಇಲ್ಲ, ನೆನಪಿಲ್ಲ," ಎಂದೆ.

"ನೆನಪಿಲ್ಲ?"

"ಇಲ್ಲ! ಇ[illegible] ಹೀಗಾವ ಹಿಡಿದು ತ[illegible] ಕೆಲೆಂಡಲ್ಲವಾದ್ದರಿಂದ ಬಿಟ್ಟುತ್ತಿಯು[illegible] ವ್ಯಾಪಮಾಡಲಿಲ್ಲ." ಎಂದು ನಗುತ್ತ ಹೇಳಿದೆ.

"ಎಂಥ ತತ್ತ್ವಜ್ಞಾನಿ ಆಗಿದ್ದಿಯೋ ನೀನು!" ಎಂದು ನನ್ನ ಗೋಲಿ ದೋಸ್ತಿ ಏಕವಚನದಿಂದ ಸಂಬೋಧಿಸಿ, ಶಾಭಾಸ್‌ಗಿರಿಯಿಂದ ನನ್ನ ಬೆನ್ನು ತಟ್ಟಿದ. [illegible] ಮನೆಗೆ ಹೋಗ[illegible]ತ್ತಿರಲು ನನಗೆ ಈ [illegible] ಒಬ್ಬರನ್ನು ಬಿಟ್ಟುಹಾಕಬಾರದೆಂದು [illegible] ಮಾಡಿಕೊಂಡ ಈ ದೋಸ್ತಿ ಯಾ[illegible] ಈ ತನಕ ಹೊಳೆದಿಲ್ಲ!

ಊಟಮಾಡಿ ಕೈ ತೊಳೆವಾಗ ನೆರೆಗೆಲಸದ ಹೆಂಗುಸು ಕೇಳಿದಳು" "ಕೆಲೆಂಡರ್ ಮಾಡಿಸಲಿಲ್ಲವೆ ರಾಯರೇ?

"ಇಲ್ಲ."

ಎರಡೂವರೆ ಗಂಟೆಗೆ ಅಂಗಡಿಗೆ ಹೊರಟೆ. ದಾರಿಯಲ್ಲಿ ಕಪ್ಪಗಿನ ವ್ಯಕ್ತಿಯೊಂದು "ನಮಸ್ಕಾರ ಅಯ್ಯಾ" ಎಂದಿತು. "ನಮಸ್ಕಾರ"ವೆಂದೆ.

"ಕೆಲೆಂಡರ್ . . .?"

"ಇಲ್ಲ."

"ನನ್ನ ಪರಿಚಯವಿಲ್ಲವೇ?"

"ಇಲ್ಲ."

"ನಾನು ಹಜೂರ್‌ಕಛೇರಿ . . ."

"ನೀನು ಹಜೂರ್‌ಕಛೇರಿಯೆಂದು ನಾನು ನಂಬುವುದಿಲ್ಲ. ನನ್ನೊಡನೆ ಕೆಲೆಂಡರ್ ಇಲ್ಲ!" ಎನ್ನುತ್ತ, ಬೇಟೆನಾಯಿಗಳು ಓಡಿಬಂದಂತೆ, ಇನ್ನಾರ ಬಾಧೆಯೂ ಬರಬಾರದೆಂದು ಅಂಗಡಿಗೆ ನಾಗಾಲೋಟವಿಟ್ಟೆ.

ಅಂಗಡಿಯ ಜಗುಲಿಯಲ್ಲಿ, ಹಳೆ ಪರಿಚಿತ ಬ್ಯಾರಿ ಕುಳಿತಿದ್ದನು.

"ಸಲಾಮ್."

"ಸಲಾಮ್."

"ಕೆಲೆಂಡರ್ ...!"

"ಇಲ್ಲ!"

ಪೋಸ್ಟ್‌ಮ್ಯಾನ್ ಬಂದ. ಗಿರಾಕಿಗಳಿಂದ ಕಾಗದವುಂಟೇ ಎಂದು ಕೈನೀಡಿದ. "ಕಾಗದ ಇಲ್ಲ ಸ್ವಾಮಿ. ಕೆಲೆಂಡರ್ ಉಂಟೇ?" ಎಂದು ಕೇಳಿದ!

"ಉಪ್ಪುಂಟು, ಮೆಣಸುಂಟು, ಶುಂಠಿಯುಂಟು; ಆದರೆ, ಕೆಲೆಂಡರ್ ಇಲ್ಲ!" ಎಂದೆ. ನಾನು ಜಗಳಕ್ಕೆ ಸಿದ್ಧನಾಗಿದ್ದೆ.

"ಒಂದು ಕೆಲೆಂಡರ್ ..."

"ಸೇರಿಗೆ ಹತ್ತುಕಾಸು ಉಪ್ಪಿಗೆ, ಮೆಣಸಿಗೆ ಒಂದೇ ಅರ್ಧಾಣೆ, ಶುಂಠಿಗೆ ಮಣಕ್ಕೆ ಕಾಲಾಣೆ ಮಾತ್ರ. ತಕೊಂಡು ಹೋಗು! ಕೆಲೆಂಡರ್ ಮಾತ್ರ ಇಲ್ಲ!" ಎಂದೆ.

ಪೋಸ್ಟ್‌ಮ್ಯಾನ್ ನಗುತ್ತ, "ಅದೊಂದೂ ಬೇಡ ಸ್ವಾಮಿ, ಕೆಲೆಂಡರ್ ಕೊಡಿ ಒಂದು!" ಎಂದ.

"ಶಂಕರಾ, ನಿನಗೆ ಹುಚ್ಚೆ? ನಾನು ಮಾಡಿಸದೆ ಎಲ್ಲಿಂದ ಕೊಡಲಿ? ಈಗ ನಿನ್ನೊಡನೆ ಕೇಳಿದರೆ ಕೊಡು ನೋಡೋಣ!"

ಪೋಸ್ಟ್‌ಮ್ಯಾನ್ ಶಂಕರನಿಗೇನು ಕಂಡಿತೊ! ತನ್ನ ಕೈಯಲ್ಲಿದ್ದ ಕಟ್ಟಿನಿಂದ ಒಂದು [illegible] ತೆಗೆದುಕೊಟ್ಟನು.

ನನಗಾಶ್ಚರ್ಯವಾಯಿತು. ಅದರಲ್ಲಿ "ಮಿಲಾಂಡ್ ಎಂಡ್ ಮಿಲಾಂಡ್, ತಾಮ್ರವ್ಯಾಪಾರಿಗಳು" ಎಂದು ಬರೆದಿತ್ತು.

"ಇದು ನನ್ನ ವಿಳಾಸವಲ್ಲ" ಎಂದೆ.

[illegible] ಇಲ್ಲ, [illegible] ನನಗೆ [illegible] ಸ್ಮಿತ್ತ ಹೋದ.

ಹೊಸ ಚೈತನ್ಯವುಂಟಾಯಿತು. ಆ ದಿನ ಸಾಯಂಕಾಲ, ಬಂದ ಗಿರಾಕಿಯೊಬ್ಬನು, ಅರ್ಧಾಣೆ ವ್ಯಾಪಾರಮಾಡಿದನು. ಅವನು ನಮ್ಮೂರಿಗೆ ಬಂದು ಒಂದು ವರ್ಷವಾಗಿತ್ತು. ಕೋಮಟ ನಾಯರನಂತೆ. ಒಂದು ಇಳಿದ ದಿನವೇ ನಮ್ಮ ಅಂಗಡಿಗೆ ನೆಟ್ಟಗೆಬಂದು, "ನಾನು ಇದೇ ರಸ್ತೆಯಲ್ಲಿದ್ದೇನೆ. ಈ ದಿನವೇ ಬಂದಿದ್ದೇನೆ. ನನಗೆ ಸಾಲಕೊಡಬಹುದೇ?" ಎಂದು ಕೇಳಿದ್ದನು. ಇಷ್ಟು ಪ್ರಾಮಾಣಿಕ ಗಿರಾಕಿಗಳು ಒಂದೊಂದು ರಾಷ್ಟ್ರದಲ್ಲಿ ಒಬ್ಬೊಬ್ಬರು ಮಾತ್ರ ಇರಲು ಸಾಧ್ಯವೆಂದು ನನಗೆ ಹೊಳೆದು, "ನಾವೆಲ್ಲ ಕಡತಂದವರು. ನಗದಿಯ ಪ್ರಾಮಾಣಿಕ ವ್ಯಾಪಾರಸ್ಥರಲ್ಲಿ ಮಾತ್ರ ಅದು ಸಾಧ್ಯ" ಎಂದೆ. ನಾಯರನು ಬೇಸರಿಸದೆ, ಒತ್ತಾಯಮಾಡದೆ, ಒಂದು ಮಾತೂ ಆಡದೆ, ನಿಲ್ಲಲಾರದೆ, ಇಳಿದು ಹೋಗಿದ್ದನು. ಇಂದು ಅವನ ದರುಶನವು ಅಪರೂಪವಾಗಿ ಸಿಕ್ಕಿತ್ತು. ಅಂದಿನ ದಿನಕ್ಕೆ ಅವನದೇ ಆ ಅರ್ಧಾಣೆಯ ವ್ಯಾಪಾರ ನನಗೆ.

[illegible] ಅವನು ಕೊಂಡುಕೊಂಡುದು ಒಂದು "ಬ್ಲೇಡು" ಕೆಳಗಿಳಿಯದೆ, ಅತ್ತಿತ್ತ ನೋಡಿ, "ಒಂದು ಕೆಲೆಂಡರ್ ..." ಎಂದನು.

"ಇಲ್ಲ" ಎಂದೆ.

"ಗಿರಾಕಿಗಳಿಗೆ ಒಂದು ಕೊಡಬೇಕು" ಎಂದನು.

"ಇಲ್ಲ." ಎಂದೆ.

"[illegible] ಇಲ್ಲ! [illegible] ಇಲ್ಲ!" ಎಂದನು.

"ಅದಕ್ಕಾಗಿಯೇ ಅವರನ್ನು ಯುರೋಪಿಯನರೆಂದು ಕರೆಯುತ್ತಾರೆ, ನಮ್ಮನ್ನು ಹಿಂದುಗಳೆನ್ನುತ್ತಾರೆ" ಎಂದೆ.

"ಕೆಲೆಂಡರ್ ಕೊಡುವುದು ವ್ಯಾಪಾರಸ್ಥರ ಧರ್ಮ; ಅವರಿಗೇ ಒಳ್ಳೆ ಜಾಹೀರಾತು!" ಎಂದನು.

"ಆದರೆ, ಕೆಲೆಂಡರ್ ಇಲ್ಲದ ವ್ಯಾಪಾರಸ್ಥರು ..." ಎನ್ನುತ್ತಿರುವಾಗ ಅವನ ಕಂಕುಳಲ್ಲಿ ಒಂದು ಕಟ್ಟು ಕಂಡಿತು. ಕೈಹಾಕಿ ನೋಡಿದರೆ, ಏಳು ಕೆಲೆಂಡರುಗಳಿದ್ದುವು. ಒಂದನ್ನು ತೆಗೆದು, "ತಾರೀಕು ನೋಡಲು ನನ್ನಲ್ಲಿ ಒಂದು ಕೆಲೆಂಡರಿಲ್ಲ!" ಎಂದು ಒಳಗಿಟ್ಟೆ.

ರಾತ್ರಿ ಮನೆಗೆ ಬರುವಾಗ, ನನಗೆದುರಾದವರೆಲ್ಲರಿಗೆ "ಇಲ್ಲ" ಎಂದು ಹೇಳುತ್ತ ಬಂದ ನೆನಪು—ಅವರು ಕೇಳಿದುದೇನೊ ಗೊತ್ತಿಲ್ಲ. ಊಟಕ್ಕೆ ಕುಳಿತಾಗ, ಅನ್ನಬಡಿಸಿ ಪದಾರ್ಥವಿಕ್ಕಿ, ನಮ್ಮತ್ತೆಯ ಏಕಮಾತ್ರ ಕುವರಿ "ಏನು ಬೇಕು?" ಎಂದು ಕೇಳಿದಳು.

"ಇಲ್ಲ. ನಿನ್ನೊಡನೆ ಉಂಟೇ?" ಎಂದೆ.

"ಏನು?" ಎಂದು ಕೇಳಿದಳು.

"ಕೆಲೆಂಡರ್!" ಎಂದೆ. ಅದೇ ಭ್ರಾಂತಿ ನನಗೆ.

ಮಂಕು ಬಡಿದಂತಾಗಿ ಗೃಹಿಣಿ, "ಇಲ್ಲ" ಎಂದಳು.

ಎಚ್ಚೆತ್ತು, "ನೀನು ಪತಿವ್ರತೆ! ಗೃಹರತ್ನ! ಆದರ್ಶನಾರಿ!" ಎಂದೆ.

ಇದು ಒಂದು ದಿನದ ಅನುಭವ. ಇನ್ನುಬರುವ ನವಂಬರ ಕೊನೇ ತಾರೀಕಿನವರೆಗೆ ನಿತ್ಯವೂ ಅನುಭವಿಸಬೇಕಾಗಿದೆ.

* * *

ರಸ್ತೆಯಿಂದ ಹೋಗುವಾಗ, ಮೂವತ್ತು ವರ್ಷಪ್ರಾಯದ ಮಕ್ಕಳು ಕೂಡ, ಸಾಮಾನ್ಯವಾಗಿ ಹೀಗೆ ಆಡಿಕೊಳ್ಳುತ್ತಿರುವರು.

"ನಿನಗೆಷ್ಟು ಸಿಕ್ಕಿದೆ?"

"ನೂರೈವತ್ತು."

"ನನಗೆ ಇನ್ನೂರಮೂವತ್ತು."

ಐನೂರು, ಏಳುನೂರು, ಸಾವಿರದವರೆಗೆ ಕೆಲೆಂಡರುಗಳನ್ನು ಕೂಡ ಹಾಕಿದವರಿದ್ದಾರೆ. ಒಂದು ಕೆಲೆಂಡರಿಗಾಗಿ ಐನೂರು ರೂಪಾಯಿಯ ವ್ಯಾಪಾರ ಮಾಡುವವರೂ ಇರಬಹುದು: ಆದರೆ, ಅರ್ಧಾಣೆ ವ್ಯಾಪಾರಮಾಡಿ ಕೆಲೆಂಡರು ಕೇಳುವವರೂ ಇದ್ದಾರೆ. ನಿಮ್ಮ ಮುಂದಿರುವ ಪ್ರತಿಯೊಬ್ಬನೂ ಕೆಲೆಂಡರ್ ಬೇಡ!

(೧೮ನೇ ಪುಟಕ್ಕೆ ಮುಂದುವರಿಯುದೆ)

ಅಂಚೆ ಚೀಟುಗಳು



ಅಂಚೆ ಚೀಟುಗಳನ್ನು, ಪ್ರಯೋಗಿಸದ ವ್ಯಕ್ತಿಯು ಈಗಿನ ಕಾಲದಲ್ಲಿ ಯಾರೂ ಇಲ್ಲವೆಂದು ಹೇಳಬಹುದಾದರೂ ಅವುಗಳ ಜನನ, ಬೆಳವಣಿಗೆಗಳ ಚರಿತ್ರೆಯನ್ನು ಅರಿತವರು ವಿರಳ. ಅವುಗಳ ವಿಷಯವಾಗಿ ಈ ಲೇಖದಲ್ಲಿ ಪ್ರಸ್ತಾವಿಸಲಾಗಿದೆ. ಹಿಂದೂ ದೇಶದಲ್ಲಿ ಅಂಚೆಚೀಟುಗಳು ಮೊದಲನೆ ಬಾರಿಗೆ ಸಿಂಧಪ್ರಾಂತ್ಯದಲ್ಲಿ, ಕಳೆದ ಸನ್ 1852ನೇ ಜುಲೈ ತಿಂಗಳಲ್ಲಿ ಜ್ಯಾರಿಗೆ ಬಂದುವು.

(ಲೇಖಕರು: ಮಿ। ಜೋರ್ಜ್ ಹರ್ಬರ್ಟ್)

ಪೋಸ್ಟಲ್ ಸ್ಟಾಂಪ್ಸ್"ಗಳೆಂಬ ಅಂಚೆ ಚೀಟುಗಳ ಪ್ರಯೋಗವು ಈಗ ಲೋಕದ ಎಲ್ಲಾ ದೇಶಗಳಲ್ಲಿ ರೂಢಿಗೆ ಬಂದಿದ್ದರೂ ಅವುಗಳು ಬಹು ಹಿಂದಿನಲ್ಲಿ ರೂಢಿಯಲ್ಲಿ ಇದ್ದುವೆಂದು ಹೇಳಬರುವ ಹಾಗಿಲ್ಲ. ಪೆನ್ನಿ ಪೋಸ್ಟಲ್ ಸಿಸ್ಟಮ್ ಎಂಬುವ ಸುಧಾರಣೆಯು ಒಂದು ಪೆನ್ನಿ ದರದಲ್ಲಿ ಪತ್ರಗಳನ್ನು ಕೊಂಡೊಯ್ಯುವ ಇಂಗ್ಲೆಂಡಿನಲ್ಲಿ 1840ರಲ್ಲಿ ಪ್ರಥಮ ಬಾರಿಗೆ ಬಂತು. ಅಂಚೆ ಚೀಟುಗಳ ರಚನೆ ಅವುಗಳನ್ನು ಸುಲಭವಾಗಿ ಅಂಟಿಸಲಿಕ್ಕಾಗುವಂತೆ ಮಾಡುವ "ಪರ್ಫೊರೇಷನ್" (ಚಿಕ್ಕ ರಂಧ್ರಗಳು) 1850ರಲ್ಲಿ ಮೊದಲಾಗಿ ಬಳಕೆಗೆ ಬಂತು. ಅಂಚೆಚೀಟುಗಳ ಹಿಂಭಾಗಕ್ಕೆ ಅಂಟು ಹಾಗಿಸಿ ಒಣಗಿಸಿ, ಸುಲಭವಾಗಿ ಪತ್ರಗಳಿಗೆ ಅಂಟಿಸಲಾಗುವ ವಿಧಾನವು 1850ರಲ್ಲಿ ಪ್ರಚಾರಕ್ಕೆ ಬಂತು. ಮತ್ತೆ, ಮೊದಲು ಕಾಗದಗಳನ್ನು ಊರಿಂದೂರಿಗೆ ಒಯ್ಯುವ ಕೆಲಸದ ಖರ್ಚನ್ನು ತುಂಬಿಸುವ, ಉದ್ದೇಶಕ್ಕಾಗಿ ಅಂಚೆ ಚೀಟುಗಳು ರಚಿಸಲ್ಪಟ್ಟಾಗ್ಯೂ ಇತ್ತೀಚೆಗೆ ರಾಜರ ಪಟ್ಟಾಭಿಷೇಕವೇ ಮುಂತಾದ ವಿಶೇಷ ಸಂದರ್ಭಗಳ ಸ್ಮಾರಕಾರ್ಥವಾಗಿ ಬಹು ವಿಧದ ಅಂಚೆಚೀಟುಗಳು ವಿವಿಧ ದೇಶಗಳಲ್ಲಿ ರಚಿಸಲ್ಪಡುತ್ತಿರುವವು. ಈ ರೀತಿಯ ಸ್ಮಾರಕಾರ್ಥವಾದ ಅಂಚೆ ಚೀಟುಗಳನ್ನು ಮೊದಲಾಗಿ ಔಸ್ಟ್ರೇಲ್ಯ ದೇಶದ ನ್ಯೂ ಸೌತ್ ವೇಲ್ಸ ಮತ್ತು ವಿಕ್ಟೋರಿಯ ರಾಜ್ಯಗಳು ಮುದ್ರಿಸಿ ವಿಕ್ರಯಿಸ ತೊಡಗಿದವು. 1904ರಲ್ಲಿ ಡೆನ್‍ಮಾರ್ಕ ದೇಶವು ಕ್ರಿಸ್ಮಸ್ ಹಬ್ಬದ ಆಚರಣೆಯ ಸೂಚಕವಾದ ಚೀಟುಗಳನ್ನು ರಚಿಸಿ ಪ್ರಚಾರಕ್ಕೆ ತಂದಿತು. ಈಗಿನ ಕಾಲದಲ್ಲಿ ಎಲ್ಲಾ ವಿಶೇಷ ಸಂದರ್ಭಗಳನ್ನು ನೆನಪಿಗೆ ತರುವುದಕ್ಕಾಗಿ ಅಂಚೆ ಚೀಟುಗಳನ್ನು ಪ್ರಚುರಪಡಿಸುವುದು ಬಹು ಮಟ್ಟಿಗೆ ವಾಡಿಕೆಯಲ್ಲಿದೆ. ಪಂಚಮ ಜೋರ್ಜ ಮಹಾರಾಜರವರ ಢಿಲ್ಲಿ ದರ್ಬಾರಿನ ಸೂಚಕವಾಗಿ ನಮ್ಮ ದೇಶದಲ್ಲಿ ಕೂಡಾ ನವೀನ ಅಂಚೆ ಚೀಟುಗಳು ತಯಾರಿಸಲ್ಪಟ್ಟು ವಿಕ್ರಯಿಸಲ್ಪಟ್ಟದ್ದು ಅನೇಕ ವಾಚಕರ ನೆನಪಿನಲ್ಲಿರಬಹುದು.

ಅಂಚೆ ಚೀಟುಗಳನ್ನು ಪ್ರಯೋಗಿಸದ ವ್ಯಕ್ತಿಯು ಈಗಿನ ಕಾಲದಲ್ಲಿ ಯಾರೂ ಇಲ್ಲವೆಂದು ಹೇಳಬಹುದಾದರೂ ಅವುಗಳ ಜನನ, ಬೆಳವಣಿಗೆಗಳ ಚರಿತ್ರೆಯನ್ನು ಅರಿತವರ ಸಂಖ್ಯೆಯು ವಿರಳವೇ ಎಂದರೆ ತಪ್ಪಾಗದು. ಆದುದರಿಂದ ಅಂಚೆ ಚೀಟುಗಳ ವಿಶೇಷತ್ವದ



ಕುರಿತು ಕೆಲವು ವಿಷಯಗಳನ್ನು ಈ ಸಂಚಿಕೆಯಲ್ಲಿ ತನ್ನ ವಾಚಕ ಮಂಡಳಿಯವರ ಅವಗಾಹನೆಗೆ ಒಗ್ಗಿ ಕೊಟ್ಟಿರುವೆನು. ಹಿಂದುಸ್ಥಾನದಲ್ಲಿ ಅಂಚೆ ಚೀಟುಗಳು ಮೊದಲನೇ ಬಾರಿಗೆ ಸಿಂಧ್ ಪ್ರಾಂತ್ಯದಲ್ಲಿ 1852ನೇ ಇಸವಿಯ ಜುಲೈ ತಿಂಗಳ 1ನೇ ತಾರೀಕಿನಲ್ಲಿ ರೂಢಿಗೆ ಬಂದುವು. ಅಲ್ಲಿಯ ತನಕ ಹಿಂದುಸ್ಥಾನದಲ್ಲಿ ಮಾತ್ರವೇ ಅಲ್ಲಾ ಏಷ್ಯಾ ಖಂಡದಲ್ಲಿ ಅಂಚೆ ಚೀಟುಗಳ ಪ್ರಯೋಗವೇ ಇದ್ದಿಲ್ಲ. ಆ ಕಾಲ ಸಿಂಧಿನ ಕಮ್ಮಿಶನರಾಗಿದ್ದ ಸರ್ ಬಾರ್ಟಲ್ ಫ್ರೇರ್ ಎಂಬವರು ತನ್ನ ಪ್ರದೇಶದಲ್ಲಿ ಇವರ ಪ್ರಯೋಗಕ್ಕಾಗಿ ಅರ್ಧಾಣೆ ಮೌಲ್ಯದ ಅಂಚೆ ಚೀಟುಗಳನ್ನು ಪ್ರಥಮ ಬಾರಿಗೆ ಪ್ರಚಾರಕ್ಕೆ ತಂದರು. ಅವುಗಳು ಗೋಳಾಕಾರವಾಗಿದ್ದು ಬಿಳೇ ಕೆಂಪು ಮತ್ತು ನೀಲಿ ಬಣ್ಣಗಳಿಂದ ಕೂಡಿದವುಗಳಾಗಿದ್ದುವು. ಅವುಗಳ ಮೇಲೆ ಇಂಗ್ಲೀಷಿನಲ್ಲಿ "Scinde District Dawk" ಮತ್ತು "Half Anna" ಎಂಬುವ ಮೇಲ್ಬರಹಗಳು ಛಾಪಿಸಿದ್ದವು. ಇವುಗಳು ಎರಡು ವರ್ಷಗಳ ತನಕ ಸಿಂದ್ ಪ್ರದೇಶದಲ್ಲಿ ಪ್ರಯೋಗದಲ್ಲಿದ್ದ ಬಳಿಕ ಈಸ್ಟ್‌ಇಂಡಿಯಾ ಕಂಪೆನಿ ಸರಕಾರದವರು ಈ ಅಂಚೆ ಚೀಟುಗಳ ಪ್ರಯೋಜನವನ್ನು ಮನಸರಿತು ತಮ್ಮ ಸ್ವಾಧೀನದಲ್ಲಿದ್ದು ಎಲ್ಲಾ ಪ್ರದೇಶಗಳಿಗೂ ಅನುಕೂಲವಾಗುವ ಅಂಚೆ ಚೀಟುಗಳನ್ನು ರಚಿಸಲು ಆಲೋಚಿಸಿ 1854ನೇ ಇಸವಿ ಎಪ್ರಿಲ್ ತಿಂಗಳಲ್ಲಿ ½ಆಣೆ ಮೌಲ್ಯದ ಹೊಸ ಅಂಚೆ ಚೀಟುಗಳನ್ನು ಛಾಪಿಸಿದರು. ಸ್ವಲ್ಪ ಸಮಯದ ನಂತರ ಕಂಪೆನಿ ಸರಕಾರದವರು 1ಆಣೆ 2ಆಣೆ 4ಆಣೆ ಮೌಲ್ಯದ ಚೀಟುಗಳನ್ನು ಕೂಡಾ ತಯಾರಿಸಿದರು. ಈ ಎಲ್ಲಾ ಚೀಟುಗಳ ಮೇಲೆ ಕ್ವೀನ್ ವಿಕ್ಟೋರಿಯಾ ಮಹಾರಾಣಿಯವರ ಭಾವಚಿತ್ರವು ಇದ್ದಿತು. 1855ರಲ್ಲಿ ತಿಳಿ ನೀಲಿ ಬಣ್ಣದಿಂದ ಕೂಡಿದ ಹೊಸ ಚೀಟುಗಳು ಅಚ್ಚು ಹಾಕಲ್ಪಟ್ಟುವು. 1882ರಲ್ಲಿ ಇಂಡಿಯಾ ದೇಶದ ಆಡಳಿತೆಯು ಕಂಪೆನಿಯ ಕೈತಪ್ಪಿ ಮಹಾರಾಣಿಯವರ ಕೈಸೇರಲು ಅರ್ಧಾಣೆ ಮೊದಲ್ಗೊಂಡು ಒಂದು ರೂಪಾಯಿ ಮೌಲ್ಯದ ತನಕದ ಅಂಚೆ ಚೀಟುಗಳು ಮಹಾರಾಣಿಯವರ ತಿದ್ದಿದ ಭಾವಚಿತ್ರದೊಡನೆ ಅಚ್ಚು ಹಾಕಲ್ಪಟ್ಟು ಪ್ರಚಾರಕ್ಕೆ ಬಂದವು. ಮತ್ತು ಅವುಗಳ ಮೇಲೆ ಮೊದಲನೇ ಬಾರಿಗೆ "India Postage" ಎಂಬ ಹೆಸರನ್ನು ಸೇರಿಸಲ್ಪಟ್ಟಿತು. ಕ್ರಮೇಣವಾಗಿ ಅದೇ ಮಹಾರಾಣಿಯವರ ಆಳಿಕೆ ಕಾಲ ಎರಡು ಮೂರು ಮತ್ತು ಐದು ರೂಪಾಯಿ ಮೌಲ್ಯದ ಅಂಚೆ ಚೀಟುಗಳು ಬಹು ನಾಜೂಕಾಗಿ ಪ್ರಖ್ಯಾತ ಚಿತ್ರಗಾರನೂ ಶಿಲ್ಪಿಯೂ ಆಗಿದ್ದ ವಾನ್ ಎಂಜೆಲೊ (Von Angelo) ಎಂಬವನಿಂದ ರಚಿಸಲ್ಪಟ್ಟು ರೂಢಿಗೆ ಬಂದವು.

1926ನೇ ಇಸವಿಯ ತನಕ ನಮ್ಮ ದೇಶದ ಎಲ್ಲಾ ಅಂಚೆ ಚೀಟುಗಳು ವಿಲಾಯತಿಯಲ್ಲಿಯೇ ತಯಾರಿಸಲ್ಪಡುತ್ತಿದ್ದುವು. ಆ ನಂತರ ಅವುಗಳ ಮುದ್ರಣವು ಹಿಂದುಸ್ಥಾನದಲ್ಲಿಯೇ ಆಗ ತೊಡಗಿತು. ಇದೇ ಇಸವಿಯ ಆರಂಭದಲ್ಲಿ ಟಪ್ಪಾಲು ಇಲಾಖೆಯವರು ಹೊಸ ಅಂಚೆ ಚೀಟುಗಳನ್ನು ತಯಾರಿಸಿ ಅವುಗಳಲ್ಲಿ ಮುದ್ರಿತವಾಗಿರುವ ಚಿತ್ರಗಳ ಮೂಲಕ ತನ್ನ ಇಲಾಖೆಯ ಕಾರ್ಯಕಲಾಪಗಳು ಯಾವ ರೀತಿಯಲ್ಲಿ ಕ್ರಮಕ್ರಮವಾಗಿ ಮೇಲ್ತರಗತಿಗೆ ಬಂದುವು ಎಂಬುವುದನ್ನು ಜನತೆಗೆ ವ್ಯಕ್ತಗೊಳಿಸುವುದಕ್ಕೆ ಪ್ರಯತ್ನಿಸಿರುವರು.

ಈಗಿನ ಎರಡಾಣೆ ಮೌಲ್ಯದ ಅಂಚೆ ಚೀಟಿನಲ್ಲಿ ಅಂಚೆ ಇಲಾಖೆಯು ಆರಂಭಿಸಿದ ಮೊದಲನೇ ವರುಷಗಳಲ್ಲಿ ಪತ್ರಗಳನ್ನು ಊರಿಂದೂರಿಗೆ ಹೇಗೆ ವೈಯುತ್ತಿದ್ದರೆಂಬುವದನ್ನು ಸೂಚಿಸುವ ಚಿತ್ರವು ಇದೆ—ಟಪ್ಪಾಲು ರನ್ನರನೆಂದು ಕರೆಯಲ್ಪಡುವ ದೂತನು ಅಂಚೆ ಚೀಲವನ್ನು ಹೆಗಲ ಮೇಲೆ ಹಾಕಿ ತನ್ನ ಕೈಯಲ್ಲಿ ಗೆಜ್ಜೆಗಳಿಂದ ಕೂಡಿದ ಬರ್ಚಿಯನ್ನು ಹಿಡಿದು ಓಡುವುದನ್ನು ನಾವು ಅದರಲ್ಲಿ ಕಾಣುತ್ತೇವೆ. 1934ರ ತನಕ ಹೆಚ್ಚಾಗಿ ಟಪಾಲು ಊರಿಂದೂರಿಗೆ ಈ ರೀತಿಯ ದೂತರ ಮುಖಾಂತರವೇ ವೈಯಲ್ಪಡುತ್ತಿದ್ದವು. 1935ನೇ ಇಸವಿಯಲ್ಲಿ ಕೂಡ ಈ ತರಗತಿಯ ರನ್ನರುಗಳ ಸಂಖ್ಯೆಯು ಹಿಂದುಸ್ಥಾನದಲ್ಲಿ 11,000 ಇತ್ತೆಂದು ನಾವು ತಿಳಿಯುತ್ತೇವೆ. ಟಪಾಲ ರನ್ನರಿನ ವೃತ್ತಿಯು ಬಹು ಪುರಾತನದಿಂದಲೇ ನಮ್ಮ ದೇಶದಲ್ಲಿ ಇದ್ದಿತೆಂದು ನಾವು ಚರಿತ್ರೆಯಿಂದ ಕಾಣಬಹುದು. ಅಶೋಕನ ಕಾಲದಲ್ಲೂ ಮೊಗಲ್ ಚಕ್ರವರ್ತಿಗಳ ಆಳ್ವಿಕೆಯಲ್ಲಿಯೂ ಕಾಗದಗಳನ್ನು ಊರಿಂದೂರಿಗೆ ದೂತನ ಮುಖಾಂತರ ಕಳುಹಿಸುವ ವಾಡಿಕೆಯಿತ್ತು. ಭರ್ಚಿಯು ಆತನ ಅಂಗ ರಕ್ಷಣೆಗಾಗಿಯೂ ...ರಾತ್ರಿ ಕಾಲ ಮಾರ್ಗದಲ್ಲಿ ಇದಿರಾಗುವ ದುಷ್ಟ ಜಂತುಗಳನ್ನು ಓಡಿಸುವುದಕ್ಕಾಗಿಯೂ ಅವನ ಕೈಯಲ್ಲಿ ಕೊಡಲ್ಪಟ್ಟಿತು. ಗೆಜ್ಜೆಯ ಧ್ವನಿಯಿಂದ ಅಂಚೆ ಜವಾನನು ಬರುತ್ತಾನೆಂಬುದು ಜನರಿಗೆ ಗೊತ್ತಾಗಿ ಆತನಿಗೆ ಆತಂಕವಾಗದೆ ಮಾರ್ಗಬಿಟ್ಟು ಕೊಡಬೇಕೆಂಬ ಪದ್ಧತಿಯು ರೂಢಿಯಲ್ಲಿತ್ತು. ಈ ರನ್ನರುಗಳೆಂದು ಕರೆಯಲ್ಪಡುವ ಅಂಚೆ ದೂತರು ಅಂಚೆ ಕಟ್ಟುಗಳ ಸಮೇತ ಓಡುತ್ತಾ, ರಾತ್ರಿ ಹಗಲು ಎಂಬ ಭೇದವನ್ನು ನೋಡದೆ ಬಿಸಿಲು ಮಳೆಯಲ್ಲಿ ಪ್ರಯಾಸಪಟ್ಟು ತಮ್ಮ ಕೆಲಸವನ್ನು ಸರಾಗವಾಗಿ ಮಾಡುತ್ತಿದ್ದರು. ಇವರು ತಮ್ಮ ಉದ್ಯೋಗದ ನಿಮಿತ್ತ ನಾವಕಾಶವಾಗಿ ನಡೆಯುವುದನ್ನು ಮರೆತು ತೀವ್ರವಾಗಿ ಓಡ ಕಲಿಯಬೇಕಾದುದರಿಂದ ಇವರನ್ನು ರನ್ನರುಗಳೆಂದು ಕರೆಯುವರು. ಈಗಲೂ ಕೂಡ ನಮ್ಮ ಕೆಲವು ಹಳ್ಳಿಹಳ್ಳಿಗಳಲ್ಲಿ ಕೆಲವು ಮಂದಿ ರನ್ನರುಗಳು ಇದ್ದಾರೆ.

2½ ಆಣೆಯ ಹೊಸ ಅಂಚೆ ಚೀಟುಗಳನ್ನು ನಾವು ನೋಡಲು ಹ್ಯಾಗೆ ರನ್ನರುಗಳ ಕೆಲಸವು ಎರಡು ಎತ್ತುಗಳಿಂದ ಕೂಡಿದ ಬಂಡಿಯ ವಶವಾಯಿ

ತೆಂಬುದನ್ನು ನೋಡಬಹುದು. 1845ನೇ ಇಸವಿಯಲ್ಲಿ ಕಲ್ಕತ್ತೆಯಿಂದ ಡಿಲ್ಲಿಗೆ ಟಪ್ಪಾಲು ಚೀಲಗಳು ಈ ರೀತಿಯ ಎತ್ತಿನ ಭಂಡಿಗಳಲ್ಲಿಯೇ ಬರುತ್ತಿದ್ದವು ವಿಲಾಯತಿಯಿಂದ ಹಡಗುಗಳಲ್ಲಿ ಬರುವ ಪತ್ರಗಳನ್ನು ಕೂಡ ಒಳ ಪ್ರದೇಶಗಳಿಗೆ ಈ ಭಂಡಿಗಳ ಮೂಲಕವೇ ಕಳುಹಿಸುತ್ತಿದ್ದರು.

3 ಆಣೆ ಮೌಲ್ಯದ ಅಂಚೆ ಚೀಟುಗಳು ಎತ್ತಿನ ಭಂಡಿಯನ್ನು ಕುದುರೆಯ ಟೊಂಗಾ ಗಾಡಿಯು ಹಿಂದಕ್ಕೆ ಹಾಕಿದ್ದನ್ನು ಸೂಚಿಸುತ್ತವೆ. ಕುದುರೆಗಳು ಎತ್ತುಗಳಿಂದ ತೀವ್ರವಾಗಿ ಓಡಬಲ್ಲವುಗಳಾದುದರಿಂದ ಟಪ್ಪಾಲು ಇಲಾಖೆಯವರು ಕುದುರೆಯ ಟೊಂಗಾ ಗಾಡಿಗಳನ್ನು ಪ್ರಯೋಗಿಸತೊಡಗಿದರು ಮತ್ತು ಈ ಉದ್ದೇಶ ಇಲಾಖೆಯು ಪರಿಮುಖವಾಗಿಯೇ ಒಳ್ಳೇ ಜಾತಿಯ ಕುದುರೆಗಳು ಬೆಳೆಗೆ ಪಡೆದು ಸಾಕಲ್ಪಟ್ಟವು.

ಈ ರೀತಿಯಾಗಿ ಟಪ್ಪಾಲು ವೈಯುವ ಕಾರ್ಯವು ಸುಧಾರಣೆ ಹೊಂದುತ್ತ ಇರಲು ಮರಳು ಪ್ರದೇಶಗಳಲ್ಲಿ ಟೊಂಗಾ ಗಾಡಿಗಳನ್ನು ಕೂಡ ಪ್ರಯೋಗಿಸುವದು ಕಷ್ಟತರವಾಗಿ ಕಂಡುಬಂದು ಅಂಥಾ ದೇಶಗಳಲ್ಲಿ ಟಪ್ಪಾಲು ಒಯ್ಯುವ ಬಗ್ಗೆ ಒಂಟೆಗಳನ್ನು ಉಪಯೋಗಿಸಲಾರಂಭಿಸಿದ್ದನ್ನು 3½ ಆಣೆ ಮೌಲ್ಯದ ಚೀಟುಗಳ ಮೇಲಿರುವ ಚಿತ್ರದಿಂದ ಕಾಣಬಹುದು. 1857ನೇ ಇಸವಿಯಲ್ಲಿ ಮೊದಲನೇ ಸಾರಿಗೆ ಬಲೂಚಿಸ್ಥಾನ, ಸಿಂಧ, ರಾಜಪುತಾನಾ ಮುಂತಾದ ಮರಳು ಪ್ರದೇಶಗಳಲ್ಲಿಯೂ ಮತ್ತು ಪಂಜಾಬಿಗೆ ಸೇರಿದ ಬಹಾವಲ್‌ಪುರದ ಮತ್ತು ಫಿರೋಜಪುರದ ನಡುವೆಯ - ಪ್ರಾಂತ್ಯಗಳಲ್ಲಿಯೂ ನೀರು ಸಿಕ್ಕುವರೆ ಪ್ರಯಾಸವಾದ ವಿಸ್ತಾರವಾದ ಮರುಳು ಭೂಮಿಗಳನ್ನು ದಾಟಿ ಹೋಗುವ ಉದ್ದೇಶ್ಯ ಒಂಟೆಗಳು ಪ್ರಯೋಗಿಸಲಟ್ಟವು. ಈ ಪ್ರದೇಶಗಳಲ್ಲಿ ಬಹುಕಾಲ [illegible] ಒಂಟೆಗಳೇ ಅತ್ಯುತ್ತಮ ವಾಹನಗಳಾಗಿದ್ದವು.

[illegible] ಮೌಲ್ಯದ ಅಂಚೆ [illegible] ಓಟಲ್ಲಿ 1852ನೇ ಇಸವಿಯಲ್ಲಿ ಪ್ರಥಮ [illegible] ಟಪ್ಪಾಲು ವೈಯುವರೆ ಪ್ರಯೋಗಿಸಿದ ರೈಲ್ ಬಂಡಿಯ ಚಿತ್ರವು ಇದೆ.

ಆರಾಣೆಯ ಅಂಚೆ ಚೀಟನ್ನು ನಾವು ನೋಡಲು ನಮ್ಮಲ್ಲಿ ಅನೇಕರಿಗೆ ತಿಳಿದಿರುವ ಪಿ. ಎಂಡ್ ಓ. ಕಂಪೆನಿಯವರ ಮೈಲ್ ಸ್ಟೀಮರನ್ನು ಕಾಣುತ್ತೇವೆ. ಸುವೇಜ್ ಕಾಲುವೆಯು ತೆರೆಯಲ್ಪಡುವ ಮೊದಲು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಕಾಗದ ತಲ್ಪುವುದಕ್ಕೆ ಆರು ತಿಂಗಳ ಕಾಲ ತಾಗುತ್ತಿತ್ತು. ಆದರೆ ಸುವೇಜ್ ಕಾಲುವೆಯು ತೆರೆಯೋಣಾದ ನಂತರ ಪಿ. ಎಂಡ್ ಓ. ಕಂಪೆನಿಯವರ ನೌಕೆಗಳು ಈಗಿನ ಕಾಲದಲ್ಲಿ ಮೂರು ವಾರಗಳೊಳಗೆ ಲಂಡನಿನಿಂದ ಬೊಂಬಾಯಿಗೆ ಕಾಗದಗಳನ್ನು ತಲ್ಪಿಸುತ್ತವೆ. ಈ ಹಡಗು ಪಡೆಯವರು ಟಪ್ಪಾಲನ್ನು ವಿಲಾಯತಿಗೆ ಕೊಂಡೊಯ್ಯುವ ಮತ್ತು ತರುವ ಕಂಟ್ರಾಕ್ಟನ್ನು ಟಪ್ಪಾಲು ಇಲಾಖೆಯಿಂದ ಪಡೆದಿರುವರು.

ಎಂಟಾಣೆಯ ಅಂಚೆಚೀಟುಗಳಲ್ಲಿ ಟಪ್ಪಾಲು ಇಲಾಖೆಯವರಿಂದ ಈಗಲೂ ಕೂಡ ಬಹಳವಾಗಿ ಪ್ರಯೋಗಿಸಲ್ಪಡುವ ಮೋಟಾರು ಲೋರಿಯ ಚಿತ್ರವಿದೆ. ರೈಲುಬಂಡಿಗಳಲ್ಲಿಯೂ ಸ್ಟೀಮರುಗಳಲ್ಲಿಯೂ ಪರದೇಶಗಳಿಂದ ಬಂದ ಅಂಚೆ ಚೀಲಗಳನ್ನು ಟಪ್ಪಾಲು ಆಫೀಸಿಗೆ ತಲ್ಪಿಸುವ ಉದ್ದೇಶ್ಯ ಎಲ್ಲಾ ದೊಡ್ಡ ಪಟ್ಟಣಗಳಲ್ಲಿ ಹಲವು ಲೋರಿಗಳು ಪ್ರಯೋಗಿಸಲ್ಪಡುತ್ತವೆ. ಲೋರಿಗಳ ಪ್ರಯೋಗವು 1910ರಲ್ಲು ಆರಂಭವಾಗಿ ಇಂದಿನ ತನಕವೂ ರೂಢಿಯಲ್ಲಿದೆ.

ಹದಿನೆರಡಾಣೆಯ ಮತ್ತು ಒಂದು ರೂಪಾಯಿ ಮೌಲ್ಯದ ಅಂಚೆಚೀಟುಗಳಲ್ಲಿ ಪ್ರಕೃತ ವಿಲಾಯತಿಯಿಂದ ಹಿಂದುಸ್ಥಾನಕ್ಕೂ ಇತ್ತೀಚೆಗೆ ಹಿಂದುಸ್ಥಾನದೊಳಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೂ ಟಪ್ಪಾಲು ವೈಯುವರೆ ಪ್ರಯೋಗಿಸಲ್ಪಟ್ಟಿರುವ ವಾಯುವಿಮಾನದ ಚಿತ್ರವು ಮುದ್ರಿಸಲ್ಪಟ್ಟಿರುತ್ತದೆ.

ಈ ಅಂಚೆಚೀಟುಗಳ ಮುಖಾಂತರ ಕಾಲುನಡೆಯಿಂದ ಎತ್ತುಗಳ ಬಂಡಿಗೂ, ಕುದುರೆಯ ಟೊಂಗಕ್ಕೂ ನಂತರ ರೈಲಿಗೂ ಸ್ಟೀಮರಿಗೂ ಆ ಮೇಲೆ ವಾಯುವಿಮಾನಕ್ಕೂ ಸೇರಿ ಜನತೆಯ ಸೇವೆಯನ್ನು ಕೊಂಚ ಖರ್ಚಿನಲ್ಲಿ ಸಮರ್ಪಕವಾಗಿ ಮಾಡುತ್ತಲಿರುವ ಅಂಚೆ ಇಲಾಖೆಯವರ ಸಾಹಸವು ಚಿತ್ರಗಳ ಪರಿಮುಖವಾಗಿ ವರ್ಣಿಸಲ್ಪಟ್ಟಿರುತ್ತದೆ. ಈ ಅಂಚೆಚೀಟುಗಳನ್ನು ಪಡಕೊಳ್ಳುವವರೆಲ್ಲರೂ ಅವುಗಳಲ್ಲಿ ಮುದ್ರಣವಾಗಿರುವ ಚಿತ್ರಗಳ ಮುಖಾಂತರ ಇಲಾಖೆಯ ಪರಿಶ್ರಮದ ಚರಿತ್ರೆಯನ್ನು ತಿಳಿಯಬೇಕೆಂಬುವುದೇ ಅವರ ಉದ್ದೇಶವಾಗಿರುತ್ತದೆ. ಜನತೆಯ ಪ್ರೇಮಕ್ಕೆ ಪಾತ್ರವಾದ ಪ್ರಭಾತ ಪತ್ರವಾದರೂ ತನ್ನ ವಾಚಕರೊಳಗೆ ಹೊಸ ಜ್ಞಾನವನ್ನು ತಿಳುವಿಕೆಯನ್ನು ಹುಟ್ಟಿಸುವ ಉದ್ದೇಶದಿಂದಲೇ ಪ್ರಕಟ ಸಂಚಿಕೆಗಳನ್ನು ಹೊರಡಿಸುತ್ತದೆಂದು ನಂಬಿ - ಸ್ತಕವನ್ನು ಬರೆಯಲು ಒಪ್ಪಿಕೊಂಡೆನು.

ಮೇಲೆ ನಮೂದಿಸಿದ ಎಲ್ಲಾ ಅಂಚೆಚೀಟುಗಳು ನಾಸೀಕ್ ಪಟ್ಟಣದ ಸೆಕ್ಯೂರಿಟಿ ಪ್ರೆಸ್ ಎಂಬ ಛಾಪಖಾನೆಯಲ್ಲಿ ಅಚ್ಚಾದ್ದುಗಳು. ಬಹುಮಂದಿ ನಮ್ಮ ದೇಶದಲ್ಲಿಯೂ ವಿಲಾಯತಿಯಲ್ಲಿಯೂ ಹಳೇ ಅಂಚೆಚೀಟುಗಳನ್ನು ಒದಗಿಸಿ ಜೋಪಾನವಾಗಿ ಇಟ್ಟುಕೊಳ್ಳುವ ವೃತ್ತಿಯುಳ್ಳವರು. ಈ ರೀತಿಯಾಗಿ ಅಂಚೆಚೀಟುಗಳನ್ನು ಸಂಪಾದಿಸಿಕೊಳ್ಳುವವರಲ್ಲಿ ಬಹುಮಂದಿ ರಾಜರುಗಳು ಕೂಡಾ ಇರುತ್ತಾರೆ. ದಿವಂಗತ 7ನೇ ಎಡ್‌ವರ್ಡ್ ಮಹಾರಾಜರು ಬಹು ಬೆಲೆ ಬಾಳಬಹುದಾದ ಹಳೇ ಅಂಚೆ ಚೀಟುಗಳನ್ನು ಒದಗಿಸಿ ಇಟ್ಟುಕೊಂಡಿದ್ದರು. ಹಲವು ಸಾರಿ ಹಲವು ಸಾವಿರ ಪೌಂಡ್ ಬೆಲೆಕೊಟ್ಟು ಅಪೂರ್ವವಾದ ಅಂಚೆಚೀಟುಗಳನ್ನು ಧನಾಢ್ಯರು ಪಡಕೊಳ್ಳುತ್ತಾರೆ. ಇಂಥಾ ಅನುಕೂಲತೆ ನಮ್ಮೆಲ್ಲರಿಗೂ ಇಲ್ಲದೆ ಹೋದರೂ ಅಂಚೆಚೀಟುಗಳ ವಿವರಣೆ ಮತ್ತು ಚರಿತ್ರೆಯನ್ನು ನಾವೆಲ್ಲರೂ ಮನವರಿಯಬಹುದು.

ಈ ಪತ್ರದಲ್ಲಿ ನನ್ನದೇ ಎಂದು ಹೇಳಬಹುದಾದುದು ಯಾವದೂ ಇಲ್ಲ. ಪುಷ್ಪಗಳೆಲ್ಲವೂ ಅಂಚೆ ಇಲಾಖೆಯವರದು. ಅವುಗಳನ್ನು ಒಟ್ಟಾಗಿ ಪೋಣಿಸಿದ ಬರೇ ಹಗ್ಗ ಮಾತ್ರವೇ ನನ್ನದು. ಬೇರೆ ಬೇರೆಯಾಗಿ ಬಿದ್ದಿದ್ದ ಅಂಚೆ ಹೂಗಳನ್ನು ಒಂದಾಗಿ ಜೋಡಿಸಿ ವಾಚಕ ಮಹಾಶಯರುಗಳ ದಿವ್ಯ ಚರಣಗಳಿಗೆ ಅರ್ಪಿಸಿರುವೆನು.

ಮಾತೃಭಾಷೆಯಲ್ಲಿ ಶಿಕ್ಷಣ ಸಾಗಬೇಕು!

(ಲೇಖಕರು—ರವೀಂದ್ರನಾಥ ಠಾಕೂರ)

ದೇಶದ ಶಿಕ್ಷಣವು ಪರದೇಶೀ ಭಾಷೆಗಳಲ್ಲಿ ನಡೆವ ಪದ್ಧತಿಯು ಹಿಂದೂ ದೇಶದ ಹೊರತು, ಪ್ರಪಂಚದ ಎಕ್ಕ ಯಾವ ಕಡೆಯಲ್ಲಿಯೂ ಇಲ್ಲ. ನೂರು ವರ್ಷಗಳ ಇತ್ತೀಚೆಗೆ ಜಾಪಾನು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸಿತು. ಆರಂಭದಲ್ಲಿ ಅದು (ಜಾಪಾನು) ವಿದೇಶಿ ಭಾಷೆಗಳಲ್ಲಿ ಬರೆದ ಪಠ್ಯಪುಸ್ತಕಗಳನ್ನು ಉಪಯೋಗಿಸಬೇಕಾಗಿದ್ದರೂ, ದೇಶ ಭಾಷೆಯ ಮೂಲಕವೇ ಎಲ್ಲಾ ಬಗೆಯ ಶಿಕ್ಷಣವು ಸಾಗಬೇಕೆಂದು ಅದು ಆರಂಭದಲ್ಲೆ ಸಂಕಲ್ಪಿಸಿತ್ತು. ಎಲ್ಲರೂ ಸುಸಂಸ್ಕೃತರಾಗಬೇಕೆಂದು ಜಾಪಾನಿನ ಇಚ್ಛೆಯಿದ್ದು, ಪಾಶ್ಚಾತ್ಯ ಸಂಸ್ಕೃತಿಯನ್ನು ಬೇಕಾದಷ್ಟು ಅನುಕರಿಸುವುದರಲ್ಲಿ ಅದು ತೊಡಗಿ, ಮುಂದೆ ಪರಿವರ್ತಿಸತೊಡಗಿತು. ದೇಶಭಾಷೆಗೆ ಪ್ರಾಶಸ್ತ್ಯ ಕೊಡುವುದನ್ನು ಸದಾ ಲಕ್ಷ್ಯದಲ್ಲಿರಿಸಿಕೊಂಡಿದ್ದು, ಇಂದು ತನ್ನ ಭಾಷೆಯನ್ನು ಪೂರ್ಣವಾಗಿ ಸಬಲಗೊಳಿಸಿರುತ್ತದೆ.

ಹಿಂದೂದೇಶವು ಬಲು ಹಿಂದಿದೆ. ಕೇವಲ ಅಲ್ಪ ಸಂಖ್ಯಾಕರು ಸುಬರಹ ಬಲ್ಲವರದ್ದು, ಅವರೊಳಗೆ ಮುಷ್ಟಿಮೇಯರಾದ ಕೆಲವೇ ಮಂದಿ "ಸುಶಿಕ್ಷಿತರೆ"ಂದು ಮೆರೆಯುತ್ತಿರುವರು. ಎಲ್ಲ ಪ್ರಜೆಗಳಿಗೂ ಹರಡುವಂತಹ ಶಿಕ್ಷಣಕ್ರಮವನ್ನು ನಮ್ಮನ್ನಾಳುವವರು ಆಲೋಚಿಸಲಿಲ್ಲ. ತಾವಾಗಿ ಧೈರ್ಯದಿಂದ ಅದನ್ನು ಚರ್ಚಿಸಿ ಮುಂದೆ ತರಲಿಲ್ಲ. ಅಥವಾ ಅಷ್ಟು ದೊಡ್ಡ ವಿಚಾರವನ್ನು ಆಲೋಚಿಸಲು ನಮಗೆ ಅಂಜಿಕೆಯಾಯಿತು.

ಸುಶಿಕ್ಷಿತರಿಗೂ ಅಶಿಕ್ಷಿತರಿಗೂ ಇರುವ ಅಂತರವೆಂದರೆ, ಶಹಾರಾ ಮರುಭೂಮಿಯಲ್ಲಿನ ಮರಳರಾಶಿಗೂ ಅಲ್ಲಲ್ಲಿ ನಡುವೆ ಇರುವ ಚಿಕ್ಕ ಜಲಾಶಯಗಳಿಗೂ ಇದ್ದಷ್ಟೆ ಆಗಿದೆ. ಅದೇ ಕಾರಣದಿಂದ ನಾವು ಒಂದು ರಾಜಸತ್ತೆಯ ಕೆಳಗಿದ್ದೂ, ಅದೇ ಮಾನಸಿಕತೆಯಿಂದ ಪರಿವೇಷ್ಟಿತರಾಗಿಲ್ಲ. ಒಳಗೊಳಗೇ ನಮ್ಮಲ್ಲಿ ಇಷ್ಟು ಅಂತರವಿದೆ. ಜಾಪಾನ್, ಪರ್ಸಿಯಾ, ಅರೇಬಿಯಾ, ತುರ್ಕಿ ಮೊದಲಾದ ಕಡೆಗಳಲ್ಲಿ ಈ ಅಂತರ್ವಿಭಜನೆಯ ಆಸರೆಯನ್ನೆ ಕಡಿದುಹಾಕಿರುವರು.

ಪಶುಪ್ರಪಂಚದಲ್ಲಿನ ಕೆಲವು ಜೀವಿಗಳು ತಮ್ಮ ಕೈಕಾಲುಗಳ ಉಪಯೋಗವಿಲ್ಲದೆ, ತಮ್ಮ ಯಜಮಾನನ ಅನ್ನಕ್ಕಾಗಿಯೇ ಬದುಕಿರುವುದುಂಟು. ಆ ಜೀವಿಗಳಂತೆ ನಮ್ಮ ವಿಶ್ವವಿದ್ಯಾನಿಲಯಗಳ ಶಿಕ್ಷಣವಾಗಿದೆ. ಅಲ್ಲಿ ಆರಂಭವಾಗುವ ಶಿಕ್ಷಣವು ಪರಭಾಷೆಯದು; ಕಡತಂದ ಭಾಷೆಯಿಂದ ಕಡದಲ್ಲೆ ಬೆಳೆದು, ಬೆಳೆಸಿದವರ ಆಳಾಗಿ ಉಳಿದಿದೆ ಆ ಶಿಕ್ಷಣ ಮತ್ತು ಅದರ ಫಲ! ದೇಶೀಯರಿಗೆ ಅದರ ಸತ್ವಲ ದೊರೆವುದು ಕಡಿಮೆಯಾಗಿದೆ. ಕೆಲವೇ ಮಂದಿ ಮಾತ್ರ ವಿಶೇಷ ವಿಲಾಸವೆಂದು ಅದನ್ನು ನಡೆಸುತ್ತಾರೆ. ಪಾಶ್ಚಾತ್ಯ ಸಂಸ್ಕೃತಿಯ ಸಾರವು ನಮಗೆ ಬೇಕಾದರೂ, ಸರ್ವವೂ ಪಾಶ್ಚಾತ್ಯವಾದರೆ, ಮಾನಸಿಕತೆಯೊಂದು ಆ ಕಡೆ ವಾಲಿ, ದೇಶೀಯರ ವಿಷಯ ಅಲಕ್ಷ್ಯವು ತಲೆದೋರುವುದು. ದೇಶೀಯವೆಂಬುದರ ಮೇಲೆ ತಿರಸ್ಕಾರಹುಟ್ಟುವುದು. ಇದರಿಂದ ಪಾಶ್ಚಾತ್ಯರ ಆಳಾಗುವುದಕ್ಕಿಂತ ಹೆಚ್ಚಿನದೇನೂ ದೊರೆಯದು. ಅದಕ್ಕಾಗಿ ದೇಶೀಯ ಭಾಷೆಯು ಅವಶ್ಯವಾಗಿ ಬೇಕಾಗಿದೆ. ಅದರಿಂದ ಸ್ವದೇಶಪ್ರೇಮವು ವೃದ್ಧಿಗೊಳ್ಳಲು ತುಂಬ ಅಂಬು ಇದೆ. ಪ್ರಜೆಯ ಭಾಷೆಯಲ್ಲೆ ಪ್ರತಿ ನುಡಿಯುತ್ತಾನೆ; ಎಲ್ಲ ಪ್ರಜೆಗಳೂ ಸುಸಂಸ್ಕೃತರಾಗುತ್ತಾರೆ.

ಬಂಗಾಳವು ಈ ಕಡೆ ಬೇಗನೇ ಎಚ್ಚೆತ್ತಿದೆ. ಮಾಯ್ಕಲ್ ದತ್ತರು ಪದ್ಯದ ಮೂಲಕವೂ, ಬಂಕಿಮ್ ಚಂದ್ರರು ಗದ್ಯದ ಮೂಲಕವೂ ಬಂಗಾಲೀ ಭಾಷೆಯಲ್ಲಿ ನವಕ್ರಾಂತಿಯನ್ನುಂಟುಮಾಡಿದರು; ಜನರಲ್ಲಿ ಮಾತೃಭಾಷೆಯ ಪ್ರೇಮ ತುಂಬಿದರು. ಅದರ ಫಲವಿಂದು ಬಂಗಾಲದಲ್ಲಿ ಸ್ಪಷ್ಟ ಗೋಚರಿಸುತ್ತಿದೆ.

(೧೫ನೇ ಪುಟದಿಂದ ಮುಂದುವರಿದುದು)

ಭರತಮಾತೆಯೇ,—
"ನಿನ್ನುದರದಲಿ ಜನ್ಮ ಕೊಡು!
ಧರಿಸಲೆನಗೆ ಚಿಂದಿ ಬಟ್ಟೆಯಿರಲಿ!
ಕನಕಾನ್ನ ಬೇಡವಾ!
ಆದರೆ,—
ಆಸೆಕಾಲು ಭಯ ಮತ್ತು ಕಲೆಕ್ಟರ್ ಜೇಡರಿಲ್ಲದ ಸ್ಥಳಬೇಕವ್ವ! ನಾನು ಕೋಟ್ಯಾಧೀಶನಾಗಿದ್ದರೆ, ಅಂಥ ಸ್ಥಳಕ್ಕೆ ಎಕ್ರೆಗೆ ಮೂವತ್ತುಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ಕೊಂಡುಕೊಂಡು, ಅಲ್ಲಿ ಬಿದ್ದುಕೊಂಡಿರುವೆನು!"

—ಇದು ನನ್ನ ಪ್ರಾರ್ಥನೆ.

—ಕುಡ್ಪಿ ವಾಸುದೇವ ಶೆಣೈ.

ರಹಸ್ಯ ನೌಕಾರಚನೆ

ಜಾಪಾನಿನವರು ರಹಸ್ಯವಾಗಿ ನೌಕಾಬಲವನ್ನು ಹೆಚ್ಚಿಸುತ್ತಿರುವರೆಂದು ವಾರ್ತೆ. ಈ ಬಗ್ಗೆ ೫೫,೦೦೦೦೦೦ ಪವನು ವ್ಯಯದ ಒಂದು ಯೋಜನೆ ಸಿದ್ಧವಾಗಿದೆ. ಬ್ರಿಟಿಷರ ಸಿಂಗಪುರ ನೌಕಾನಿಲ್ದಾಣದಿಂದ ೨೦೦೦ ಮೈಲು ದೂರವಿರುವ ಫೊರ್ಮೊಸಾದ್ವೀಪದಲ್ಲಿ ಜಪಾನೀಯರ ಒಂದು ನೌಕಾ ನಿಲ್ದಾಣ ಏರ್ಪಡುವುದು.

ತಿರುಪತಿ ಮತ್ತು ತಿರುಮಲೆಯ ದೇವಾಲಯಗಳು!

ಶ್ರೀ ವೆಂಕಟೇಶನ ನಿವಾಸ.

ಕ್ಷೇತ್ರಮಾಹಾತ್ಮ್ಯದಲ್ಲಿ ಅಗ್ರಗಣ್ಯ.

ತಿರುಪತಿಯು, ದೇವದಾಸಿಯರಿಲ್ಲದ ಮಹಾಕ್ಷೇತ್ರ. ಇಲ್ಲಿ ಹರಿಹರರೆಂಬ ಭೇದವಿಲ್ಲ. ಶೈವರೂ ವೈಷ್ಣವರೂ ಇಲ್ಲಿ ಶ್ರೀ ವೆಂಕಟಪತಿಯನ್ನು ಆರಾಧಿಸುವಲ್ಲಿ ಸಮಾನವಾದ ಭಕ್ತಿಶ್ರದ್ಧೆಗಳನ್ನು ತೋರುವರು. ಶ್ರೀ ವೆಂಕಟೇಶನ ಮೂರ್ತಿಯು ಶಿವ-ಕೇಶವ ಮೂರ್ತಿಗಳೆರಡನ್ನೂ ಹೋಲುತ್ತಿದೆ.



ಗೋವಿಂದರಾಜಸ್ವಾಮಿಯ ದೇವಾಲಯ ಮತ್ತು ಕೆಳ. ಕೆಳಗಿನ ತಿರುಪತಿ.

ತಿರುಪತಿಯು, ತಿರುಮಲೆ ಪರ್ವತ ಶ್ರೇಣಿಗಳ ನಡುವೆ ಇರುವ ಸುಪ್ರಸಿದ್ಧ ಕ್ಷೇತ್ರವಾಗಿದೆ. ಇದರ ದಕ್ಷಿಣ ಮತ್ತು ಪಶ್ಚಿಮ ಪಾರ್ಶ್ವಗಳಲ್ಲಿ ಸಣ್ಣಪುಟ್ಟ ಬೆಟ್ಟಗಳು, ಒಂದರ ಮೇಲೊಂದರಂತೆ, ದಿಗಂತದವರೆಗೂ ಹಬ್ಬಿರುವುವು. ಈ ಪುಣ್ಯ ಕ್ಷೇತ್ರವು ಈಗಲೀಗ ಅಭಿವೃದ್ಧಿ ಹೊಂದುತ್ತಿರುವುದಾದರೂ, ಪಾಶ್ಚಿಮಾತ್ಯರ ನವನಾಗರಿಕತೆಯ ಸೋಂಕು ಇದಕ್ಕೆ ಇನ್ನೂ ಪೂರ್ತಿಯಾಗಿ ಸೋಂಕಿದುದಿಲ್ಲ. ಈ ಕ್ಷೇತ್ರದಲ್ಲಿಯೂ ಸುತ್ತಮುತ್ತಲೂ ೧೫ ದೇವಾಲಯಗಳಿರುವುವು. ಇವುಗಳ ಪೈಕಿ, ಶ್ರೀ ಗೋವಿಂದ ರಾಜ ಮತ್ತು ರಾಮಸ್ವಾಮಿ ದೇವರುಗಳನ್ನು ಯಾತ್ರಿಕರು ವಿಶೇಷವಾಗಿ ಆರಾಧಿಸುವರು.

ಬೆಟ್ಟದ ಮೇಲಿನ ಶ್ರೀ ವೆಂಕಟರಮಣ ದೇವರ ಆಲಯಕ್ಕೆ ನಡೆಯುತಕ್ಕ ಯಾತ್ರಿಕರು, ಮೊದಲು ಕಪಿಲತೀರ್ಥದಲ್ಲಿ ಸ್ನಾನಮಾಡಿ, ಕ್ಷೇತ್ರ ಸ್ವಾಮಿಯಾದ ಕಪಿಲೇಶ್ವರನನ್ನು ಸೇವಿಸುವರು. ಸಾಂಖ್ಯಮತ ಸ್ಥಾಪಕನಾದ ಕಪಿಲ ಮಹರ್ಷಿಯು ಈ ತೀರ್ಥವನ್ನು ನಿರ್ಮಿಸಿದನೆಂದು ಪ್ರತೀತಿ ಇದೆ. ಈ ತೀರ್ಥದಲ್ಲಿನ ಸ್ನಾನವು ಶ್ರಮಪರಿಹಾರಕವೂ, ಆನಂದದಾಯಕವೂ, ಪುಣ್ಯಪ್ರದವೂ ಆಗಿದೆಯೆಂದು ಭಾವಿಕರು ನಂಬಿರುವರು. ತಿರುಮಲೆ ಬೆಟ್ಟಗಳ ಮೇಲಿನಿಂದ ಅನೇಕ ಚಿಕ್ಕ ಚಿಕ್ಕ ಜಲಪಾತಗಳು ಈ ತೀರ್ಥದಲ್ಲಿ ಬೀಳುತ್ತವೆ. ಒಂದೊಂದು ಜಲಪಾತವೂ ಸುಮಾರು ೪೦-೫೦ ಅಡಿಗಳ ಮೇಲಿನಿಂದ ಬೀಳುವುದು. ಇವುಗಳಲ್ಲಿ ಅತಿ ದೊಡ್ಡ ಮತ್ತು ರಮ್ಯವಾಗಿರತಕ್ಕ ಒಂದು ಜಲಪಾತವು ಮಾತ್ರ ಈ ಕೊಳದಲ್ಲಿ ನೆಟ್ಟಗೇ ಬೀಳುವುದು. ಈ ತೀರ್ಥದ ಒಂದು ಪಾರ್ಶ್ವದಲ್ಲಿ ವಿಸ್ತಾರವಾದ ಬಂಡೆಯೂ ಮಿಕ್ಕೆಡೆಗಳಲ್ಲಿ ಶಿಲಾ ನಿರ್ಮಿತ ಸೋಪಾನಗಳೂ ಇವೆ. ಇದರ ಪಶ್ಚಿಮ ಭಾಗದಲ್ಲಿ, ಪ್ರಸ್ತುತ ಉಪಯೋಗದಲ್ಲಿಲ್ಲದ ಒಂದು ದಾರಿಯಿದೆ. ಬೆಟ್ಟದ ಮೇಲಣ ಶ್ರೀ ತಿರುಮಲೇಶನ ದೇವಾಲಯವನ್ನು ಕಟ್ಟಿಸಿ ಪ್ರಖ್ಯಾತನಾದ ತೊಂಡಮಾನ್ ಚಕ್ರವರ್ತಿಯು ಇದೇ ಮಾರ್ಗವಾಗಿ ಬೆಟ್ಟಕ್ಕೆ ಹೋಗುತಿದ್ದನಾಗಿ ಹೇಳುವರು.




ಗೋವಿಂದರಾಜಸ್ವಾಮಿಯ ದೇವಾಲಯ.

ಯಾತ್ರಾರ್ಥಿಯು ಈ ತಿರುಮಲೆ ಪರ್ವತವನ್ನು ಹತ್ತುವಾಗ, ಅದರಲ್ಲಿನ ಏಳು ಬೆಟ್ಟಗಳನ್ನು ಪ್ರಯಾಸದಿಂದ ದಾಟಿಹೋದ ಮೇಲೆಯೇ ವೆಂಕಟನಾಥನ ಆಲಯವನ್ನು ಸೇರಬಹುದು. ವಯೋವೃದ್ಧರೂ, ದುರ್ಬಲರೂ, ದೇಹಶ್ರಮವನ್ನು ತಡೆಯಲಾರದ ಆಗರ್ಭ ಶ್ರೀಮಂತರೂ ಸ್ವಲ್ಪ ಧನವ್ಯಯದಿಂದ ಢೋಲಿಗಳಲ್ಲಿ ಪ್ರಯಾಣಮಾಡುವರು. ಬೆಟ್ಟದ ಮೇಲಿನ ದಾರಿಯು ಒಂದೇ ಸಮಾನವಾಗಿಲ್ಲ. ಗಾಳಿಗೋಪುರದಿಂದ ಒಂದು ಮೈಲು ದೂರವು ಏರಿಳಿತಗಳಿಂದ ಕೂಡಿರುವುದು. ಈ ಆರೋಹಣದ ಕಡೆಯ ಭಾಗದ ಬೆಟ್ಟವನ್ನು ಮೊಣಕಾಲ ಪರ್ವತ ಅಥವಾ ಮೊಣಕಾಲ ಮುರಿ ಎಂದು ಕರೆಯುವರು. ಈ ಭಾಗವು ಬಹಳ ಕಡಿದಾಗಿರುವುದರಿಂದ ಏರಲು ಕಷ್ಟತರವಾಗಿದೆ; ಆದರೆ ಸೋಪಾನಗಳಿರುವ ಕಾರಣ, ಬಹಳ ಮಟ್ಟಿಗೆ ಅನುಕೂಲವಾಗಿರುವುದು. ಬೆಟ್ಟದ ತುದಿಯನ್ನು ಸೇರಿ, ಹತ್ತಿ ಬಂದ ಮಾರ್ಗದ ಕಡೆಗೆ ಹಿಂತಿರುಗಿ ನೋಡುವಲ್ಲಿ, ಸಾಲು ಸಾಲಾಗಿ ಹಬ್ಬಿರುವ ಬೆಟ್ಟಗಳ ನಡುವಣ ಸರ್ಪಾಕಾರದ ಶಿಲಾ ಸೋಪಾನ ಮಾರ್ಗವು ವಿಚಿತ್ರತರವಾಗಿ ಕಾಣುವುದು. ಗೈರಿಕಾದಿ ಧಾತುಗಳಿಂದ ಕೂಡಿದ ಈ ಪರ್ವತ ಪಂಕ್ತಿಗಳ ಗಾಳಿಯು ಸೋಕಿದ ಮಾತ್ರದಿಂದಲೇ ಅನೇಕರ ಜನ್ಮವ್ಯಾಧಿಗಳು ಹುಟ್ಟಡಗಿ ಹೋಗಿರುವುವೆಂದು ಹೇಳುವರು.

ಪ್ರಖ್ಯಾತವಾದ ಪ್ರತಿಯೊಂದು ಹಿಂದೂ ದೇವಾಲಯಕ್ಕೂ ಸ್ಥಳ ಪುರಾಣವಿದ್ದೇ ಇರುವುದು. ಶ್ರೀ ಬಾಲಾಜಿ ಕ್ಷೇತ್ರ ಪುರಾಣದಿಂದ ಇಲ್ಲಿನ ದೇವಾಲಯಗಳು ಈ ಪ್ರಪಂಚವು ಸೃಷ್ಟಿಯಾದಂದಿನಿಂದ ಇದ್ದಿರುವುವಾಗಿ ತಿಳಿದುಬರುವುದು. ಹಿಂದೂ ಕಾಲಮಾನ ವಿಭಾಗಗಳಾದ ಕೃತ (೧೭,೨೮,೦೦೦ ವರುಷಗಳು) ತ್ರೇತಾ (೧೨,೯೬,೦೦೦) ದ್ವಾಪರ (೮,೬೪,೦೦೦) ಕಲಿ (೪,೩೨,೦೦೦) (ಇವು ಆಗಸ್ಟಸ್‌ಕಾಲ ಪರಿಮಾಣದಲ್ಲಿ ಸ್ವರ್ಣ, ರಜತ, ಕೌಂಶ್ಯ, ಅಯೋ ಯುಗಗಳನ್ನು ಹೋಲುವುವು.) ಯುಗಗಳಲ್ಲಿ ಈ ಕ್ಷೇತ್ರವು ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧವಾಗಿತ್ತು. ಈ ಯುಗದಲ್ಲಿ ಇದಕ್ಕೆ "ವೆಂಕಟಾಚಲ" ಅಥವಾ "ವೆಂಕಟಾದ್ರಿ" ಎಂಬ ಹೆಸರು ರೂಢಿಯಾಗಿರುವುದು. ಪೂರ್ವದಲ್ಲಿ ಈ ಬೆಟ್ಟವು ಪರಮಶಿವನ ವಾಸಸ್ಥಾನವಾದ ಮೇರುಗಿರಿಯ ಶಿಖರಗಳಲ್ಲೊಂದಾಗಿದ್ದು, ಸಹಸ್ರ ಫಣ ಮಂಡಿತನಾದ ಆದಿಶೇಷನಿಗೂ ವಾಯುದೇವನಿಗೂ ಉಂಟಾದ ದ್ವಂದ್ವ ಯುದ್ಧ ಪ್ರಯುಕ್ತ ಜಾರಿ ಭೂಮಿಯ ಮೇಲೆ ಬಿದ್ದು, ಈ ಪರ್ವತವಾಗಿ ಪರಿಣಮಿಸಿತೆಂದು ಪುರಾಣದಿಂದ ತಿಳಿದುಬರುವುದು.

ಶ್ರೀಮಾನ್ ಸಿ. ಪಿ. ಜಗದೀಶ ಅಯ್ಯರ್‌ರವರ "ದಕ್ಷಿಣಭಾರತದ ದೇವಾಲಯಗಳು" ("South Indian Shrines") ಎಂಬ ಆಂಗ್ಲ ಗ್ರಂಥದಲ್ಲಿ—ಈ ತಿರುಮಲೆ ಪರ್ವತ ಪಂಕ್ತಿಗೆ ಸೇರಿದ ಏಳು ಬೆಟ್ಟಗಳೂ ಜಗದ್ರಕ್ಷಕನಾದ ಶ್ರೀ ಮಹಾ ವಿಷ್ಣುವು ಪವಡಿಸಿರುವ ಆದಿಶೇಷನ ಏಳು ಹೆಡೆಗಳೆಂದೂ, ಎಮ್. ಎಸ್. ಎಮ್. ರೈಲ್ವೆ ನಂದ್ಯಾಲ್ ಸ್ಟೇಷನಿಗೆ ಅನತಿದೂರದಲ್ಲಿ ಶ್ರೀ ಅಹೋಬಲ ನರಸಿಂಹ ಮೂರ್ತಿಯು ನೆಲಸಿರುವ ಅಹೋಬಲ ಕ್ಷೇತ್ರವು ಆ ಆದಿಶೇಷನ ಮಧ್ಯಭಾಗವೆಂದೂ, ನೈಜಾಮ್ ಸ್ಟೇಟ್ ರೈಲ್ವೆ ಕರ್ನೂಲಿಗೆ ಸಮೀಪದಲ್ಲಿರುವ ಶ್ರೀ ಶೈಲಕ್ಷೇತ್ರವು ಆ ಅನಂತನ ಪುಚ್ಛ ಭಾಗವೆಂದೂ ಪುರಾಣಪ್ರಸಿದ್ಧಿಯಿರುವುದಾಗಿ ಹೇಳಿಯದೆ. ಈ ವಿಧವಾಗಿ ಸೃಷ್ಟಿಸ್ಥಿತಿಲಯಗಳಿಗೆ ಕಾರಣ ಕರ್ತನಾದ ಸರ್ವೇಶ್ವರನ ಬ್ರಹ್ಮ-ವಿಷ್ಣು-ಶಿವಾತ್ಮಕವಾದ ದಿವ್ಯ ಲೀಲಾ ವಿಭೂತಿಯನ್ನು ಸರ್ವ ಜನಾದರಣೀಯವಾಗಿ ಮಾಡಿರುವುದು ಬುದ್ಧಿಕುಶಲತೆಯಷ್ಟೆ. ಶ್ರೀಮತ್ ಅನಂತನ ವಲಯಾಕಾರವನ್ನು ಅನಂತವಾದ ಕಾಲಚಕ್ರಕ್ಕೆ ಹೋಲಿಸುವುದು ಸರ್ವ ಜನಾಂಗಗಳಿಗೂ ಸಾಮಾನ್ಯ ವಿಷಯವಾಗಿದೆ.

ಅನುಮಾನ ಪ್ರಮಾಣಗಳಾದ ಪುರಾಣೋಕ್ತ ಕಥೆಗಳಂತಿರಲಿ. ಈ ದಿವ್ಯ ದೇಶದ ಪ್ರಾಚೀನತೆಯನ್ನು ವ್ಯಕ್ತಪಡಿಸುವ ಇತಿಹಾಸ ಪ್ರಸಿದ್ಧವಾದ ಪ್ರಮಾಣಗಳು ಸಹ ಅನೇಕವಾಗಿವೆ. ಸನಾತನ ಧರ್ಮೋದ್ಧಾರಕರೂ ಶ್ರೀ ವಿಶಿಷ್ಟಾದ್ವೈತಮತಕ್ಕೆ ಆಚಾರ್ಯ ಪುರುಷರೂ ಆದ ಶ್ರೀ ರಾಮಾನುಜಾಚಾರ್ಯರು (ಕ್ರಿ. ಶ. ೧೧ನೇ ಶತಮಾನ) ಈ ಕ್ಷೇತ್ರವನ್ನು ಶೈವರ ಕೈಯಿಂದ ತಪ್ಪಿಸಿದರು. ಶ್ರೀ ವಿಜಯನಗರ ಕರ್ಣಾಟಕ ಸಾಮ್ರಾಜ್ಯವನ್ನಾಳಿ ಸಾರ್ವಭೌಮರಲ್ಲಿ ಅಗ್ರಗಣ್ಯನೆಂದು ಪ್ರಖ್ಯಾತಿ ಪಡೆದ ಶ್ರೀ ಕೃಷ್ಣದೇವರಾಯರು (ಕ್ರಿ. ಶ. ೧೫೦೯-೩೦) ಮತ್ತು ಇವರ ಧರ್ಮಪತ್ನಿಯಾದ ಚಿನ್ನಾದೇವಿ, ತಿರುಮಲದೇವಿಯರ ಭಕ್ತಿ ವಿಗ್ರಹಗಳು ಈ ಆಲಯವನ್ನಲಂಕರಿಸಿರುವುವು. ಅಲ್ಲದೆ ಇವರು ಈ ಕ್ಷೇತ್ರಕ್ಕೆ ನಡೆತಂದ ಕಾಲವನ್ನೂ ಮತ್ತು ಮಾಡಿದ ಧರ್ಮಕಾರ್ಯಗಳನ್ನೂ ತಿಳಿಸುವ ಶಾಸನವು ಸಹ ಇಲ್ಲಿರುವುದು. ವಿಜಯನಗರ ಸಾಮ್ರಾಜ್ಯದ ಸಿಂಹಾಸನವನ್ನು ಚಂದ್ರಗಿರಿಗೆ ಬದಲಾಯಿಸಿದ ಶ್ರೀ ವೆಂಕಟಪತಿರಾಯರು (ಕ್ರಿ. ಶ. ೧೫೮೬-೧೬೧೪) ಮೊದಲಾದವರ ಪ್ರತಿಮೆಗಳು ಸಹ ಇಲ್ಲಿ ಕಂಡುಬರುವುವು.



ಬೆಟ್ಟದ ಮೇಲಿನ ದೇವಸ್ಥಾನ, ತಿರುಮಲೆ.



ತೋಳಿ.

ದಕ್ಷಿಣದೇಶದ ದ್ರಾವಿಡ ಸಂಪ್ರದಾಯದ ಶಿಲ್ಪಕ್ಕೂ ಉತ್ತರ ಹಿಂದೂಸ್ಥಾನದ ಇಂಡೋಸಾರಸನಿಕ್ ಸಂಪ್ರದಾಯಕ್ಕೂ, ರಚನಾಕ್ರಮ ಮತ್ತು ಕೆತ್ತನೆಯ ವಿಚಾರದಲ್ಲಿ ವಿಶೇಷ ಭೇದವಿದೆಯೆಂಬುದು ನಿರ್ವಿವಾದಾಂಶವಾಗಿದೆ. ಉತ್ತರ ಹಿಂದೂಸ್ಥಾನದ ಸುಪ್ರಸಿದ್ಧ ದೇವಾಲಯಗಳೆಲ್ಲಾ ಸ್ವಮತೋನ್ಮತ್ತ ಧುರಂಧರರೂ ವಿಗ್ರಹ ಭೇದಕರೂ ಆದ ಮುಸಲ್ಮಾನರಿಂದ ನಾಶವಾಗಿ ಬಿಟ್ಟವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಸರಿ. ದಕ್ಷಿಣ ದೇಶದಲ್ಲಿನವು ಬಹಳ ಮಟ್ಟಿಗೆ ಈ ಅಪಾಂತರಕ್ಕೆ ಆಹುತಿಯಾಗದೆ ಉಳಿದುಕೊಂಡುವು. ದಕ್ಷಿಣದೇಶದ ದೇವಾಲಯಗಳು ಶಿಲ್ಪಶಾಸ್ತ್ರವನ್ನು ಸ್ವಲ್ಪವೂ ಅತಿಕ್ರಮಿಸಿಲ್ಲ. ಪೂರ್ವಾಭಿಮುಖವಾದ ಈ ಆಲಯ ಗೋಪುರವೂ ವಿಶಾಲವಾದ ಪ್ರಾಕಾರವೂ, ಸಾವಿರ ಕಾಲುಮಂಟಪವೂ, ಸ್ವರ್ಣಮಯವಾದ ಇಕ್ಷಿಸ ಧ್ವಜಸ್ತಂಭವೂ, ಗರ್ಭಗೃಹವೂ ಮೇಲ್ಕಂಡ ಸಂಪ್ರದಾಯವನ್ನನುಸರಿಸಿ ಕಟ್ಟಲ್ಪಟ್ಟವುಗಳೇ ಆಗಿವೆ.

ಶಿಲ್ಪ ಕಲಾನೈಪುಣ್ಯದಲ್ಲಿ ಈ ಆಲಯವು ಕಂಚಿ, ಶ್ರೀರಂಗ, ರಾಮೇಶ್ವರ, ಬೇಲೂರು, ಹಳೇಬೀಡಿನ ದೇವಾಲಯಗಳೊಂದಿಗೆ ಸರಿಹೋಲದಿದ್ದರೂ ಕ್ಷೇತ್ರ ಮಹಾತ್ಮ್ಯದಲ್ಲಿ ಮೇಲ್ಕಂಡವುಗಳಾವುವೂ ಇದಕ್ಕೆ ಸಮಾನವಾದ ಖ್ಯಾತಿಯನ್ನು ಪಡೆದಿಲ್ಲವೆಂದು ಡಾ। ಫರ್ಗೂಸನ್‌ರವರು "ಇಂಡಿಯನ್ ಆರ್ಕಿಟೆಕ್ಚರ್" ಎಂಬ ತಮ್ಮ ಗ್ರಂಥದಲ್ಲಿ ಬರೆದಿರುವರು. ಈ ಅಂಶವು ವಸ್ತುತಃ ನಿಜವಾಗಿರುವುದು. ಶೈವವೈಷ್ಣವರಲ್ಲಿ ಭೇದಭಾವವಿರುವುದಾದರೂ ಶಿಲ್ಪಿಶಾಸ್ತ್ರಾನುಸಾರವಾಗಿ ಶಿವಕೇಶವ ಮೂರ್ತಿಗಳೆರಡನ್ನು ಹೋಲುತ್ತಿರುವ ಈ ಶ್ರೀ ವೆಂಕಟೇಶ್ವರ ಮೂರ್ತಿರಾಜವು, ಹರಿಹರರಲ್ಲಿ ಭೇದವಿಲ್ಲದಿರುವುದನ್ನು ತಾನಾಗಿಯೇ ವ್ಯಕ್ತಪಡಿಸುತ್ತಿರುವುದು. ಈ ಮೂರ್ತಿಗೆ ನಾಲ್ಕು ಕೈಗಳಿರುವುವು. ಅವುಗಳ ಪೈಕಿ ಹಿಂಬದಿಯಲ್ಲಿನ ಎರಡು ಕೈಗಳಲ್ಲಿ ಶಂಖಚಕ್ರಗಳು ಕಂಗೊಳಿಸುತ್ತಿವೆ. ಮುಂಭಾಗದಲ್ಲಿರುವ ಎರಡು ಕೈಗಳಲ್ಲಿ ಒಂದು ಅಭಯ ಮುದ್ರಾಂಕಿತವು. ಮತ್ತೊಂದು ಶ್ರೀ ಸ್ವಾಮಿಯ ಕಟಿಪ್ರದೇಶವನ್ನಲಂಕರಿಸಿರುವುದು. ಎಲ ಮುಂಗೈಯಲ್ಲಿ ಭುಜಗಭೂಷಣನ (ಪರಮಶಿವನ) ಚಿಹ್ನೆಗಳಲ್ಲೊಂದಾದ ಭುಜಂಗವಲಯವು ವಿರಾಜಿಸುತ್ತಿರುವುದು. ಈ ಕಾರಣಗಳಿಂದಲೇ ಶೈವ-ವೈಷ್ಣವ ಮತಸ್ಥರೀರ್ವರೂ ಶ್ರೀ ವೆಂಕಟನಾಥ ಸನ್ನಾರಾಧಿಸುವುದರಲ್ಲಿ ಸಮಾನವಾದ ಭಕ್ತಿಶ್ರದ್ಧೆಗಳನ್ನು ತೋರುತ್ತಿರುವರು.

ಹಿಂದೂದೇಶದಲ್ಲಿರುವ ದೇವಾಲಯಗಳಲ್ಲಿ ಮೇಲ್ಕಂಡ ಮಹಿಮಾ ವಿಶೇಷಗಳಿಂದ ಕೂಡಿರುವವು ಕಡಮೆ. ತಲೆಗಳನ್ನು ಮುಂಡನಮಾಡಿಕೊಂಡು, ಅರಿಸಿನ ಬಣ್ಣದ ಬಟ್ಟೆಗಳನ್ನುಟ್ಟುಕೊಂಡು, ಬಾಯಿ ಬೀಗಗಳನ್ನು ಹಾಕಿಕೊಂಡು, ಗೋವಿಂದ ನಾಮಸಂಕೀರ್ತನ ಪರಾಯಣರಾಗಿ, ಈ ಭವರೋಗ ವೈದ್ಯನ ದರ್ಶನ ಕುತೂಹಲಿಗಳಾಗಿ ಗುಂಪು ಗುಂಪಾಗಿ ಕಾದಿರುವ ಭಕ್ತಾವಳಿಯನ್ನು ಒಂದು ಬಾರಿ ನೋಡಿದರೆ, ಮತ್ತೆ ಆ ದೃಶ್ಯವನ್ನೆಂದಿಗೂ ಮರೆಯಲಾರೆವು.

ದಕ್ಷಿಣದೇಶದ ಇತರ ದೇವಾಲಯಗಳಲ್ಲಿರುವಂತೆ ದೇವದಾಸಿಯರಿಲ್ಲದಿರುವುದೂ ಮತ್ತು ಶ್ರೀ ವೆಂಕಟ್ರಮಣ ದೇವರ ಪಕ್ಕದಲ್ಲಿ ಶ್ರೀ ಮಹಾಲಕ್ಷ್ಮಿಯಿಲ್ಲದಿರುವುದೂ ಇಲ್ಲಿ ಗಮನಿಸತಕ್ಕ ವಿಷಯಗಳು.

ತಿರುಮಲೆಯಲ್ಲಿ ಬ್ರಹ್ಮೋತ್ಸವವು ಆಶ್ವಯುಜ (ಸಪ್ಟಂಬರ-ಅಕ್ಟೋಬರ) ಶುದ್ಧ ಪಾಡ್ಯ ಮೊದಲು ಹತ್ತು ದಿನಗಳವರೆಗೆ ನಡೆಯುವುದು. ಈ ಕಾಲದಲ್ಲಿ ವೆಂಕಟರಮಣ ಸ್ವಾಮಿಯವರಿಗೂ, ತಿರುಪತಿಗೆ ಮೂರು ಮೈಲು ದೂರದ ಆಲಮೇಲು ಮಂಗಾಪುರದಲ್ಲಿ ನೆಲೆಗೊಂಡಿರುವ ಪದ್ಮಾವತೀ ದೇವಿಯವರಿಗೂ ಕಲ್ಯಾಣೋತ್ಸವ, ರಥೋತ್ಸವಗಳು ಬಹಳ ವೈಭವದಿಂದ ನಡೆಯುವುವು. ಈ ಬ್ರಹ್ಮೋತ್ಸವದ ಐದನೆಯ ದಿನದಲ್ಲಿ ನಡೆಯುವ ಗರುಡೋತ್ಸವದ ದೃಶ್ಯವು ವಿಶೇಷವು ನಯನಾನಂದಕರವು. ಜನವರಿ-ಫೆಬ್ರವರಿಯಲ್ಲಿ ರಥೋತ್ಸವ, ಮಾರ್ಚಿ-ಏಪ್ರಿಲಿನಲ್ಲಿ ತೆಪ್ಪೋತ್ಸವ, ಡಿಸೆಂಬರ ಡಿಸೆಂಬರ-ಜನವರಿಯಲ್ಲಿ ಮುಕ್ಕೋಟಿ ಏಕಾದಶಿ—ಈ ಮೂರು ಉತ್ಸವಗಳು ಇತರ ಉತ್ಸವ ದಿನಗಳಲ್ಲಿ ಮುಖ್ಯವಾದುವು. ದೇವಾಲಯದ ಹುಂಡಿಯ ವರಮಾನವು ೮ ಲಕ್ಷಗಳ ಪ್ರಮಾಣವಿದೆ.

ತಿರುಪತಿಯಲ್ಲಾಗಲಿ, ತಿರುಮಲೆ ಬೆಟ್ಟದಲ್ಲಾಗಲಿ ಯಾತ್ರಿಕರು ಇಳಿಯುವ ವಸತಿಗಳಿಗಾವ ಕೊರತೆಯೂ ಇಲ್ಲ. ದೇವಾಲಯಕ್ಕೆ ಸಂಬಂಧಪಟ್ಟ ವಿಶಾಲವಾದ ಧರ್ಮಸತ್ರಗಳಲ್ಲದೆ ಮೈಸೂರು ಶ್ರೀಮನ್ಮಹಾರಾಜರವರ ಧರ್ಮಶಾಲೆಗಳೂ ಇರುವುವು. ಇತರ ಯಾತ್ರಿಕ ಮಂಟಪಗಳೂ, ಒಂದು ಧರ್ಮ ಇಂಗ್ಲಿ ವೈದ್ಯಶಾಲೆಯೂ ಇವೆ.

ಬೆಟ್ಟಕ್ಕೆ ಡೋಲಿಯಲ್ಲಿ ಹೋಗಿ ಬರುವವರಿಗೆ ಸುಮಾರು ನಾಲ್ಕು ರೂಪಾಯಿ ಖರ್ಚು ತಗಲುತ್ತದೆ.

ದೇವಾಲಯದ ಗರ್ಭಗುಡಿಯ ಸುವರ್ಣಮಯ ಬಾಗಿಲನ್ನು ಬೆಳಿಗ್ಗೆ ೬ ಘಂಟೆಗೆ ತೆರೆವರು. ಇದನ್ನು ಯಾತ್ರಿಕರಿಗೆ ತಿಳಿಯಪಡಿಸಲು ದೊಡ್ಡ ಜಾಗಟೆಯು ಬಾರಿಸಲ್ಪಡುವುದು. ಪಾರುಪತ್ಯಗಾರರ ಅಥವಾ ದೇವಸ್ಥಾನಾಧಿಕಾರಿಗಳ ಅನುಮತಿ ಪಡೆದವರು ಮಾತ್ರ ಒಳಕ್ಕೆ ಹೋಗಬಹುದು. ಆ ಸಮಯದಲ್ಲಿ ಗರ್ಭಗುಡಿಯ ಬಾಗಿಲಲ್ಲಿ ಸ್ವಾಮಿಗೆ ಸುಪ್ರಭಾತ ಮತ್ತು ಸಂಗೀತ ಸೇವೆಗಳು ನಡೆಯುವುವು. ಇವಾದ ಬಳಿಕ ಈ ಆಲಯದ ಪದ್ಧತಿಯಂತೆ ಒಳಗಿರತಕ್ಕವರಿಗೆ ದೇವತಾದರ್ಶನವೂ ತೀರ್ಥಪ್ರಸಾದಗಳೂ ದೊರೆವುವು. ತದನಂತರ ಇತರ ಯಾತ್ರಿಕರಿಗೆ ಈ ವಿಶ್ವರೂಪದರ್ಶನ ಭಾಗ್ಯವು ಲಭಿಸುವುದು. ಈ ವೇಳೆಯಲ್ಲಿ ಸ್ವಾಮಿಗೆ ಕರ್ಪೂರ ಆರತಿಯನ್ನು ಮಾಡಿಸಬೇಕಾದರೆ ಅದಕ್ಕೆ ಮೊದಲು ಪಾರುಪತ್ಯಗಾರರ ಆಫೀಸಿನಲ್ಲಿ ಒಂದು ರೂಪಾಯಿಯನ್ನು ಸಲ್ಲಿಸಿ ಚೀಟಿಯನ್ನು ಪಡೆದಿರಬೇಕು. ಈ ವಿಶ್ವರೂಪದರ್ಶನ ಕಾಲದಲ್ಲಿ ಯಾತ್ರಿಕರಿಗೆ ಹಂಚತಕ್ಕ ತೀರ್ಥಪ್ರಸಾದಗಳು ಹಿಂದಿನ ರಾತ್ರಿಯಲ್ಲಿ ಶ್ರೀ ವೆಂಕಟೇಶ್ವರನು ಸ್ವೀಕರಿಸಿದುದರ ಶೇಷವೇ ಎಂಬ ನಂಬಿಕೆ ಇರುವುದು. ಗೋಷಾ ಸ್ತ್ರೀಯರು ದೇವಾಲಯದ ಕಟ್ಟಳೆಯ ಪ್ರಕಾರ ನಿಯಮಿತವಾದ ವೇಳೆಗಳಲ್ಲಿ ಮಾತ್ರ ಬೇಕಾದಾಗ ಹೊಂದಿ ದೇವರನ್ನು ದರ್ಶಿಸಬಹುದಲ್ಲದೆ ಇತರ ವೇಳೆಗಳಲ್ಲಿ ದೇವಸ್ಥಾನದ ಅಧಿಕಾರಿಗಳ ಅಪ್ಪಣೆಪಡೆದು ಪ್ರತ್ಯೇಕವಾಗಿ ದೇವರನ್ನು ದರ್ಶಿಸಬಹುದು.

ತೋಮಾಲಾ ಸೇವೆ, ಅರ್ಚನೆ, ಧರ್ಮದರ್ಶನ, ರಾತ್ರಿಯ ಧರ್ಮದರ್ಶನ, ಏಕಾಂತ ಸೇವೆ, ಪೂಲಂಗಿ ಸೇವೆ, ಅಭಿಷೇಕದರ್ಶನ, ಮೊದಲಾದ ಅನೇಕ ಸೇವೆಗಳು ಶ್ರೀ ವೆಂಕಟೇಶ್ವರ ಸ್ವಾಮಿಗೆ ಸಲ್ಲಿಸಲ್ಪಡುತ್ತಿವೆ. ಇದಕ್ಕೆ ತರಗತಿವಾರಾಗಿ ದರಗಳನ್ನು ಇರಿಸಿರುವರು.

ದಕ್ಷಿಣ ದೇಶದಲ್ಲಿ ತಿರುಪತಿಯು, ಕಾಶಿಯಷ್ಟೆ ಪ್ರಸಿದ್ಧ ಕ್ಷೇತ್ರ

ಕೃತಕ ಭೂಕಂಪ


1935ರ ಮಹಾಭೂಕಂಪದ ನಂತರ, ಭೂಕಂಪಗಳನ್ನು ತಡೆಯಬಲ್ಲ ಕಟ್ಟಡಗಳನ್ನು ರಚಿಸಲು ಯತ್ನಗಳಾಗಿವೆ. ಕ್ವೆಟ್ಟದಲ್ಲೀಗ ಕಬ್ಬಿಣದ ತಗಡುಗಳ ಮನೆಗಳನ್ನು ರಚಿಸಿ, ಕೃತಕ ಭೂಕಂಪಗಳನ್ನುಂಟುಮಾಡಿ—ಈ ಹೊಸ ಕಟ್ಟಡಗಳ ಪರೀಕ್ಷೆ ಮಾಡುತ್ತಿರುವರು.



ಕಪಿಲ ತೀರ್ಥ.

ಪುರಿ

ಹಿಂದೂದೇಶದ ರಥೋತ್ಸವಗಳಲ್ಲಿ, ಪುರಿಯ ರಥೋತ್ಸವವು ಹೆಸರಾದುದು. ಹತ್ತುಸಾವಿರ ಜನರು ಅಲ್ಲಿಯ ರಥಗಳನ್ನೆಳೆವರು. ಲಕ್ಷೋಪಲಕ್ಷ ಜನರು ಈ ಮಹೋತ್ಸವಕ್ಕೆ ನೆರೆವರು. ಅನೇಕರು ರಥದಡಿಗೆ ಬಲಿಯಾಗುವುದೂ ಇತ್ತು. ಪುರಿಯ ರಥೋತ್ಸವವು, ಪುರಾಣೋಕ್ತ ಇಂದ್ರನ ದಿಗ್ವಿಜಯದ ವರ್ಣನೆಯನ್ನು ನೆನಪಿಗೆ ತರುವುದು.



ಪುರಿಯ ಜಗತ್ಪ್ರಸಿದ್ಧ ಶ್ರೀ ಜಗನ್ನಾಥ ದೇವಾಲಯದ ಹೊರಗಿನ ನೋಟ. ಇದರ ಸುತ್ತುಮುತ್ತಲೂ ನೂರಕ್ಕಿಂತ ಹೆಚ್ಚು ಚಿಕ್ಕ ಪುಟ್ಟ ದೇವಾಲಯಗಳಿವೆ.

ಒಂದೊಂದು ಪಟ್ಟಣವು ಒಂದೊಂದು ವೈಶಿಷ್ಟ್ಯವನ್ನುಳ್ಳದಾಗಿದೆ. ಕಾಶಿಯು ಹೆಸರಾಂತ ವಿದ್ಯಾಪೀಠವಾಗಿ, ಢಿಲ್ಲಿಯು ರಾಜಧಾನಿಯಾಗಿ, ಅಲ್ಲಹಾಬಾದವು ಪವಿತ್ರ ಸಂಗಮವಾಗಿ ಹೆಸರು ಹೊಂದಿವೆ. ಪುರಿಯು ರಥೋತ್ಸವಕ್ಕೆ ಹೆಸರಾದುದು. ಯಾತ್ರಾಕ್ಷೇತ್ರ, ಮಹಾರಥೋತ್ಸವ—ಇದನ್ನುಳಿದು ಇಲ್ಲಿ ಮತ್ತಾವುದೂ ಇಲ್ಲ.

ಪುರಿಯು, ಬಂಗಾಳ ನಾಗಪುರ ರೈಲ್ವೆ ಲೈನಿನಲ್ಲಿ, ಕಲ್ಕತ್ತೆಯಿಂದ ೩೧೦ ಮೈಲುಗಳ ದೂರದಲ್ಲಿ, ಸಮುದ್ರ ತೀರದಲ್ಲಿರುವ ಒಂದು ನಗರ. ರಮ್ಯವಾದ ನೋಟಗಳೂ ಒಳ್ಳೆಯ ಹವೆಯೂ ಇವೆ. ಇದನ್ನು "ಶ್ರೀಕ್ಷೇತ್ರ"ವೆಂದೂ ಹೇಳುವರು.

ಪುರಿಯಲ್ಲಿ ಹೆಸರಾದುದು ಶ್ರೀ ಜಗನ್ನಾಥ ದೇವಾಲಯವು. ಇದು, ರೈಲ್ವೆ ಸ್ಟೇಷನಿನಿಂದ ೨ ಮೈಲುಗಳ ದೂರದಲ್ಲಿ ಕಂಗೊಳಿಸುತ್ತಿದೆ. ಇಬ್ಬದಿಗಳಲ್ಲಿಯೂ ಸಂತೆಗಳ ಸಾಲು, ಸ್ತಂಭ, ಉದ್ದಕ್ಕೆ ನೀಡಿದ ಮೆಟ್ಟಲುಗಳ ಸಾಲುಗಳು; ಎದುರಲ್ಲಿ ದೇವಾಲಯದ ಶಿಖರಗಳು; ಮಹಾದ್ವಾರ; ದೇವಾಲಯದ ಮುಂದೆ, ವರುಷದ ಎಲ್ಲ ದಿನಗಳಲ್ಲೂ ಕಿಕ್ಕಿರಿದಿರುವ ಭಜಕವೃಂದ!

ಜಗನ್ನಾಥ ದೇವಾಲಯವು ಜಗತ್ಪ್ರಸಿದ್ಧವಾಗಿದೆ. ಅದನ್ನು ನೋಡಿದವರೆಲ್ಲ, ಅದರ ಶಿಲ್ಪಕಲೆಯನ್ನೂ ಭವ್ಯತೆಯನ್ನೂ ಬಹುವಿಧವಾಗಿ ಹೊಗಳಿರುವರು. ಈ ದೇವಾಲಯವನ್ನು ಕಟ್ಟಿಸಿ ಏಳುನೂರು ವರುಷಗಳಾದುವೆನ್ನುವರು. ಹನ್ನೆರಡನೆ ಶತಮಾನದಲ್ಲಿ ಚುರಂಗದೇವನು ಇದನ್ನು ಕಟ್ಟಿಸಲು ಆರಂಭಿಸಿ, ತನ್ನ ಜೀವಿತ ಕಾಲದಲ್ಲಿ ಪೂರೈಸದೆ ಹೋದನು. ಈ ಕಾರ್ಯವನ್ನು ಮುಂದೆ ಅನಂಗ ಭೀಮದೇವನು ವಹಿಸಿ ೧೧೯೭ರಲ್ಲಿ ಪೂರೈಸಿದನಾಗಿ ಚರಿತ್ರವು ಹೇಳುತ್ತದೆ. ದೇವಾಲಯದ ಇತಿಹಾಸವನ್ನು ಇಷ್ಟು ಹೇಳಬಹುದಾದರೂ, ಇದರಲ್ಲಿನ ವಿಗ್ರಹದ ಕುರಿತು ಯಾರೂ ಎಣಿಕೆ ಹಾಕಿಲ್ಲ. ಅದು ಅಸಂಖ್ಯಾಕ ವರುಷಗಳಿಂದ ಇರುವುದಾಗಿ ಹೇಳುವರು. ಬೌದ್ಧಕಾಲದಲ್ಲಿಯೂ ಇದರ ಸಂಬಂಧವಿದೆ.

ಜಗನ್ನಾಥ ವಿಗ್ರಹವನ್ನು ಭಗವಾನ್ ಜಗದ್ಗುರು ಆದಿ ಶಂಕರಾಚಾರ್ಯರು ಪುನಃಪ್ರತಿಷ್ಠಿಸಿದರು.

ಜಗನ್ನಾಥ ದೇವಾಲಯದ ಆಸುಪಾಸುಗಳಲ್ಲಿ ಸುಮಾರು ನೂರಇಪ್ಪತ್ತು ದೇವಾಲಯಗಳಿವೆ. ಇವುಗಳಲ್ಲಿ ವಿಮಲಾದೇವಿ (ದುರ್ಗಾ) ಲಕ್ಷ್ಮೀ, ಸ್ವರ್ಗದ್ವಾರ, ಶ್ರೀಗೋವರ್ಧನ, ಮಾಧವ, ಶ್ವೇತಗಂಗಾ, ಇವು ಮುಖ್ಯವಾಗಿವೆ. ಉಳಿದುವೆಲ್ಲ ಅಷ್ಟು ಪ್ರಸಿದ್ಧವಲ್ಲ.

ಅನೇಕ ತೀರ್ಥಗಳೂ ಅಲ್ಲಲ್ಲಿವೆ. ಇವುಗಳಲ್ಲಿ "ನರೇಂದ್ರ ಸರೋವರ"ವು ಹೆಸರುವಾಸಿಯಾಗಿದೆ. ಅಕ್ಷಯ ತ್ರತೀಯೆಯಲ್ಲಿ, ಶ್ರೀಜಗನ್ನಾಥನು ಚಂದನ ಯಾತ್ರೆಗೆ ಹೊರಟಾಗ, ಇಪ್ಪತ್ತೆರಡು ದಿನಗಳವರೆಗೆ ಈ ತೀರ್ಥದಲ್ಲಿ ಸ್ನಾನ ಮಾಡುವುದುಂಟು. ಇದು ವರುಷಂಪ್ರತಿ ನಡೆವ ಉತ್ಸವವಾಗಿದೆ.

ಪುರಿಯ ರಥೋತ್ಸವವು ಫೆಬ್ರವರಿ ತಿಂಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗುವುದು. ಇಲ್ಲಿಯಷ್ಟು ದೊಡ್ಡ ರಥವು ಹಿಂದೂದೇಶದ ಮತ್ತಾವ ಭಾಗದಲ್ಲಿಯೂ ಇಲ್ಲ. ಹಲವು ಗಾಲಿಗಳಿದ್ದು, ೫೦ ಅಡಿಗಳಿಗಿಂತಲೂ ಎತ್ತರವಾಗಿದೆ. ಒಂದು ಚಿಕ್ಕ ಬಂಗಲೆಯಷ್ಟು ವಿಸ್ತೀರ್ಣವುಳ್ಳ ಮಹಾರಥವಿದು. ಇದನ್ನು ಎಳೆವ ಹಗ್ಗಗಳ ವ್ಯಾಸವು ಒಂದಡಿಯಷ್ಟು ಇರುವುದು. ಹತ್ತು ಸಾವಿರಕ್ಕೂ ಕಡಮೆಯಾಗದಷ್ಟು ಜನರು ಈ ರಥವೆಳವುದರಲ್ಲಿ ಭಾಗಿಯಾಗುವರು. ಸುಮಾರು ಎರಡು ಲಕ್ಷ ಜನರು ಈ ರಥೋತ್ಸವಕ್ಕಾಗಿ ನೆರೆಯುವರು. ದೊಡ್ಡ ನಗರಗಳ ದೊಡ್ಡ ರಸ್ತೆಗಳಿಗಿಂತಲೂ ಅಗಲವಾದ ರಸ್ತೆಯೊಂದು ಈ ರಥಕ್ಕಾಗಿ ಇದೆ.

ಮೊದಲು, ಜಗನ್ನಾಥನ ದರ್ಶನಕ್ಕಾಗಿ, ರಥೋತ್ಸವದ ಸಮಯದಲ್ಲಿ ನುಗ್ಗಾಟವಾಗಿ, ಆ ನುಗ್ಗಾಟದಲ್ಲೆ ಅನೇಕರು ಮರಣಕ್ಕೀಡಾಗುತಿದ್ದರು. ಕೆಲವರು ತಿಕ್ಕಾಟದಲ್ಲಿ ಮುಂದೆ ನೂಕಲ್ಪಟ್ಟು, ರಥದಡಿಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿದ್ದರು. ಕೆಲವು ಅಂಧಶ್ರದ್ಧೆಯ ಭಜಕರು, ನೆಟ್ಟಗೆ ಸ್ವರ್ಗಕ್ಕೇರುವೆ[illegible]ಗ್ರಹಿಕೆಯಿಂದ, ರಥವು ಓಡುವಾಗ ಅದರಡಿಗೆ ಬಿದ್ದು ಪ್ರಾಣಕೊಡುತ್ತಿದ್ದರು. ಈಗ, ಅದೆಲ್ಲವೂ ನಿಲ್ಲಿಸಲ್ಪಟ್ಟಿದೆ. [illegible]ವು ವಿಶೇಷವಾಗಿ ಪ್ರಾಣಹಾನಿಯಾಗದಂತೆ ಪೋಲೀಸರ ಸುವ್ಯವಸ್ಥೆ ಮಾಡಿದೆ.

ರಥೋತ್ಸವವಲ್ಲದೆ ಚಂದನಯಾತ್ರೆ, [illegible]ಯಾತ್ರೆ, ಜನ್ಮಾಷ್ಟಮಿ ಮೊದಲಾದ ಯಾತ್ರೆಗಳೂ ಹಬ್ಬಗಳೂ ಅಲ್ಲಿ ಜರುಗುತ್ತಿರುತ್ತವೆ.

ಪುರಿಗೆ ಹೋದ ಯಾತ್ರಾರ್ಥಿಗಳು ಪ್ರತ್ಯೇಕ ಅಡಿಗೆ ಮಾಡಿಕೊಳ್ಳುವ ಪದ್ಧತಿಯಿಲ್ಲ. ದೇವಾಲಯದ [illegible]ಯಲ್ಲಿ "ಮಹಾಪ್ರಸಾದ"ವು ವಿಕ್ರಯವಾಗುತ್ತಿದೆ. ದುಡ್ಡುಕೊಟ್ಟು ಇದನ್ನು ತೆಗೆದುಕೊಂಡು ಊಟಮಾಡುವರು. ಯಾತ್ರೆಯ ಸಮಯದಲ್ಲಿ ದೇವಾಲಯದವರು, ಒಂದುದಿನಕ್ಕೆ ಒಂದೂವರೆ ಲಕ್ಷದಷ್ಟು ಜನರಿಗೆ ಇಂತಹ ಪ್ರಸಾದವನ್ನು ಕೊಡುವರು. ಸುಮಾರು ೨೫೦ ಅಡುಗೆ ಭಟ್ಟರೂ ಅವರ ಸಹಾಯಕರೂ ಕೂಡಿ ಸುಮಾರು ೭೯೦ ಮಂದಿ, ಈ ಭೋಜನವನ್ನು ತಯಾರಿಸುವರು. ಇಷ್ಟುದೊಡ್ಡ ಪ್ರಮಾಣದಲ್ಲಿ ದೇಶದ ಮತ್ತಾವ ಕಡೆಯಲ್ಲಿಯೂ ಅಡುಗೆ ತಯಾರಿಸಲ್ಪಡುವುದಿಲ್ಲ.

ಪುರಿಯ ವಿಶೇಷವೇನೆಂದರೆ, ಎಲ್ಲ ಹಿಂದೂಗಳೂ ದೇವಾಲಯವನ್ನು ಪ್ರವೇಶಿಸಬಹುದಾಗಿದೆ. ಆದರೆ, ತೀರ "ಅಸ್ಪೃಶ್ಯ"ರೆಂಬವರು ಮಾತ್ರ ಹೊರಗೇ ಉಳಿವರು. "ಮಹಾಪ್ರಸಾದ"ವೊಂದು ಮಾತ್ರ ಯಾರ ಸ್ಪೃಶ್ಯದಿಂದಲೂ ಭ್ರಷ್ಟವೆನಿಸುವುದಿಲ್ಲವಂತೆ.



ಪುರಿಯ ಜಗನ್ನಾಥ ದೇವಾಲಯದ ರಥೋತ್ಸವದ ದೃಶ್ಯ. ಶ್ರೀ ವಿಷ್ಣುವಿನ ವಿಗ್ರಹವನ್ನು ರಥದಲ್ಲಿರಿಸಿ ಸಾವಿರಾರು ಜನರು ರಥ ಎಳೆಯುವರು. ರಥಕ್ಕೆ ನಾಲ್ಕು ಮಹಡಿಗಳಿವೆ!

ಕುಸೀದ (BANKING)

ಕುಸೀದವೃತ್ತಿಯು ಮೊದಲು ಅಕ್ಕಸಾಲಿಗರಿಂದ ಹುಟ್ಟಿತು. ಮುಂದೆ, ಅದು ಬಹುತರದ ಮಾರ್ಪಾಟುಗಳನ್ನು ಹೊಂದಿ, ಈಗಣ ಸುಧಾರಿತ ಸ್ಥಿತಿಗೆ ಬಂದಿದೆ. ಈ ಲೇಖದಲ್ಲಿ ಕುಸೀದವೃತ್ತಿಯ ಮೂಲ ಮತ್ತು ಬೆಳೆವಣಿಗೆಯನ್ನು ಸಂಕ್ಷೇಪವಾಗಿ ಕೊಡಲಾಗಿದೆ.

(ಲೇಖಕರು: ಶ್ರೀಯುತ ಎಸ್. ಎನ್. ಹೊಳ್ಳರು)



'ಕುಸೀದ' ಎಂದರೆ ಬೇಂಕ್ ವ್ಯವಹಾರ. 'ಬೇಂಕು'ಗಳಲ್ಲಿ ಯೋಗ್ಯ 'ಜವಾಬ್ದಾರಿ' ಕೊಟ್ಟು ಹಣವನ್ನು ಸಾಲವಾಗಿ ಪಡೆಯಬಹುದು. ನಮ್ಮಲ್ಲಿಯ ಹಣವನ್ನು ಭದ್ರವಾಗಿಟ್ಟು ಬಡ್ಡಿ ಹುಟ್ಟಿಸಿಕೊಳ್ಳಬಹುದು" ಎಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯದೆಯಿಲ್ಲ. ತೆರುವುದು, ತರುವುದು, ಕೊಳ್ಳುವುದು, ಕೊಡುವುದು, ಅರ್ಥಾತ್, ಹಣದ ಕೈಯಿಂದ ಕೈಬದಲಾವಣೆಯು ಸುಲಭವಾಗುವ ರೀತಿಯಲ್ಲಿ ಬೇಂಕುಗಳು ಸಹಕಾರಿಯಾಗುವವು. ಈ ಬೇಂಕು ವ್ಯವಹಾರವೆಂದರೇನೆಂದು ನೋಡೋಣ.

ಮೊತ್ತಮೊದಲು ಈ ಕುಸೀದ ವೃತ್ತಿಯು ಅಕ್ಕಸಾಲಿಗರಿಂದ ಹುಟ್ಟಿತು. ಬಂಗಾರದ ಕೆಲಸದವರಾಗಿ ಯಾವಾಗಲೂ ಹೆರರ ನಗನಾಣ್ಯಗಳನ್ನು ಭದ್ರವಾಗಿಟ್ಟುಕೊಳ್ಳುವ ಜವಾಬ್ದಾರಿಯರಿತು ತಮ್ಮ ಪ್ರಾಮಾಣಿಕತನಕ್ಕೆ ಕುಂದು ಬಾರದಂತೆ ವರ್ತಿಸುತ್ತಿದ್ದ ಇವರಲ್ಲಿ ಭದ್ರತೆಗಾಗಿ ನಾಗರಿಕರು ತಮ್ಮ ಹಣಕಾಸುಗಳನ್ನು ಇರಿಸುವ ರೂಢಿ ಪೂರ್ವದಲ್ಲಿತ್ತು. ಹಾಗೆ ಅಕ್ಕಸಾಲಿಯಲ್ಲಿ ಹಣವಿಟ್ಟ ಶ್ರೀಮಂತನಾದವನು ಇನ್ನೊಬ್ಬನಿಗೆ ಸಲ್ಲಿಸುವ ಸಾಲವಿದ್ದರೆ ಆ ಅಕ್ಕಸಾಲಿಯಿಂದ ಪಡೆದು ತೆರುವುದೂ, ಸಾಲಿಗನು ಪುನಃ ಆ ಹಣವನ್ನು ಅದೇ ಅಕ್ಕಸಾಲಿಯಲ್ಲಿ ತನ್ನ ಹೆಸರಲ್ಲಿ ಇಡುವುದೂ ಬಳಕೆಯಲ್ಲಿತ್ತು. ಈ ರೀತಿಯು ಬರಬರುತ್ತಾ ಸುಧಾರಣೆಗೊಂಡು ಅಕ್ಕಸಾಲಿಯ ಮೇಲಿನ ವಿಶ್ವಾಸವು ಹೆಚ್ಚಿ ಆತನ 'ಕೈಚೀಟಿ'ಗೆ ಹಣದ ಯೋಗ್ಯತೆ ಬರುವಂತಾಯಿತು. ಅಂದರೆ ರಾಮನ ಹಣವು ತನ್ನಲ್ಲಿದೆಯೆಂದು ಅಕ್ಕಸಾಲಿಯು ಬರವಣಿಗೆಯಲ್ಲಿ ಕೊಟ್ಟರೆ ಆ ಚೀಟಿಯ ಆಧಾರದಿಂದ ರಾಮನು ಭೀಮನಿಂದ



"ಮೊರೊಕ್ಕೊ"ದಲ್ಲಿ ಕಲ್ಲುಪ್ಪಿನ ಇಂತಹ ತುಂಡುಗಳು, ಕೆಲವು ದೇಶಗಳಲ್ಲಿ "ಚಿಲ್ಲರೆ" ಹಣವಾಗಿ ಉಪಯೋಗವಾಗುತ್ತವೆ. ಈ ಚಿತ್ರದಲ್ಲಿ ಉಪ್ಪಿನ ಹಣದ ಗಂಟನ್ನು ನೋಡಿರಿ. ಆತನು "ಧನವಂತ!" ನಾಗುತ್ತಿದ್ದಾನೆ.

ಚೀಟಿಯಲ್ಲಿ ಕಾಣಿಸಿದಷ್ಟು ಹಣವನ್ನು ಸರಾಗವಾಗಿ ಪಡೆಯುವಂತಾಗುವ ವ್ಯವಸ್ಥೆಯಾಯಿತು. ಹೀಗೆ ರಾಮನ ಲೆಕ್ಕದಲ್ಲಿ ಅಕ್ಕಸಾಲಿಯಲ್ಲಿದ್ದ ಹಣವು ಭೀಮನ ಹೆಸರಿಗೆ ಬದಲಾಯಿಸಲು ಬರುವ ಈ "ವಜಾ ಜವಾ" ಪದ್ಧತಿಯಿಂದಾಗಿ ಹಣವನ್ನು ನೋಡದೆ ಹಣದ ಕೈಬದಲಾವಣೆಯು ವ್ಯವಹಾರದಲ್ಲಿ ಬಂತು.

ಒಬ್ಬ ಧನಿಕನು ಲಕ್ಷಗಟ್ಟಲೆ ಯಲ್ಲಿ ಭದ್ರವಾಗಿರಿಸಿದ ಹಣವಿರಬಹುದು. ಒಂದು ವೇಳೆ ಅವನಿಗೆ ಅದರಿಂದ ಕೆಲವು ನೂರುಗಟ್ಟಲೆ—ಯಾ—ಹತ್ತುಗಟ್ಟಲೆ ಹಣವನ್ನು ಬೇರೆಯವರಿಗೆ ತೆರುವ ಅಗತ್ಯವು ಬರಬಹುದು. ಅಂಥ ಸಂದರ್ಭದಲ್ಲಿ ಧನಿಕನ ಹೆಸರಲ್ಲಿ ತನ್ನಲ್ಲಿರುವ ಹಣದ ಪೂರ್ಣ ಮೌಲ್ಯವನ್ನು ಕಾಣಿಸಿದ ಚೀಟಿಯನ್ನು ಅಕ್ಕಸಾಲಿಯು ಕೊಡುವ ಅವಶ್ಯಕತೆಯಿಲ್ಲ. ನೂರಕ್ಕೆ ಹತ್ತುಹತ್ತರ ಹತ್ತು ಚೀಟಿಗಳನ್ನು ತೆರುವುದೆಂದು ಗೊತ್ತಾಯಿತು. ಇದೇ ಮೊತ್ತಮೊದಲಿನ "ನೋಟಿನ" ರೂಪ.


ಕೆಲಕಾಲದ ಅನಂತರ ಈ ನೋಟು ಕೈಚೀಟುಗಳ ಸ್ಥಾನದ ಚೆಕ್ಕುಗಳು ಬಂದುವು.

ಈ ಅಕ್ಕಸಾಲಿಗಳ ಯಾ ಬೇಂಕರುಗಳ ಮೇಲಿನ ಭರವಸೆಯು ಬೆಳೆಯಿತು. ಇವರಿಂದಾಗಿ ದುಡ್ಡಿನ ಅದಲು ಬದಲಾವಣೆಯು ಸುಲಭವಾಯಿತೆನ್ನಬಹುದು. ಹೀಗೆ ಭದ್ರತೆಗಾಗಿ ತಮ್ಮಲ್ಲಿರಿಸಲ್ಪಟ್ಟ ಹಣದಿಂದ, ಠೇವಣಾತಿದಾರರ ಹೆಸರಲ್ಲಿ ಹೊರತೆರುವುದು ಕಡಿಮೆಯಾಗಿ ಬೇಂಕರನ ಕೈಯ್ಯಲ್ಲಿ ಯಾವಾಗಲೂ ತುಂಬ ನಿಧಿ ಉಳಿಯುತ್ತಿತ್ತು. ಈ ಉಳಿಕೆಯ ಉಪಯೋಗವಿಲ್ಲದುದರಿಂದ ಅದನ್ನು ಇನ್ನೂ ಭದ್ರವಾದ ಖಜಾನೆಯಲ್ಲಿ ಬೀಗಮುದ್ರೆಯೊಳಗಿರಿಸಬಹುತ್ತಿತ್ತು. ಇದಲ್ಲದೆ ಬೇರೆಯವರು ಯೋಗ್ಯ ಒತ್ತೆಯಿಟ್ಟು ಇವರಿಂದ ಹಣ ಸಾಲಪಡೆವುದೂ ಮೊದಲಾಯಿತು. ಸುಮ್ಮನೆ ಖಜಾನೆಯಲ್ಲಿ ಕಿಲುಬುಹಿಡಿವ ಬದಲು ಯೋಗ್ಯ ಜವಾಬ್ದಾರಿಯ ಮೇಲೆ ಸಾಲಕೊಡುವುದು ಹಿತವೆಂದೂ, ಹಾಗೆ ಉಪಯೋಗಕ್ಕೆ ಅಡಚಣೆಯ ವೇಳೆ ತೆತ್ತ ಸಾಲಕ್ಕೆ ಬಡ್ಡಿಗಳಿಸುವುದು ಲಾಭಕರವೆಂದೂ ಬೇಂಕರ ಯಾನೆ ಅಕ್ಕಸಾಲಿಯು ಕಂಡುಕೊಂಡನು. ಭದ್ರತೆಗಾಗಿ ತನ್ನ ಖಜಾನೆಯಲ್ಲಿರಿಸಿದ ಧನಿಕನು ಇದಕ್ಕೆ ಆಕ್ಷೇಪವೆತ್ತನೆ? ಅವನ ಹಣದ ಮೇಲೆ ಇವ ಲಾಭಗಳಿಸುವುದನ್ನವ ಸಹಿಸುವನೆ? ಅದಕ್ಕಾಗಿ ತನ್ನ ದ್ರವ್ಯವನ್ನು ಕಾದುಕೊಳ್ಳುವುದಕ್ಕಾಗಿ ಧನಿಕನು ಅಕ್ಕಸಾಲಿಗೆ ಕೊಡಲಿರುವ ಬಾಡಿಗೆಯನ್ನು ಅಕ್ಕಸಾಲಿ "ಮಾಫಿ" ಬಿಟ್ಟನು; ಮಾತ್ರವಲ್ಲ, ಧನಿಕನ ಬಂಡವಾಳಕ್ಕೆ ಬಡ್ಡಿಯನ್ನೂ ತೆರುವುದೆಂದು ಗೊತ್ತಾಯಿತು. ಹೀಗೆ ಕುಸೀದ ವ್ಯವಹಾರವು ಹುಟ್ಟಿತು. ಕುಸೀದ ಪದ್ಧತಿಯು ಇಷ್ಟರಲ್ಲೆ ನಿಲ್ಲಲಿಲ್ಲ. ಬರಬರುತ್ತಾ ತುಂಬ ಬದಲಾವಣೆಗಳಾದುವು. ಒಂದು ಪಟ್ಟಣದಲ್ಲಿ ಹತ್ತು ಜನರ ಬಂಡವಾಳವಿರುವ ಒಂದು ಚಿಕ್ಕ ಬೇಂಕಿದೆಯೆನ್ನಿ. ಆ ಹತ್ತು ಜನರ ದುಡ್ಡೂ ಒಂದೇ ಬೇಂಕಿನಲ್ಲಿರುವುದರಿಂದಾಗಿ ಅವರೊಳಗೆ ಒಬ್ಬನು ಮತ್ತೊಬ್ಬನಿಗೆ ಕೊಂಡ ಸಾಲವನ್ನು ಪಾವತಿಕೊಡುವಲ್ಲಿ ಏನೂ ಕಷ್ಟವಿಲ್ಲ. ಸಲ್ಲತಕ್ಕ ಹಣಕ್ಕೆ ಒಂದು ಅಧಿಕಾರಪತ್ರವನ್ನು ಬರಾಯಿಸಿ ಕೊಟ್ಟರಾಯಿತು. ಅದನ್ನು ಬೇಂಕಿಗೆ ಕೊಟ್ಟಲ್ಲಿ ಸಾಲಗಾರನ ಲೆಕ್ಕದಿಂದ ಪತ್ರದಲ್ಲಿ ಕಾಣಿಸಿದಷ್ಟು ಹಣವು "ವಜಾ" ಆಗಿ ಸಾಲಿಗನ ಹೆಸರಲ್ಲಿ "ಜಮಾ" ಕಟ್ಟಿಕೊಳ್ಳಲಾಗುವುದು.


ಒಂದೇ ಬೇಂಕಿನಲ್ಲಿ ನಡೆಯುವ ವ್ಯವಹಾರವು ಹೀಗಾಯಿತು. ಒಂದರ ಬದಲು ಬೇರೆ ಬೇರೆ ಬೇಂಕುಗಳಲ್ಲಿ ಲೆಕ್ಕವಿರುವ ಬಂಡವಾಳಗಾರರೊಳಗಿನ ವ್ಯವಹಾರವು ಹೇಗೆ ನಡೆಸಲ್ಪಡುವುದೆಂದು ನೋಡೋಣ.

ಒಂದೂರಲ್ಲಿ ಎರಡು ಬೇಂಕುಗಳಿವೆಯೆಂದು ತಿಳಿಯುವ. ಒಂದು ಬೇಂಕಿನ "ಗಿರಾಕಿ"ಯು ಮತ್ತೊಂದು ಬೇಂಕಿನ ಗಿರಾಕಿಗೆ ಹಣ ಸಲ್ಲಿಸಬೇಕೆಂದು ತಿಳಿಯುವ. ಆಗ ವ್ಯವಹಾರವೆಂತು ನಡೆವುದು? ನೋಡೋಣ.

ಮೊದಲನೆಯ ಗಿರಾಕಿ ತನ್ನ ಬೇಂಕಿನಿಂದ ಪಡೆವಂತೆ ಎರಡನೆ ಬೇಂಕಿನ



ಈ ಚಿತ್ರದಲ್ಲಿ ಕಾಣುವುದು ಪೂರ್ವದೇಶಗಳ ಹಳೇ ನಾಣ್ಯಗಳು. ಮೇಲಿನ ಉಂಗುರ ರೂಪದ ನಾಣ್ಯಗಳು ಹಳೇ ಈಜಿಪ್ಟಿನವು. ಅದರ ಕೆಳಗಿನವುಗಳಲ್ಲಿ ಮೊದಲನೆಯದೂ ಕೊನೆಯದೂ ೫೦೦೦ ವರ್ಷಗಳ ಹಿಂದಿನವು. ನಡುವಿನದೊಂದು ೭೦೦೦ ವರ್ಷಗಳದು, ಅವೆಮಣ್ಣಿನದು. ಕೆಳಗಿನವು ಅಸೀರಿಯಾದ ಅವೆಮಣ್ಣಿನ ಪ್ರೊಮಿಸರಿ ನೋಟುಗಳು.



ಇದರಲ್ಲಿ, ಮೇಲಿನದು ಅಲಸ್ಕದ "ಗಾಳ" ನಾಣ್ಯ. ಅದರ ಕೆಳಗಿನವು "ಕೈ ಆಣಿ"ಯ ನಾಣ್ಯ, ಪೂರ್ವದ ಇಂಗ್ಲಾಂಡಿನದು; ಕಬ್ಬಿಣದ ಉಂಗುರಗಳ ಸಾಲಿನಂತಿರುವವು ಮೊರೊಕ್ಕೋದ ನಾಣ್ಯ; ಮರದ ಗೆಲ್ಲು ಗಳಂತಿರುವುದು ಮಲಕ್ಕಾದ ಮರದ ನಾಣ್ಯ; ಗೆಲ್ಲುಗಳಂತೆ "ಚಿಲ್ಲರೆ" ಮುರಿದು ಕೊಡುವಂಥದ್ದು. ಕೆಳಗಿನ ಚಿಕ್ಕ ಉಂಗುರವು ಆಫ್ರಿಕದ ಜುಲು ಎಂಬಲ್ಲಿರುವ ಹಳೆ ನಾಣ್ಯ.

(೨೧ನೇ ಪುಟಕ್ಕೆ ಮುಂದುವರಿಯಿದ)



ಆಕಾಶದೀಪ!

(ಲೇಖಕರು:...ಎಚ್. ವಿಠ್ಠಲ ಶೆಟ್ಟಿ)

ತಾರಾರಹಿತ ನೀಲಾಕಾಶದ ಮತ್ತು ನೀಲಸಾಗರದ ನಡುವೆ ತಣ್ಣನೆಯ ಗಾಳಿಯು ಸುಳಿಯುತಿತ್ತು. ಅನಂತ ಜಲನಿಧಿಯಲ್ಲಿ ಪ್ರಭಾತಕಾಲದ ಹೊಂಬಣ್ಣವು ನೃತ್ಯಗೈಯುತಿತ್ತು. ಸಾಗರವು ಶಾಂತವಾಗಿತ್ತು. ಸರ್ವತ್ರ ನೀರವ! ಹಡಗೊಂದು ಸಾವಧಾನದಿಂದ ಓಡುತಿತ್ತು. ಹಡಗಿನ ನಾಯಕನು ಹಿಂದೆ ನೋಡಿದನು. ಬಂಧಿಯು ವಿಮುಕ್ತನಾಗಿದ್ದನು. ಆಶ್ಚರ್ಯದಿಂದ ಅವನು ಕೇಳಿದನು. "ಬುದ್ಧಗುಪ್ತ! ನೀನು ಹೇಗೆ ವಿಮುಕ್ತನಾದೆ?"

ಖಡ್ಗವನ್ನು ತೋರಿಸುತ್ತ ಬುದ್ಧಗುಪ್ತನು ಹೇಳಿದನು. "ಇದರಿಂದ!"

"ಹಾಗಾದರೆ ನೀನು ಮತ್ತೆ ಬಂಧಿಯಾಗುವೆ!"

"ಯಾಕೆ? ಈ ಜಹಜಿನ ಯಜಮಾನ ಮಣಿಭದ್ರನು ಅನಂತಜಲಧಿಯಲ್ಲಿ ಸೇರಿದನು. ನಾಯಕ! ನೀನು ಇನ್ನೂ ನಿದ್ರಾವಸ್ಥೆಯಲ್ಲಿರುವಂತೆ ತೋರುತ್ತದೆ. ಈ ಹಡಗು ಈಗ ಸಂಪೂರ್ಣ ನನ್ನವರ ವಶದಲ್ಲಿದೆ. ನಾನೇ ಈಗ ಇದರ ಒಡೆಯನಿರುವೆನು." ನಗುತ್ತ ಬುದ್ಧಗುಪ್ತನೆಂದನು.

"ನೀನು ಜಲದಸ್ಯುವಿರುವೆ ಬುದ್ಧಗುಪ್ತ! ನಿನ್ನನ್ನು ಯಾವ ವಿಧದಲ್ಲೂ ನಂಬಲಾಗುವುದಿಲ್ಲ. ನಂಬಿ ಮೋಸಹೋಗುವಷ್ಟು ಅವಿವೇಕಿಯೂ ನಾನಿರುವುದಿಲ್ಲ."

"ನೀನು ನನ್ನನ್ನು ನಂಬು, ಇಲ್ಲವಾದರೆ ನಂಬದಿರು. ಏನಾದರೇನು? ಹಡಗಿನ ಯಜಮಾನನೀಗ ನಾನು."

'ಜಲದಸ್ಯು! ಕಳ್ಳವೃತ್ತಿಯ ಬುದ್ಧಗುಪ್ತ! ಅದನ್ನೀಗಲೇ ಪರೀಕ್ಷಿಸುವೆನು."

"ನಾಯಕ! ನೀಚವೃತ್ತಿಯವನೆಂದು ನಿಂದಿಸದಿರು. ಈ ನೀಚವೃತ್ತಿಯಿಂದಲೇ ನಾನು ಇಂದು ಶ್ರೀಮಂತನಾದೆನು. ಈ ಹಡಗಿನ ಒಡೆಯನಾದೆನು. ಅದಕ್ಕೆ ಸಾಕ್ಷಿ ಇದೇ-ಇಲ್ಲೇ-ಸಮೀಪವಿರುವ ಕೋಣೆಯಲ್ಲಿ ಮಣಿಭದ್ರನ ಮಗಳಿರುವಳು. ಇದೋ! ಅವಳೇ ಈ ಕಡೆ ಬಂದಳು."

ನಾಯಕನು ಚಂಪೆಯನ್ನು ನೋಡಿದನು. ಅವನಿಗೀಗ ಖಚಿತವಾಯಿತು ಹಡಗು ಸಮುದ್ರಕಳ್ಳರ ವಶವಾಯಿತೆಂದು. ಆದರೂ ಅವನು ಸಾವಧನಾಗುತ್ತ "ಚಂಪಾ! ಏನು? ನಿನ್ನ ತಂದೆಯ ಹಡಗಿನ ಪರಿಸ್ಥಿತಿ?"

"ಏನಾಗುವುದು? ಇವರ ವಶವಾಗಿದೆ. ತಂದೆಯ ಹಡಗು ಪತಿಯ ಕೈಸೇರಿದೆ."

"ಈ ಅಧಮನು ನಿನ್ನ ಪತಿಯೇ? ಛೀ ಧರ್ಮವು ಹಾಳಾಗುತ್ತದೆ. ಸ್ತ್ರೀಯರು ಕೆಡುತ್ತಿರುವರು."

"ಧರ್ಮವು ಹಾಳಾಗುತ್ತಿರುವುದಿಲ್ಲ. ಅಧರ್ಮವು ಹಾಳಾಗುತ್ತಿರುವುದು. ಕೆಟ್ಟವೃತ್ತಿಯಲ್ಲಿದ್ದವನನ್ನು ಸನ್ಮಾರ್ಗಕ್ಕೊಯ್ಯುವುದು ಧರ್ಮಗ್ಲಾನಿಯೇ? ನಾಯಕ! ಆತ್ಮಸಾಕ್ಷಿಯಾಗಿ ಹೇಳುತ್ತೇನೆ. ಬುದ್ಧಗುಪ್ತರನ್ನು ಸತ್ಪಥಕ್ಕೆ ಹಚ್ಚುತ್ತೇನೆ."

ಮಣಿಭದ್ರನ ಹಡಗು ಬುದ್ಧಗುಪ್ತನ ವಶವಾದ ನಂತರ ಅವಳು ತನ್ನ ಪ್ರೇಮವನ್ನು ಅವನ ಮೇಲೆ ಕೂರಿಸಿದ್ದಳು. ಇದರಿಂದ ಅವನು ಸಂತಪ್ತನಾದನು! ಕೂಡಲೇ ಅವನು ಗಟ್ಟಿಯಾಗಿ "ಬುದ್ಧಗುಪ್ತ! ಈಗಲೇ ನಮ್ಮವರಿಗೆ ಸೂಚಿಸಿ, ನಿಮ್ಮನ್ನು ಹೊರಗಟ್ಟುವೆನು." ಬುದ್ಧಗುಪ್ತನು ಹೊರಗೆ ಬೊಟ್ಟು ತೋರಿಸುತ್ತ, "ನೀನು ಆ ಜಹಜನ್ನು ನೋಡಿರುವೆಯಾ? ಅದರಲ್ಲೂ ನೂರಾರು ಜನ ನನ್ನ ಪಂಗಡಿಗರಿರುವರು. ಇದರಲ್ಲೂ ಇರುವರು. ಈ ಸಮಯ ನಿನ್ನ ಸಾವು ನಿಶ್ಚಯ."

ನಾಯಕನು ಮರುಮಾತಾಡಲಿಲ್ಲ.

* * * *

"ನಾಯಕನನ್ನು ಕ್ಷಮಿಸಿದ ನಿಮ್ಮ ದೊಡ್ಡ ಮನಸ್ಸನ್ನು ನೋಡಿ ನನಗೆ ಸಂತೋಷವಾಯಿತು."

"ಚಂಪಾ! ನಿನಗೆ ನನ್ನಮೇಲೆ ಅನಿರೀಕ್ಷಿತವಾಗಿ ಪ್ರೀತಿಯಿದ್ದುದನ್ನು ನೋಡಿ ನನಗೂ ಸಂತೋಷ."

"ನೀವಿನ್ನು ಇಂದಿನಿಂದ ನನ್ನ ಒಡೆಯರು ಹೇಗೋ ಹಾಗೆಯೇ ಈ ಹಡಗಿನ ಒಡೆಯರು."

"ಸಂತೋಷ ಚಂಪಾ! ಇರಲಿ. ಈಗ ಈ ಹಡಗು ಎಲ್ಲಿಗೆ ಹೋಗುತ್ತದೆ?"

"ಬಾಲಿದ್ವೀಪದ ಸಮೀಪವಿರುವ ದ್ವೀಪಕ್ಕೆ!"

"ಅದಕ್ಕೆ ಹೆಸರಿಲ್ಲವೇ ಚಂಪಾ!"

"ಇಲ್ಲ. ಆದರೂ ನಾವದನ್ನು ನವೀನ ದ್ವೀಪವೆನ್ನುತ್ತೇವೆ."

"ಹಾಗಾದರೆ ನಾವು ಅದಕ್ಕೊಂದು ಹೊಸ ಹೆಸರು ಇಡೋಣ."

"ಏನೆಂದು?" ಚಂಪೆಯು ಆತುರದಿಂದ ಕೇಳಿದಳು.

"ಚಂಪಾದ್ವೀಪ!" ಇಬ್ಬರೂ ನಕ್ಕರು.

೨.

ಚಂಪೆಯು ಹೇಳತೊಡಗಿದಳು. "ನಾನು ಚಿಕ್ಕಂದಿನಿಂದಲೂ ತಂದೆಯೊಡನೆ ಹಡಗಿನಲ್ಲಿ ಇರುತ್ತಿದ್ದೆ. ಕಾರಣ, ನನ್ನ ತಾಯಿಯು ಬೇಗನೇ ಪರಲೋಕಕ್ಕೆ ತೆರಳಿದಳು. ನನಗೆ ಅಣ್ಣತಮ್ಮಂದಿರಾರೂ ಇರಲಿಲ್ಲ. ಆದ್ದರಿಂದ ನನ್ನ ತಂದೆಯು ನನ್ನನ್ನು ಹಡಗಿನಲ್ಲೇ ಕರೆದುಕೊಂಡುಹೋಗುತ್ತಿದ್ದ. ಹಡಗೇ ನನ್ನ ಮನೆಯಾಯಿತು.

ಪ್ರತಿದಿನ ಈ ಹಡಗು ಜಾವಾ-ಸುಮಾತ್ರಾ ದ್ವೀಪಗಳಿಗೆ ಹೋಗಿ ವ್ಯಾಪಾರ ಮಾಡುತ್ತಿತ್ತು. ಆದರೇನು? ನಮ್ಮ ಹಡಗು ದುಷ್ಟಹಡಗುಗಳವರ ಕೈಸೇರಿತು. ಹಾಯ್......."

"ಚಂಪಾ! ಕ್ಷಮಿಸು. ಇದಕ್ಕೆ ನಾನೇ ಕಾರಣನು. ಕೇವಲ ನಿರುದ್ಯೋಗದ ಹೊಡೆತವನ್ನು ಸಹಿಸದೆ ಈ ಚಂಡಾಲ ವೃತ್ತಿಗೆ ಇಳಿದೆ. ಚಂಪಾ! ಆಣೆ ಇಟ್ಟು ಹೇಳುತ್ತೇನೆ. ಇಂದೇ ಈ ಅಧಮವೃತ್ತಿಗೆ ತಿಲಾಂಜಲಿ ಕೊಟ್ಟೆ. ಇದೇ ಹಡಗಿನಲ್ಲಿ ವ್ಯಾಪಾರಮಾಡುತ್ತ ನಾವು ಸುಖವಾಗಿರೋಣ."

"ನಾನು ನಿಮ್ಮ ಕೈಹಿಡಿದುದಕ್ಕೆ ಸಾರ್ಥಕವಾಯಿತು. ನಿಮ್ಮನ್ನು ಆ ದುರ್ಮಾರ್ಗದಿಂದ ವಿಮುಖರನ್ನಾಗಿ ಮಾಡುವುದೇ ನನ್ನ ಜೀವನದ ಗುರಿ."

ಬುದ್ಧಗುಪ್ತನ ಹೃದಯದಲ್ಲಿ ವಿದ್ಯುತ್ ಸಂಚಾರವಾದಂತಾಯಿತು ರೋಮಕೂಪವು ಪುಲಕಿತವಾಯಿತು. ಹೃದಯದಲ್ಲಿ ಒಂದು ಧ್ವನಿಯು ಧ್ವನಿಸಿತು. ಅದು ಅವನಿಗೆ ಹೇಳಿತು. "ಬುದ್ಧಗುಪ್ತ! ನೀನೇ ಧನ್ಯ!"

ಚಂಪೆಯು ಮತ್ತೆ ಹೇಳಿದಳು. "ಪ್ರಿಯತಮ! ಈ ಮನೋಹರ ಸುಸಂಧಿಯಲ್ಲಿ ನನ್ನದೊಂದು ವಿಜ್ಞಪ್ತಿಯಿದೆ...."

"ಏನದು?"



"ಈ ಸಾಗರದಲ್ಲಿ ಹಡಗುಗಳಿಗೆ ದಾರಿತಪ್ಪುವುದು ಹೆಚ್ಚು. ಅದೂ ಅಲ್ಲದೆ ಸಮುದ್ರಕಳ್ಳರ ಹಡಗು ಬೆನ್ನಟ್ಟಿ ಬರುವ ಹೆದರಿಕೆಯಿಂದಲೇ ವ್ಯಾಪಾರಸ್ಥರ ಹಡಗು ದಾರಿತಪ್ಪುವುದು. ಮತ್ತೆ ಅಪಾಯಕ್ಕೆ ಸಿಕ್ಕಿ ನನ್ನ ತಂದೆಯ ಹಡಗು ಪಡೆದ ಗತಿಯನ್ನೇ ಕಾಣುವುದು. ಅದನ್ನು ನಿಲ್ಲಿಸಲಾಗುವುದಿಲ್ಲವೇ?"

"ಆಗುತ್ತದೆ. ಇದೋ. ಚಂಪಾ ದ್ವೀಪವು ಸಮೀಪಿಸಿತು. ಅಲ್ಲಿಯ ಆ ದೊಡ್ಡ 'ವಿಶ್ವಾಚಲ' ಬೆಟ್ಟದಲ್ಲಿ ನಾವು ಒಂದು "ಆಕಾಶದೀಪ"ವನ್ನು ರಚಿಸೋಣ. ಅದರ ಸಹಾಯದಿಂದ ಇತರ ಹಡಗುಗಳು ಸುರಕ್ಷಿತವಾಗಿ ಚಂಪಾದ್ವೀಪವನ್ನು ಸೇರಬಹುದು."

"ಹೌದು ನಾಥ! ಅದರಲ್ಲಿ ನನ್ನ ತಂದೆಯ ಹೆಸರನ್ನು ಕೆತ್ತಿಸಬೇಕು. ಅದೇ ಅವನ ಸ್ಮಾರಕ ದೀಪವಾಗಿರಬೇಕು."

"ಆಗಬಹುದು. ಇಂದೇ ನಾವು ಆ ಸ್ಮಾರಕಸ್ತಂಭವನ್ನು ಕಟ್ಟಿಸುವ ಕೆಲಸವನ್ನು ಆರಂಭಿಸೋಣ."

* * *

ಚಂಪೆಯ ಹಡಗು ಸಾಗುತ್ತಿತ್ತು. ನಿಶಾನಾಥನ ಶೀತಲಪ್ರಕಾಶದಲ್ಲಿ ನಭೋಮಂಡಲವು ಕಾಂತಿಮಾಸವಾಗಿತ್ತು. ಚಂದ್ರನ ಕಿರಣಗಳು ಸಮುದ್ರದ ನೀಲ ಜಲದಲ್ಲಿ ತರಂಗಿಸುತಿದ್ದವು? ಚಂಪಾ—ಬುದ್ಧಗುಪ್ತರು ಒಂದೆಡೆ ಕೂತು 'ಆಕಾಶ ದೀಪ'ದ ಸೌಂದರ್ಯವನ್ನು ನೋಡುತ್ತಿದ್ದರು. ಆಗ ಚಂಪೆಯ ಮುಖದಲ್ಲಿ ಗೆಲವಿನ ಓಜಸ್ಸು ತೋರಿಬರುತಿತ್ತು.

೩.

ಇದು ಎಷ್ಟೋ ದಿನಗಳ ಹಿಂದಿನ ಮಾತು. ಮಾನವನ ಸುಖದುಃಖಗಳ ಹೋರಾಟದ ಭೀಕರ ದೃಶ್ಯಗಳುಳ್ಳ ಅನೇಕ ವರುಷಗಳು ಗತಿಸಿದ್ದವು. ಘೋರಾಂಧಕಾರಪ್ರದ ಭೀಷಣ ಚಿತ್ರದ ಅದೊಂದು ಶ್ಯಾಮಲ ರಜನಿ! ಹಡಗೊಂದು ಚಂಪಾದೀಪ ಸಾಗರದಲ್ಲಿ ನಡೆಯುತ್ತಿತ್ತು. ಸರ್ವತ್ರ ಶಾಂತಿ! ಹಡಗಿನ ಕಿಟಿಕಿಯಿಂದ ಬುದ್ಧಗುಪ್ತನು ಆಕಾಶದೆಡೆ ನೋಡುತ್ತಿದ್ದ. ಅವನ ಮನೋಭೂಮಿಯಲ್ಲಿ ಒಂದು ತುಮುಲ ವಿಪ್ಲವವಾಗುತಿತ್ತು. ಅದಕ್ಕೆ ಕಾರಣ? ನಿಜ! ಅವನ ದೃಷ್ಟಿಪಥಕ್ಕೆ ಯಾವುದೋ ಒಂದು ಜ್ಯೋತಿಯು ಬಿದ್ದಿರಬೇಕು. ಯಾವ ಜ್ಯೋತಿ? ಎಂಬ ಪ್ರಶ್ನೆಗೆ ಉತ್ತರ—ಚಂಪೆಯ ಆಕಾಶ ದೀಪ. ಅವನ ದೃಷ್ಟಿಗೆ ಸಿಕ್ಕದುದು—ಅದೇ ಸ್ಮಾರಕ ಜ್ಯೋತಿ!— ಅಮರ ಜ್ಯೋತಿ! ಚಂಪೆಯ ತಂದೆಯ ಸ್ಮಾರಕದೀಪ! ಚಂಪೆಯ [illegible] ದಿವ್ಯ ದೀಪ! ಆದರೆ ಈಗ ಅದು ಕೇವಲ ಬುದ್ಧಗುಪ್ತನ ಜೀವನ-ದೀಪ—ಹೃದಯ-ದೀಪ! ಅದೇ ಈಗ ಅವನ ಹೃದಯಾಕಾಶದಲ್ಲಿ ಮಿನುಗುವ "ಆಕಾಶ ದೀಪ!"

ಅವನ ಬಾಹ್ಯದೃಷ್ಟಿಯು ಆಕಾಶದೀಪದತ್ತ ನೋಡುತಿತ್ತು. ಆದರೆ ಅಂತರಿಕ ದೃಷ್ಟಿಯು ಮಾತ್ರ ಹೃದಯಾಕಾಶದೆಡೆ ನೋಡುತಿತ್ತು. ಕಾರಣ—ಅವನ ಹೃದಯ ಗಗನದಲ್ಲಿ ರಂಜಿಸುವ ತಾರಗೆಯು ಅಸ್ತಮಿಸಿತ್ತು!

ಆಕಾಶ ದೀಪದ ಕಡೆ ನೋಡುತ್ತ ನೋಡುತ್ತ ಅವನು ಬಳಲಿದನು. ಆದರೆ ಆ ಕಡೆ ನಟ್ಟ ತನ್ನ ದೃಷ್ಟಿಯನ್ನು ಹೊರಳಿಸಲು ಸಮರ್ಥನಾಗಲಿಲ್ಲ. ಮನಸ್ಸಿನಲ್ಲಿ ಘೋರ—ಯುದ್ಧವಾಗುತಿತ್ತು. ಅದರ ಪ್ರತಿಧ್ವನಿ ಹೃದಯದಲ್ಲಾಗುತಿತ್ತು. ಒಂದೊಂದಾಗಿ ಹಿಂದಿನ ದಿನಗಳೆಲ್ಲ ಕಾಣಿಸಿಕೊಂಡವು. 'ಅದರ ಅಂತ್ಯವನ್ನು ಈಗಲೇ ಮಾಡುವೆನು' ಎಂದು ಮನಸ್ಸು ಓಡುತಿತ್ತು.

ಕ್ರಮೇಣ ಹಡಗು ಮುಂದರಿಯಿತು. ಬುದ್ಧಗುಪ್ತನ ದಿವ್ಯ ಪ್ರೀತಿಯ ಆಕಾಶ ದೀಪವು ಕಣ್ಮರೆಯಾಯಿತು. ಮರೆಯಾದದ್ದೊಂದೇ ನೆಪ! ಅವನ ಕಣ್ಣುಗಳಿಂದ ಗಂಗಾ-ಯಮುನೆಗಳ ಪ್ರವಾಹಗಳು ಹೊರಟು ಅನಂತ ಜಲರಾಶಿಯಲ್ಲಿ ಮಿಲನಗೊಂಡವು!

೪.

ಚಂಪೆಯು ಜೀವಿಸಿಲ್ಲವಾದರೂ ಅವಳ ಆಕಾಶ ದೀಪದಿಂದೂ ಮಿನುಗುತ್ತಿದೆ. ಅದೀಗ ಹಡಗುಗಳಿಗೆ ಧ್ರುವ ನಕ್ಷತ್ರ. ನೂರಾರು ಹಡಗುಗಳು ಅದರ ಉಪಕಾರವನ್ನು ಹೊಂದುತ್ತಿವೆ. ಅದರ ಮತ್ತು ಅವಳ ಗುಣಗಾನ ಮಾಡುತ್ತಿವೆ.

ಆ ಆಕಾಶ ದೀಪದ ಚಿತ್ರವು ತನ್ನ ಹೃದಯದಲ್ಲಿ ಅಂಕಿತವಾಗಬೇಕೆಂದು ಬುದ್ಧಗುಪ್ತನು ಯತ್ನಿಸುವನು.—ಕ್ರಮೇಣ ಆ ದೀಪವು ಅವನ 'ಹೃದಯಾಕಾಶ'ದಲ್ಲಿ ಪ್ರತಿಬಿಂಬಿತವಾಯಿತು. ಮತ್ತು ಹೃದಯಾಕಾಶದೀಪವಾಗಿ ರಂಜಿಸಿ—ಬುದ್ಧಗುಪ್ತನ ಜೀವನ ಶರಧಿಯಲ್ಲಿ ಓಡಾಡುವ ಹಡಗುಗಳಿಗೆ ಧ್ರುವನಕ್ಷತ್ರವಾಯಿತು!

ಪ್ರತಿನಿತ್ಯ ಆ ಹಡಗು ಆ ಸಾಗರದಲ್ಲಿ ಚಲಿಸುವುದು. ಬುದ್ಧಗುಪ್ತನು ಆಕಾಶ ದೀಪವನ್ನು ಎವೆಯಿಕ್ಕದೇ ನೋಡುವನು. ಆಗ ಅವನ ಹೃದಯ ತಂತಿಯು ಸುಖದುಃಖಗಳ ಸ್ಪರ್ಶದಿಂದ ಮಿಡಿದಂತಾಗುವುದು ಮತ್ತು ದುಃಖದ ಪ್ರವಾಹವು ಶರೀರದಲ್ಲಿ ಸಂಚರಣವಾಗುವುದು?

[ಪ್ರಸಿದ್ಧ ಹಿಂದೀ ಕತೆಗಾರರಾದ ಜಯಶಂಕರ ಪ್ರಸಾದರವರು ಬರೆದ 'ಆಕಾಶದೀಪ' ಎಂಬ ಹಿಂದೀ ಕತೆಯಿಂದ ಪ್ರೇರಿತವಾದುದು.]

(೨೩ನೇ ಪುಟದಿಂದ ಮುಂದುವರಿದುದು)

ಗಿರಾಕಿಗೆ ಚೀಟಿಕೊಡುವನು. ಆ ಚೀಟಿಯನ್ನು ಅವನು ತನ್ನ ಬೇಂಕಿನಲ್ಲಿ "ಹಾಜರ್"ಪಡಿಸುವನು. ದಿನದ ಕೆಲಸ ಮುಗಿದೊಡನೆಯೇ ಅಥವಾ ನಿಶ್ಚಿತ ಸಮಯದೊಳಗೆ ಆ ಎರಡು ಬೇಂಕುಗಳ ಅಧಿಕಾರಿಗಳೂ ಒಟ್ಟು ಸೇರಿ ಅತ್ತಣಿಂದಿತ್ತ, ಇತ್ತಣಿಂದತ್ತ ವರ್ಗಾವರ್ಗಿಯಾದ ಹಣದ ಲೆಕ್ಕ ತೆಗೆದು ಊರಿಗೆ ಯಾರು ಎಷ್ಟು ಕೊಡಲಾಗುವುದೆಂಬುದನ್ನು ಕಂಡುಹಿಡಿದು ಅದನ್ನು ನಗದಾಗಿ ಜಮಾ ಪಡೆಯುವರು.

"ನಗದಾಗಿ" ಕೊಡುವುದರ ಬದಲು ಪರಸ್ಪರ ಸಾಲವನ್ನು ತಮ್ಮಿಬ್ಬರ ಜವಾಬ್ದಾರಿ ಠೇವಣಾತಿಯಿಂದ ಸರಕಾರದ ಕೋಶ ಅಥವಾ ಸರಕಾರದ ಬೇಂಕಿನಿಂದ ಪಡೆದಂತೆ ಅಧಿಕಾರಪತ್ರ ವಿನಿಮಯ ನಡೆಸುವುದು ಕೂಡ ಇದೆ.

ಬೇಂಕಿನ ಕಾರ್ಯಕಲಾಪಗಳು.

ಸಾಲ ಪಡೆವುದು. ಸಾಲಕೊಡುವುದು ಇದಕ್ಕಿರುವ ಸಂಸ್ಥೆಯೇ ಬೇಂಕು ಎಂದು ಹೇಳಬಹುದು.

ಚಾಲ್ತಿ ಠೇವಣಾತಿಯ ಭದ್ರತೆ:- ನಮ್ಮಲ್ಲಿರುವ ಹಣವು ಸುರಕ್ಷಿತವಾಗಿರುವಂತೆ ನಾವು ಬೇಂಕಿನಲ್ಲಿಡಬಹುದು. ಅದನ್ನು ನಾವು ಕೇಳಿದಾಗ್ಗೆ ಕೊಡಬೇಕೆಂಬ ಶರ್ತವನ್ನು ಬೇಂಕು ಒಪ್ಪಿಕೊಳ್ಳುವಂತೆ ಮಾಡಬಹುದು. ಆದರೆ ಅಂಥಾ ನಮ್ಮ ಹಣಕ್ಕೆ ಬಡ್ಡಿಬಾರದು. ಬದಲು ನಮ್ಮ ಹಣವನ್ನು ರಕ್ಷಿಸುವ ಜವಾಬ್ದಾರಿ ಹೊತ್ತ ಬೇಂಕಿಗೆ ನಾವೇ "ಭತ್ತೆ" ಕೊಡಬೇಕಾಗುವುದು. ಆದರೂ ಚಿಕ್ಕ ಪುಟ್ಟ ಬೇಂಕುಗಳಲ್ಲಿ ಚಾಲ್ತಿ ಠೇವಣಾತಿಯ ಮೇಲೂ ಅತಿ ಕಡಿಮೆಯ ಬಡ್ಡಿ ತೆರುವುದು ನಮ್ಮಲ್ಲಿದೆ.

ಮ್ಯಾದೆ-ಯಾ-ನಿರಖು ಠೇವಣಾತಿ:-ಇಂತಿಷ್ಟೆ ಸಮಯದಲ್ಲಿ ಹಿಂದೆಗೆವೆವೆಂದು ಅವಧಿ ಹಾಕಿ ಬೇಂಕಿನಲ್ಲಿ ನಾವಿರಿಸುವ ಹಣವೇ ಇದು. ಇದಕ್ಕೆ ಆಯಾ ಅವಧಿಯ ಅನುಸಾರ ಬಡ್ಡಿದರವಿರುವುದು.

ಸಾಲ ತೆರುವುದು:- ತಕ್ಕ ಜವಾಬ್ದಾರಿಯ ಮೇಲೆ ಬೇಂಕು ಸಾಲಕೊಡುವುದು.

ವಿನಿಮಯಪತ್ರ ವಠಾಯಿಸುವುದು:- ಒಬ್ಬ ವ್ಯಾಪಾರಿಯು ಇನ್ನೊಬ್ಬನಿಗೆ ಕಳುಹಿಸಿದ ಸಾಮಾನುಗಳ ಮೌಲ್ಯದಷ್ಟನ್ನು ಸಾಮಾನು ಪಡಕೊಂಡವನು ನಿಶ್ಚಿತ ಅವಧಿಯೊಳಗಾಗಿ ಬಡ್ಡಿ ಕೂಡಿಸಿ ಕೊಡುವ ಶರ್ತದ ಮೇಲೆ ಸಾಮಾನನ್ನು ಕಳುಹಿಸಿದವನಿಗೆ ತೆರುವುದು. ಆದರೆ ಹೀಗೆ ಹಣ ಮುಂಗಡವಾಗಿ ಒದಗಿಸಿಕೊಟ್ಟುದಕ್ಕಾಗಿ ಬೇಂಕಿನ ದುಡಿತವನ್ನು ಅದು ವಸೂಲುಮಾಡುವುದು. ನಿಶ್ಚಿತ ಅವಧಿಯೊಳಗೆ ಯಾರ ಪರವಾಗಿ ಹಣವು ಕೊಡಲಾಗಿದೆಯೋ ಅವನು ತಪ್ಪಿದರೆ ಆ ಹಣವು ಯಾರಿಗೆ ಬೇಂಕಿನಿಂದ ಸಂದದೋ ಅತನಿಂದ ವಸೂಲು ಮಾಡಲಾಗುವುದು.

ಭಂಡವಾಳಗಾರರ ಪರವಾಗಿ ಹಣ ಸಾಲಕೊಟ್ಟು ಬಡ್ಡಿ ಹುಟ್ಟಿಸುವ ಜವಾಬ್ದಾರಿಯೂ ಬೇಂಕಿನದಿದೆ. ಪಾಲು ಭಂಡವಾಳವನ್ನು ಭದ್ರತೆ ನೋಡಿ ಹೊರಗೆ ಬಡ್ಡಿಗೆ ನಡೆಸಿ ಪಾಲುಬಂಡವಾಳದಾರರಿಗೆ ಲಾಭಗಳಿಸಿ ಕೊಡುವಲ್ಲಿ ಬೇಂಕಿನ ಕರ್ತವ್ಯವು ತುಂಬ ಇದೆ. ಇದಲ್ಲದೆ ಸಾರ್ವಜನಿಕರ ಆಭರಣ, ಹಣಗಳ ಭದ್ರತೆ. ಸಾರ್ವಜನಿಕರಲ್ಲಿರಬಹುದಾದ ದಸ್ತಗಳ, ಕೈಗಾರಿಕೆಯ ಸಂಸ್ಥೆಗಳ ಪಾಲುಗಳ ಅಡವಾಸದ ಮೇಲೆ ಯಾ ಕೊಂಡುಕೊಳ್ಳುವುದರಿಂದ ಹಣ ತೆರುವುದೇ ಮೊದಲಾದವು ಬೇಂಕಿನ ವ್ಯವಹಾರದಲ್ಲಿ ಕೆಲವು. ಇನ್ನೂ ವಿವರವಾಗಿ ನಮ್ಮ ದೇಶದಲ್ಲಿ ಬೇಂಕುಗಳ ಗುಣಾವಗುಣಗಳು. ರೀತಿಗಳು, ಸಂಸ್ಥೆಯ ವ್ಯವಸ್ಥೆಯಲ್ಲಿ ಸರಕಾರದ ಅಧಿಕಾರಗಳನ್ನು ಕುರಿತು ಜನಸಾಮಾನ್ಯರಿಗೆ ಹಿತವೆನಿಸುವಂತೆ ಮುಂದೆ ಬರೆಯಲಿದ್ದೇವೆ.

ಒಳ್ಳೆ ರಸ್ತೆಗಳು

ಒಳ್ಳೆ ರಸ್ತೆಗಳು ನಾಗರಿಕತೆಯ ಸ್ಪಷ್ಟ ಚಿಹ್ನೆಗಳೆಂದು ಜರ್ಮನಿಯ ಸರ್ವಾಧಿಕಾರಿ ಹರ್‌ಹಿಟ್ಲರರು ಭಾವಿಸುತ್ತಾರೆ. ಅದಕ್ಕಾಗಿ. ಉತ್ತಮ ಮೋಟಾರು ರಸ್ತೆಗಳನ್ನು ಅಲ್ಲಿ ರಚಿಸಿರುವರು. ಅಲ್ಲಿದ್ದಷ್ಟು ಉತ್ತಮ ರಸ್ತೆಗಳು ಮತ್ತೆಲ್ಲಿಯೂ ಇಲ್ಲ. ಈ ಮೋಟಾರು ರಸ್ತೆಗಳು ಹೆಚ್ಚಿದಂತೆ ಮೋಟಾರುಗಳೂ ಹೆಚ್ಚಬೇಕೆಂದು ಅಲ್ಲಿರುವವರ ಅಭಿಮತ. ಒಂದು ಮೋಟಾರು ಸೈಕಲಿನ ಕ್ರಯದಲ್ಲಿ ಒಂದು ದೊಡ್ಡ ಮೋಟಾರೇ ಸಿಗುವಂತೆ ಅಲ್ಲಿ ಆಲೋಚನೆಯಾಗುತ್ತಿದೆ.

ಟರ್ಕಿದೇಶದ ಕೈಗಾರಿಕೆಗಳು!



ಕೆಮಾಲ್ ಪಾಷಾ.
ನೂತನ ಟರ್ಕಿಯ ನಿರ್ಮಾತೃ.

ಮೂವತ್ತು ವರ್ಷಗಳ ಮೊದಲು ಟರ್ಕಿದೇಶದ ಜನರ ಆರ್ಥಿಕ ಸ್ಥಿತಿಯು ಬಹಳ ಹೀನಸ್ಥಿತಿಯಲ್ಲಿತ್ತು. ಪರದೇಶದ ವ್ಯಾಪಾರವೆಲ್ಲ ಅನ್ಯದೇಶದ ಬಂಡವಾಳಗಾರರ ಅಧೀನವಿತ್ತು. ಕಲೀಫತನದಿಂದ ಉದ್ಭವಿಸಿದ ಆರ್ಥಿಕ ವ್ಯವಸ್ಥೆ ಇದನ್ನು, ನೂತನ ಟರ್ಕಿಯ ನಿರ್ಮಾತೃ, ಟರ್ಕಿಯ ಸರ್ವಾಧಿಕಾರಿ ಕೆಮಾಲನು ಸರಿಗೊಳಿಸಿ, ದೇಶವನ್ನು ಅಭಿವೃದ್ಧಿ ಪಥಕ್ಕೆ ನಾಗಿಸಿದ್ದಾನೆ.

ಬಾಲಕನೊಬ್ಬನ ಮುಂದಿನ ಜೀವನದ ಶ್ರೇಯೋಭಿವೃದ್ಧಿಯು, ಅವನ ವಾತಾವರಣವನ್ನು ಹೊಂದಿಕೊಂಡಿರುವಂತೆ, ಒಂದು ದೇಶದ ಉನ್ನತಿಯು ಅದರ ಕೈಗಾರಿಕೆಯನ್ನು ಅನುಕರಿಸುತ್ತದೆ. ಮಾನವ ದೇಹಕ್ಕೆ ಬೆನ್ನೆಲುಬಿನಂತೆ, ದೇಶಕ್ಕೆ ಕೈಗಾರಿಕೆಯು. ಕೈಗಾರಿಕೆಹೀನವಾದ ದೇಶವು, ನಿರ್ಜೀವ ಪ್ರಾಣಿಯಂತೆ! ಮಾರುತನಿಂದ ಜ್ಯೋತಿಯು ಬೆಳಗುವಂತೆ, ಕೈಗಾರಿಕೆಯಿಂದ ದೇಶವು ಶೋಭಿಸುವುದು. ಕೈಗಾರಿಕೆಯೇ ದೇಶೋನ್ನತಿಯ ಮೂಲಮಂತ್ರ!

ಮೂವತ್ತು ವರ್ಷಗಳ ಮೊದಲು ಟರ್ಕಿದೇಶದ ಜನರ ಆರ್ಥಿಕ ಸ್ಥಿತಿಯು ಬಹಳ ಅವ್ಯವಸ್ಥಿತವಾಗಿತ್ತು. ದೇಶದ ವ್ಯಾಪಾರ ವ್ಯವಸ್ಥೆಗಳು ಬಹಳ ಹೀನಸ್ಥಿತಿಯಲ್ಲಿದ್ದವು. ಪರದೇಶದ ವ್ಯಾಪಾರವೆಲ್ಲಾ ಅನ್ಯದೇಶದ ಬಂಡವಾಳಸ್ಥರ ಹಸ್ತಗತವಾಗಿತ್ತು. ಕೆಲವು ಸಣ್ಣ-ಪುಟ್ಟ ದೇಶೀಯ ಕೈಗಾರಿಕೆಗಳನ್ನು ಬಿಟ್ಟು, ಇತರ ವಿಷಯಗಳನ್ನು ಪರೀಕ್ಷಿಸಿದ್ದಲ್ಲಿ ಟರ್ಕಿದೇಶವು ತನ್ನ ಶೈಶವಾವಸ್ಥೆಯಲ್ಲಿತ್ತೆಂಬುದರಲ್ಲಿ ಸಂಶಯವಿಲ್ಲ. ತನ್ನ ಹೆಚ್ಚಿನ ಸೌಕರ್ಯಗಳಿಗೆಲ್ಲಾ ಅಮೇರಿಕ, ಮತ್ತು ಪಶ್ಚಿಮ ಯುರೋಪು ದೇಶಗಳನ್ನು ಅವಲಂಬಿಸಿಕೊಂಡಿತ್ತು. ಹೆಚ್ಚಿನ ಅಧಿಕಾರಗಳು ಅನ್ಯದೇಶಸ್ಥರ ಕಂಪೆನಿಗಳ ಹಸ್ತಗತವಾಗಿದ್ದುದರಿಂದ ದೇಶೀಯ ಚಟುವಟಿಕೆಗಳ ಬೆಳವಣಿಗೆಗೆ ಅನುವು ದೊರೆಯುತ್ತಿದ್ದಿಲ್ಲ.

ಕಲೀಫತನದಿಂದ ಉದ್ಭವಿಸಿದ ಆರ್ಥಿಕ ಅವ್ಯವಸ್ಥೆ ಇದು! ಈ ಅವ್ಯವಸ್ಥೆಯನ್ನು ಕೊನೆಗಾಣಿಸಬಹುದು. ಹೇಗೆ? ಪಾಶ್ಚಿಮಾತ್ಯರು ಹೇಳುವದೇನೆಂದರೆ—ಟರ್ಕಿಯು ಕೈಗಾರಿಕೆಯ ದೇಶವಲ್ಲ. ಭಾರತದೇಶದಂತೆ ಇದು ಬರೇ ಕೃಷಿಕರ ದೇಶವು. ಆದ್ದರಿಂದ ಇದು ದವಸಧಾನ್ಯಗಳನ್ನು ಬೆಳೆಸಲು ಯೋಗ್ಯವು. ಇದಕ್ಕೆ ಬೇಕಾದ ಕಬ್ಬಿಣದ ಮತ್ತು ಇತರ ಸಾಮಾನುಗಳನ್ನು ಅನ್ಯದೇಶಗಳಿಂದಲೇ ತರಿಸತಕ್ಕದ್ದು—ಎಂದು.

ಮಾತೇನೋ ಬ್ರಿಟಿಷರ ಮುಖದಿಂದ ಹೊರಟಿತು. ಆದರದು ಸಫಲವಾಗಲಿಲ್ಲ! ಕಾಲಗತಿಸಿದಂತೆ ಜನಾಂಗ ಪರಿಸ್ಥಿತಿಯೂ ಬದಲಾವಣೆಗೊಳ್ಳುವುದು. ಕಲಹ ಉಂಟಾಗಿ ಟರ್ಕಿದೇಶಕ್ಕೆ ಪ್ರಜಾಧಿಪತ್ಯ ದೊರೆಯಿತು! ಈ ಪ್ರಜಾಧಿಪತ್ಯದ ಆಗಮನದಿಂದ ಕೈಗಾರಿಕೆಗಳಿಗೆ ಬೇಕಾದ ಪ್ರೋತ್ಸಾಹವು ದೊರೆಯಿತು. ಒಪ್ಪಂದ—ಕರಾರುಗಳ ಪ್ರಕಾರ ಪರದೇಶದ ವ್ಯಾಪಾರಿಗಳಿಗೆ ಇನ್ನೂ ಹೆಚ್ಚಿನ ಅನುಕೂಲತೆಗಳು ದೊರೆತುವು. ಈ ಸಂಧಿಯ ಅನಂತರ ದೇಶವ್ಯವಹಾರದ ಕುರಿತು ಒಂದು ಸಂಧಿಮಾಡಲ್ಪಟ್ಟಿತು. ಈ ಕರಾರಿನ ಪ್ರಕಾರ ದೇಶೀಯ ಕೈಗಾರಿಕೆಗಳಿಗೆ ಸ್ವಲ್ಪ ಪ್ರೋತ್ಸಾಹ ದೊರೆಯಿತು. ಮತ್ತು ದೇಶೀಯ ವ್ಯಾಪಾರಿಗಳೊಡನೆ ಸ್ಪರ್ಧಿಸುತ್ತಿದ್ದ ಪರದೇಶದ ವ್ಯಾಪಾರಿಗಳ ಕುಣಿದಾಟವು ನಿಂತುಹೋಯಿತು. ೧೯೧೩ರಲ್ಲಿ ದೇಶೀಯ ಕೈಗಾರಿಕೆಗಳಿಗೆ ಅನುಕೂಲವಾಗುವ ಒಂದು ಕಾನೂನು ಜಾರಿಗೆ ಬಂದಿತು. ಆದರೆ ಇದು ಮೀರಿಹೋದ್ದರಿಂದಲೂ, ಮಾತ್ರವಲ್ಲದೆ ಈ ಕಾಲದಲ್ಲಿ ಒಂದೇಸವನೆ ಸಂಭವಿಸುತ್ತಿದ್ದ ಸಮರದ ದೆಸೆಯಿಂದಲೂ, ಸಾಧಾರಣ ೧೦ ವರ್ಷಗಳ ತನಕ ಇದು (ಕನಸು) ನಿಸ್ಸಾರವಾಗಿ ಮೂಲೆ ಸೇರಬೇಕಾಯಿತು. ೧೯೨೩ರಲ್ಲಿ ಟರ್ಕಿದೇಶಕ್ಕೆ ಸ್ವಾತಂತ್ರ್ಯವು ದೊರೆಯಲು, ಈ ಕಾನೂನು ಬೆಳಕಿಗೆ ಬಂದು, ಹಲವು ತರದ ದೇಶೀಯ ಚಟುವಟಿಕೆಗಳು ಅಲ್ಲಲ್ಲಿ ತಲೆದೋರಿದುವು. ೧೯೨೩ರಿಂದ ೨೭ರ ವರೆಗೆ ಹೊಸ ಸರಕಾರದ ಸಹಾಯದಿಂದ ಕೈಗಾರಿಕೆಯ ಸಂಘಗಳು ದ್ವಿಗುಣಿಸಿದುವು. ೧೯೨೭ರಲ್ಲಿ ಸರಕಾರವು ಕಾನೂನನ್ನು ತಿದ್ದುಪಡಿಮಾಡಿ ಕೈಗಾರಿಕೆಯು ದೇಶದಲ್ಲೆಲ್ಲಾ ಪ್ರಸರಿಸುವಂತೆ ಮಾಡಿದ್ದಲ್ಲದೆ ಹಣದ ಅಡಚಣೆ ಬಾರದ ಹಾಗೆ "ಸಮ್ಮರ್ ಬ್ಯಾಂಕ್" ಎಂಬೊಂದು ಬ್ಯಾಂಕನ್ನೂ ಸ್ಥಾಪಿಸಿದರು.

೧೯೨೭ರಲ್ಲಿ ತೆಗೆದ ಖಾನೇಷುಮಾರಿ ಲೆಕ್ಕದ ಪ್ರಕಾರ ಟರ್ಕಿದೇಶದ ಕೈಗಾರಿಕೆಯು, ಅತ್ಯಂತ ಚಿಕ್ಕವಾದ ಕಂಪೆನಿಗಳಿಂದ ಕೂಡಿಕೊಂಡು ಅನಾಗರಿಕ ಮತ್ತು ಸುಲಭವಾದ ಕೆಲಸಗಳಾಗಿದ್ದವು. ೬೫,೨೪೫ ಕೈಗಾರಿಕೆಯ ಕಂಪೆನಿಗಳಲ್ಲಿ ಬರೇ ೨೫೬,೮೫೫ ಜನರು ಕೆಲಸ ಮಾಡುತ್ತಿದ್ದರು. ಇವುಗಳಲ್ಲಿ ೩೬,೩೧೭ ಕಂಪೆನಿಗಳು ಒಬ್ಬೊಬ್ಬ ಧನಿಕನ ಅಧಿಕಾರಕ್ಕೆ ಸೇರಿದ್ದವು. ೨೦೬೦ ಕಂಪೆನಿಗಳಲ್ಲಿ ೧೦ಕ್ಕಿಂತ ಹೆಚ್ಚು ಮಂದಿ ಇದ್ದರು. ೩೨೧ರಲ್ಲಿ ೫೦ ಮಂದಿ ಕೂಲಿಗಳಿದ್ದರು. ೧೯೫ರಲ್ಲಿ ಮಾತ್ರ ಸಾಧಾರಣ ೧೦೦ಕ್ಕಿಂತ ಜಾಸ್ತಿ ಕೂಲಿಯಾಳುಗಳಿದ್ದರು. ಆ ಕಾಲದಲ್ಲಿ ಕೈಗಾರಿಕೆಯು ಎಷ್ಟು ಹೀನಸ್ಥಿತಿಯಲ್ಲಿತ್ತೆಂಬುದನ್ನು ಈ ಮೇಲಿನ ಸಂಖ್ಯೆಗಳೇ ಸೂಚಿಸುತ್ತವೆ. ಆದರೆ ಒಬ್ಬೊಬ್ಬನ ಸ್ವಂತ ಕೆಲಸಗಳು ಈಗಲೂ ಹಲವಿರುವುವು. ೧೯೩೭ರ ಖಾನೇಷುಮಾರಿ ಪ್ರಕಾರ ಕೈಗಾರಿಕೆಯ ಕಾನೂನಿನ ಮೂಲಕ ಸಹಾಯವನ್ನು ಹೊಂದುತ್ತಿರುವ ೧೪೩೩ ಕಂಪೆನಿಗಳಲ್ಲಿ ೮೧೪ ಕಂಪೆನಿಗಳು ಪ್ರತ್ಯೇಕ ಪ್ರತ್ಯೇಕ ಮನುಷ್ಯರಿಂದಲೇ ನಡೆಸಲ್ಪಡುತ್ತಿದ್ದವು; ೨೭೩ ಪಾಲುಗಾರರಿಂದ ನಡೆಸಲ್ಪಡುತ್ತಿದ್ದವು; ಉಳಿದ ೩೪೬ ಮಾತ್ರ ಒಂದು ತರದ ಸಹಕಾರಿ ಸಂಘಗಳಂತೆ ನಡೆಸಲ್ಪಡುತ್ತಿದ್ದವು.

ದೊಡ್ಡ ದೊಡ್ಡ ಕೈಗಾರಿಕೆಯ ಕಂಪೆನಿಗಳು ಸ್ಟೇಟ್ ಮತ್ತು ಮುನ್ಸಿಪಾಲಿಟಿಗಳಿಂದ ಈಚೆಗೆ ಸ್ಥಾಪಿಸಲ್ಪಟ್ಟವು. ಈ ಕಂಪೆನಿಗಳಲ್ಲಿರುವ ಕೆಲಸಗಾರರ ಸಂಖ್ಯೆ ೫೫,೩೨೩. ಆದರೆ ಕಳೆದ ಆರು ವರ್ಷಗಳಿಂದ ಈ ಸಂಖ್ಯೆಯು ದ್ವಿಗುಣಿತವಾಗಿರುತ್ತದೆ. ಈ ಮೇಲೆ ಸೂಚಿಸಿದ ಕಂಪೆನಿಗಳು ಕೈಗಾರಿಕೆಯ ಕಾನೂನಿನಿಂದ ಸಹಾಯವನ್ನು ಪಡೆಯುತ್ತವೆ. ಮಿಲಿಯಗಟ್ಟಲೆ ಜನರು ಹಳೆಯ ಕೈಗಾರಿಕೆಗಳಲ್ಲೇ ಒದ್ದಾಡುತ್ತಿರುವರು. ಗೋದಿ ಹಿಟ್ಟು ಮಾಡುವುದು, ಬೆಣ್ಣೆ ಮತ್ತು ಚರ್ಮ ಹದಮಾಡುವ ಕೆಲಸ, ಚುಟ್ಟ ತಯಾರಿಸುವಿಕೆ ಮೊದಲಾದ ಕೈಗಾರಿಕೆಯ ಕಂಪೆನಿಗಳಲ್ಲಿ ೧೧೦,೦೦೦ ಮಂದಿ ದುಡಿಯುತ್ತಿರುವರು.


ನೇಯಿಗೆಯ ಕೆಲಸವು ಟರ್ಕಿದೇಶದ ಕೈಗಾರಿಕೆಗಳಲ್ಲೊಂದು, ಈ ವ್ಯಾಪಾರದಲ್ಲಿ ಸಣ್ಣ ನೈಗೆಯಿಂದ ಮೊದಲ್ಗೊಂಡು, ದೊಡ್ಡದೊಂದು ವಿದ್ಯುತ್ ಶಕ್ತಿಯಿಂದ ನಡೆಸಲ್ಪಡುವ ಯಂತ್ರದ ವರೆಗಿನ ೯೩೫೩ ಕಂಪೆನಿಗಳಿವೆ. ಹೆಚ್ಚಿನ ನೂಲು ಪರದೇಶದಿಂದ ತರಲ್ಪಟ್ಟರೂ ಊರವರಿಗೆ ಬೇಕಾದ ಬಟ್ಟೆ-ಬರೆಗಳನ್ನು ಈ ಕಂಪೆನಿಗಳೇ ತಯಾರಿಸುತ್ತವೆ. ಟರ್ಕಿದೇಶದಲ್ಲಿ ಉಣ್ಣೆ ಮತ್ತು ರೇಶ್ಮೆಯ ವಸನಗಳೂ ತಯಾರಾಗುತ್ತಿವೆ. ಸರಕಾರದಿಂದ ಸರಿಯಾದ ಸಹಾಯವು ದೊರೆತುದರಿಂದಲೇ ಪರದೇಶದ ಆಮದುಗಳು ಕ್ಷೀಣಿಸುತ್ತಾ ಬಂದವು. ಸ್ವದೇಶದ ಜನರಿಗೆ ಬೇಕಾದ ಅನುಕೂಲತೆಗಳು ಅಲ್ಲೇ ಉದ್ಭವಿಸ ತೊಡಗಿದವು.

ದೇಶೀಯ ಕೈಗಾರಿಕೆಯನ್ನು ಪ್ರಚಾರ ಮಾಡಬೇಕೆಂಬ ಆಸೆಯಿಂದ ಟರ್ಕಿ ಸರಕಾರದಿಂದ ತಯಾರಿಸಲ್ಪಟ್ಟ ೫ ವರ್ಷದ ಯೋಜನೆಯು ೧೯೩೪ರಲ್ಲಿ ಜ್ಯಾರಿಗೆ ಬಂತು. ಈ ಉಪಾಯಕ್ಕನುಸಾರವಾಗಿ, ಹತ್ತಿಯ ನೂಲು ತಯಾರಿಸುವ ಮತ್ತು ನೈಗೆಯ ದೊಡ್ಡ ಕಂಪೆನಿಯೊಂದು ಇಸ್ತಾಂಬುಲದ ಒಕೀರ್ ಕೋಯ್ ಎಂಬಲ್ಲಿ ಉದ್ಭವಿಸಿತು. ರಷ್ಯದವರಿಂದ ಕೊಡಲ್ಪಟ್ಟ ಯಂತ್ರವೊಂದು 'ಕೈಸರಿ' ಎಂಬಲ್ಲಿರುವ ನೈಗೆ ಕಂಪೆನಿಯಲ್ಲಿದೆ. ಇದರ ಕೆಲಸವು ೧೯೩೫ರಲ್ಲಿ ಪ್ರಾರಂಭವಾಗಿತ್ತು. ಮಗುದೊಂದು ದೊಡ್ಡ ನೈಗೆಯ ಕಂಪೆನಿಯು 'ಎರಿಗಿ' ಎಂಬಲ್ಲಿಯೂ, ಮತ್ತೊಂದು ನೈಗೆಯ ಮತ್ತು ನೂಲಿನ ಕಂಪೆನಿಯು "ಮಲಟ್ಯ" ಎಂಬಲ್ಲಿಯೂ ಸ್ಥಾಪಿಸಲ್ಪಟ್ಟವು.

ಇದಲ್ಲದೆ ಅನೇಕಾನೇಕ ಸಣ್ಣ-ಪುಟ್ಟ ಕಂಪೆನಿಗಳು ಊರಲ್ಲೆಲ್ಲಾ ಕಾಣಿಸಿಕೊಂಡವು. ೫ ವರ್ಷದೊಳಗೆ ೩೫ ಮಿಲಿಯ ಟರ್ಕಿಯ ಪೌಂಡುಗಳಷ್ಟು ಬೆಲೆ ಬಾಳುವ ಸಾಮಾನುಗಳನ್ನು ಈ ಕಂಪೆನಿಗಳು ತಯಾರಿಸುತ್ತವೆ. ಹಾಗಾದರೆ ೧೯೩೩ರಲ್ಲಿ ಆಮದಾದಂಥಾ ಸಾಮಾನುಗಳಲ್ಲಿ ಸೇಕಡಾ ೪೦ರಷ್ಟು ಈಗ ಸ್ವದೇಶದಲ್ಲಿ ತಯಾರಾಗುತ್ತಿವೆ ಎಂದು ಹೇಳಬಹುದು. ಈ ಕಂಪೆನಿಗಳಲ್ಲಿ ದೊರೆತ ಹೆಚ್ಚಿನ ಲಾಭವು ಇನ್ನೂ ಹೆಚ್ಚು ಕಂಪೆನಿಗಳನ್ನು ಸ್ಥಾಪಿಸುವುದರಲ್ಲಿ ವಿನಿಯೋಗಿಸಲ್ಪಡುತ್ತದೆ.

ಕೈಗಾರಿಕೆಯು ಅಭಿವೃದ್ಧಿಗೊಳ್ಳಬೇಕಾದರೆ ಹೆಚ್ಚಿನ ಸಾಮಾನು ರಫ್ತಾಗಬೇಕು. ಟರ್ಕಿದೇಶದಲ್ಲಾಗುತ್ತಿರುವ ಹೊಸ ಹೊಸ ರೈಲ್ವೆಮಾರ್ಗಗಳ ರಚನೆಯೇ ಅದರ ಪೂರ್ವೋನ್ನತಿಯನ್ನು ತೋರ್ಪಡಿಸುತ್ತದೆ. ಮೊದಲು ವ್ಯಾಪಾರಕ್ಕೆ ಮತ್ತು ಕೈಗಾರಿಕೆಗಳಿಗೆ ಯೋಗ್ಯವಾದ ದಾರಿಗಳನ್ನು ರಚಿಸಬೇಕು. ಮೊ

(೨೬ನೇ ಪುಟಕ್ಕೆ ಮುಂದುವರಿಸಿಯದೆ)



ಟರ್ಕಿಯ ರಾಜಧಾನಿಯಾದ ಅಂಕಾರಾದಲ್ಲಿನ ಮಹಾವಿದ್ಯಾನಿಲಯ.

ಮುಸ್ಲಿಮರೂ ಕಾಂಗ್ರೆಸ್ಸೂ

(ಲೇಖಕರು:— ಬಿ. ಎಲ್. ಅಹಮ್ಮದ್)

ಈಗ ನಮ್ಮ ಮತವಾದ ಇಸ್ಲಾಮು ಮತವು ಎಷ್ಟು ಹೀನಸ್ಥಿತಿಯಲ್ಲಿದೆ ಎಂದು ನಾವು ಊಹಿಸಿದರೇನೇ ತಿಳಿದುಬರುವುದು. ಇದಕ್ಕೆ ಕಾರಣವೇನು ಎಂದು ನಾವು ನೆನಸುವುದಾದರೆ, ನಾವೇ ಕಾರಣ. ಹೇಗೆಂದರೆ ನಮ್ಮಲ್ಲಿ ಒಕ್ಕಟ್ಟು ಇಲ್ಲ ಮಾತ್ರವಲ್ಲ ಇನ್ನು ನಾವು ನಾಗರಿಕಥೆ ಹೊಂದದೇ ಅನಾಗರಿಕಥೆಯಲ್ಲಿಯೇ ಇರುವೆವು. ನಾವು ನಾಗರಿಕಥೆ ಹೊಂದಲು ಪ್ರಯತ್ನ ಸಹ ಮಾಡುವುದಿಲ್ಲ. ಇದರಿಂದ ನಮ್ಮ ಪವಿತ್ರ ಮತವು ದಿನ ಹೋಗುತ್ತಾ ಕ್ಷೀಣವಾಗುತ್ತಾ ಬರುವುದಲ್ಲದೇ ಅಭಿವೃದ್ಧಿಯಾಗಲಾರದು. ನಮ್ಮ ಪವಿತ್ರ ಮತದ ಅನಾಗರಿಕಥೆಯನ್ನು [illegible] ಸಹಿಸಲಾರದೆ, ನಮ್ಮ ಹಿಂದೂಸ್ಥಾನದ ಎಲ್ಲಾ [illegible] ಹಿತವನ್ನು ಬಯಸುವ ಕಾಂಗ್ರೆಸು ಎಂಬ [illegible] ನಮ್ಮನ್ನು ಕಾಂಗ್ರೆಸ್ಸಿಗೆ ಸೇರಿಸಿ [illegible] ಪ್ರಯತ್ನಿಸುತ್ತಿದೆ. ಆದರೆ ನಮ್ಮ ಜಿಲ್ಲೆಯ ಇಸ್ಲಾಂ [illegible] ಇದಕ್ಕೆ ಸಹ [illegible] ನಡೆಸುತ್ತಿರುವುದನ್ನು ನೋಡಿದರೆ ಬಹಳ ಆಶ್ಚರ್ಯವೇ ಸರಿ. ಇದಕ್ಕೆ ಸಹ ಹಲವು ಕಾರಣಗಳಿವೆ. ಮಾನ್ಯಶ್ರೀ ಜಿನ್ನಾ ಸಾಹೇಬರಂತೇ ನಮ್ಮ ಜಿಲ್ಲೆಯಲ್ಲಿ ಸಹ ಹಲವು ಮುಸ್ಲೀಮರು ತಮ್ಮ ಸ್ವಾರ್ಥಕ್ಕಾಗಿ ದುಡಿಯುತ್ತಿರುವರು.

ಆದುದರಿಂದ ದೇಶಸೇವೆ, ಮುಸ್ಲೀಮ್ ಸೇವೆ (ಜನರ ಸೇವೆ) ಮಾಡಬೇಕೆಂದು ನೆನಸುವ ಎಲ್ಲಾ ಮುಸ್ಲೀಮರು ಕಾಂಗ್ರೆಸು [illegible] ದೇಶಸೇವೆ, ಜನರ ಸೇವೆ ಮಾಡಬೇಕೆಂದು ಇಚ್ಛಿಸುವ ಸಂಸ್ಥೆಗೆ ಸೇರಬೇಕಾಗಿದೆ. ಪವಿತ್ರ ಕುರಾನಾಗಲಿ ಬೇರೆ ಯಾವ ಪವಿತ್ರ ಗ್ರಂಥವಾಗಲಿ ದೇಶಸೇವೆ ಮಾಡಲು [illegible]

(೨೫ನೇ ಪುಟದಿಂದ ಮುಂದುವರಿದುದು)

ದಲು ಟರ್ಕೀಯಲ್ಲಿ ಒಂದುಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಬಹಳ ಪ್ರಯಾಸಕರವಾಗಿತ್ತು. ಆಗ ಸರಿಯಾದ ರಸ್ತೆಗಳಿರಲಿಲ್ಲ. ಕೈಗಾರಿಕೆಯು ಅಭಿವೃದ್ಧಿಗೊಂಡಂತೆ ಜನತೆಯ ಸೌಕರ್ಯಗಳೂ ಹೆಚ್ಚಿದುವು. ನೂತನ ಮಾರ್ಗಗಳೂ, ರೈಲ್ವೆ ಕಂಪನಿಗಳೂ ಏರ್ಪಟ್ಟವು. ಸ್ವಾತಂತ್ರ್ಯವು ಟರ್ಕೀದೇಶಕ್ಕೆ ದೊರೆತೊಡನೆ ಅಲ್ಲಿಯ ರೈಲ್ವೆಮಾರ್ಗಗಳು ಕೆಲವು ಮೈಲುಗಳ ವರೆಗೆ ಮಾತ್ರವಿದ್ದುವು. ಇದರ ನಂತರ ಅಧಿಕಾರಿಗಳು ಮಾರ್ಗಗಳ ಮತ್ತು ಬಂದರುಗಳ ಅಭಿವೃದ್ಧಿಗೆ ಗಮನಕೊಡತೊಡಗಿದರು. ಈಗ ಟರ್ಕೀ ದೇಶವು ಕೈಗಾರಿಕೆಯ ಸಾಮ್ರಾಜ್ಯದಲ್ಲಿ ಅತ್ಯುನ್ನತ ಗದ್ದುಗೆಯೊಂದನ್ನು ಏರಿ ಕುಳಿತಿದೆ. ಇದಕ್ಕೆ ಕಾರಣ ಜನತೆಗೆ ದೊರೆತ ಸ್ವಾತಂತ್ರ್ಯ! ಸರಕಾರದಿಂದ ಜನಾಂಗಕ್ಕೆ ಕೊಡಲ್ಪಟ್ಟ ಸಹಾನುಭೂತಿ ಮತ್ತು ಸಹಾಯ! ದೇಶೀಯರಲ್ಲಿ ನೆಲೆಗೊಂಡ ಒಗ್ಗಟ್ಟು! ಇವು ಒಂದು ದೇಶದ ಕೈಗಾರಿಕೆಯ ಉನ್ನತಿಗೆ ಮುಖ್ಯೋಪಕರಣಗಳು. ಟರ್ಕೀದೇಶವು ಸರಕಾರದ ಸಹಾಯದಿಂದಲೂ, ದೇಶಕ್ಕೆ ದೊರೆತ ಸ್ವಾತಂತ್ರ್ಯದಿಂದಲೂ ಟರ್ಕಿಯನರ ಒಗ್ಗಟ್ಟಿನಿಂದಲೂ ಹೊಸಯ [illegible] ಅಭಿವೃದ್ಧಿಗೊಂಡಿದೆ.

ಈ ರೀತಿಯಲ್ಲಿ ಸ್ವಾತಂತ್ರ್ಯದ ಮತ್ತು [illegible] ಟರ್ಕೀದೇಶವು ತನ್ನ ಆರ್ಥಿಕಸ್ಥಿತಿಯಲ್ಲಿ ಉನ್ನತಿಯನ್ನು ಹೊಂದಿಕೊಂಡಿದೆ. ಹೀಗೆ ಪ್ರತಿಯೊಂದು ದೇಶವೂ ತನ್ನ ಕೈಗಾರಿಕೆಗಳನ್ನು, ಕೃಷಿಯನ್ನೂ ಯೋಗ್ಯಸ್ಥಿತಿಗೆ [illegible], ದೇಶದ ಆರ್ಥಿಕ ದುರವಸ್ಥೆಯನ್ನು ಹೊಡೆದೋಡಿಸಲು ಯತ್ನಿಸಬೇಕು.

— ಎಸ್. ಕೃಷ್ಣ ಉಪಾಧ್ಯಾಯ.

ಚೀನ.

[illegible] ೧/೬ ಪಾಲು ಚೀನವಿಂದು ಜಪಾನೀಯರ ವಶದಲ್ಲಿದೆ.

ಆಕಾಶಭೇದನ

ಆಕಾಶದಲ್ಲಿ, ಸುಮಾರು ಇಪ್ಪತ್ತು ಮೈಲುಗಳ ಎತ್ತರದಲ್ಲಿ ಒಂದು ವಿಧದ ಮೋಡಗಳು ಹರಡಿಕೊಂಡು ಜನರ ದೃಷ್ಟಿಗೆ ಅಡ್ಡವಾಗಿವೆಯೆಂದು ನಾವಿಕರ ದೂರು ಇದೆ. ವಿಮಾನದವರು, ಬೆಲ್ಲೂನುಗಳಲ್ಲಿ ಅಷ್ಟು ಎತ್ತರಕ್ಕೂ ಹೋಗಿ, ಒಂದು ವಿಧದ "ಗ್ಯಾಸಿ"ನಿಂದ ಆ ಮೋಡಗಳನ್ನು ಒಡೆವ ಯತ್ನದಲ್ಲಿದ್ದಾರೆ.

ಕಾಂಗ್ರೆಸ್ಸನ್ನು ಸೇರಬೇಕು

(ಲೇಖಕರು:— ಅಹ್ಮದ್, ಎಂ. ಕೆ.)

ಇಂದು ಭಾರತದ ಮುಸ್ಲಿಮರಲ್ಲಿ ಕಾಂಗ್ರೆಸಿಗೆ ಸೇರುವ ಪ್ರಶ್ನೆಯು ತಲೆದೋರಿರುತ್ತದೆ. ಹಲವರು ಅದರಲ್ಲಿ ಸೇರಿ ತಮ್ಮ ದೇಶಪ್ರೇಮವನ್ನು ವ್ಯಕ್ತಗೊಳಿಸಿರುವರು.

ಅತ್ತ ಅಖಿಲಭಾರತ ಮುಸ್ಲಿಮ್ ಪಂಡಿತರುಗಳ ಸಭೆಯು (ಜಮಿಯತ್–ಉಲಮಾ–ಎ–ಹಿಂದ್) ಮುಸಲ್ಮಾನರನ್ನು ಕಾಂಗ್ರೆಸಿಗೆ ಸೇರಿಸಲು ಬಹಳವಾಗಿ ಪ್ರಯತ್ನಿಸುತ್ತಿದೆ. ಇತ್ತ ಅಲಹಾಬಾದ್ ಮುಸ್ಲಿಂ ಪರಿಷತ್ತಿನವರು ಮುಸಲ್ಮಾನರು ಕಾಂಗ್ರೆಸ್ಸಿಗೆ ಸೇರಬೇಕೆಂದು ತೀರ್ಮಾನಿಸಿರುವರು. ಒಂದೆಡೆಯಲ್ಲಿ ಅಖಿಲಭಾರತ ಅಪ್ಪಾರ್ [illegible] ಕಾನ್ಫರೆನ್ಸು [illegible] ಕಾಂಗ್ರೆಸ್ಸಿಗೆ [illegible] ಸೇರಬೇಕೆಂದು ಕೇಳಿಕೊಳ್ಳುತ್ತಿದೆ. [illegible]ತ್ತೊಂದೆಡೆಯಲ್ಲಿ ಎಸೆಂಬ್ಲಿಯ ಮೆಂಬರುಗಳಾದ ಮಿ। ಆಸಫ್ ಆಲಿ, ಮಿ। ಶೇಕ್ ಮಹಮೂದ್, ಇಮಾಮುಲ್ ಹಿಂದ್ ಮೌಲಾನಾ ಅಬ್ದುಲ್ ಕಲಾಂ ಆಜಾದ್, ಮೌ। ಮುಫ್ತಿಕಿಫಾಯತುಲ್ಲಾ, ಮೌ। ಅಹ್ಮದ್ ಸಈದ್, ಮೌ। ನೂರುದ್ದೀನ್ ಬಿಹಾರಿ ಮೊದಲಾದ ಮುಸ್ಲಿಂ ಮುಖಂಡವರ್ಯರು, ಮುಸಲ್ಮಾನರನ್ನು ಕಾಂಗ್ರೆಸ್ಸಿಗೆ ತರಲು ರಾತ್ರಿಹಗಲೆನ್ನದೆ ಪ್ರಯತ್ನಿಸುತ್ತಿರುವರು.



[illegible]

ಇದೆಲ್ಲವನ್ನೂ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ನಮ್ಮ ಜಿಲ್ಲೆಯ ಮುಸ್ಲಿಮರು ಕಾಂಗ್ರೆಸ್ಸಿನ ವಿಷಯದಲ್ಲಿ [illegible]. [illegible] ಕಾಂಗ್ರೆಸ್ಸಿನ ಧ್ಯೇಯವೇನೆಂಬುದು ಗೊತ್ತಿಲ್ಲ. ಅದನ್ನು [illegible] ನಾವು [illegible] ನಮ್ಮ ಜಿಲ್ಲೆಯ ಮುಸ್ಲಿಂ [illegible]? [illegible] ಸ್ವಾತಂತ್ರ್ಯ [illegible] ಭಾವನೆ [illegible].

ಕಾಂಗ್ರೆಸ್ಸಿನಲ್ಲಿ ಹಿಂದುಗಳ ಸಂಖ್ಯೆಯು ಅಧಿಕವಾಗಿರುವುದರಿಂದ ಅದನ್ನು ಹಿಂದುಗಳ ಸಂಸ್ಥೆಯೆಂದು ಭಾವಿಸುವುದು ಸರಿಯಲ್ಲ. ಕಾಂಗ್ರೆಸ್ಸು ವಿವಿಧ ಜನಾಂಗಗಳ ಸಂಘಟಿತ ಸಭೆ. ಅದರಲ್ಲಿ ಹಿಂದುಗಳಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಮುಸಲ್ಮಾನರಿಗಿದೆ, ಮತ್ತು ಅಷ್ಟೇ ಇನ್ನಿತರ ಜಾತಿಯವರಿಗೂ ಇದೆ. ಕಾಂಗ್ರೆಸ್ಸಿನ ಅಧ್ಯಕ್ಷ ಮಹಾಶಯರಾದ ಪಂಡಿತ್ ಜವಾಹರ್‌ಲಾಲ್, ಮಹಾತ್ಮಾ ಗಾಂಧಿ, ರಾಜಗೋಪಾಲಾಚಾರ್ಯರು ಮೊದಲಾದ ದೇಶಭಕ್ತರು ಮುಸಲ್ಮಾನರು ಕಾಂಗ್ರೆಸ್ಸಿಗೆ ಸೇರಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಅವರ ಅಪೇಕ್ಷೆಯನ್ನು ನಾವು ಮನ್ನಿಸಬೇಕು.


ಸ್ವಾತಂತ್ರ್ಯವು ಮುಸ್ಲಿಮರ ಜನ್ಮಸಿದ್ಧ ಹಕ್ಕು. ಮುಸ್ಲಿಮನಾಗಿ ಪರದಾಸ್ಯದಲ್ಲಿರುವುದು ಅಸಾಧ್ಯ. ದುರ್ದೈವವಶಾತ್ ನಾವಿಂದು ಪರದಾಸ್ಯದ ಶೃಂಖಲೆಯಲ್ಲಿ ಬಂಧಿತರಾಗಿರುವೆವಾದರೂ ಅದನ್ನು ಹೋಗಲಾಡಿಸಲಿಕ್ಕೆ ಪ್ರಯತ್ನಿಸುವುದು ಪ್ರತಿಯೊಬ್ಬ ಮುಸ್ಲಿಮನ ಆದ್ಯಕರ್ತವ್ಯವಾಗಿದೆ. ದಾಸ್ಯವನ್ನು ಮುರಿಯುವುದು [illegible] ಸಾಧ್ಯವಾದ ಕೆಲಸವಲ್ಲ. ಅದಕ್ಕೆ ಸಂಘಟಿತ ಶಕ್ತಿಬೇಕು. ಅಂತಹ ಸಂಘಟಿತ ಶಕ್ತಿ ಇಂದು ಕಾಂಗ್ರೆಸ್ಸಿಗಲ್ಲದೆ ಮತ್ತಾವ ಸಂಸ್ಥೆಗೂ ಇರುವುದಿಲ್ಲವೆಂಬುದು ತಿಳಿದ ವಿಷಯ. ಆದುದರಿಂದ ನಾವು ಜಾತಿಮತ ಭೇದವಿಲ್ಲದೆ ಕಾಂಗ್ರೆಸ್ಸಿಗೆ ಸೇರಬೇಕು. ಕಾಂಗ್ರೆಸ್ಸಿನಲ್ಲಿ ಎಲ್ಲಾ ಧರ್ಮದವರಿಗೂ ಸಮಪಾಲಿದೆ. ಎಲ್ಲರೊಡನೆ ಸೇರಿ ನಾವು ದುಡಿದರೆ ಮಾತ್ರ ಎಲ್ಲರಂತೆಯೇ ನಮಗೂ ಹಕ್ಕುಬರುವುದು. ಇಲ್ಲವಾದರೆ ಇತರರ ದುಡಿತಕ್ಕೆ ಕೈನೀಡಿದಂತಾಗುವುದು. ಇದು ಅವಮಾನಕರ.

ಈಗ ಹಲವು ಮುಸ್ಲಿಂ ವ್ಯಕ್ತಿಗಳು [illegible] ಕಾಂಗ್ರೆಸ್ಸಿಗೆ ಸೇರದಂತೆ [illegible]. ಇದು [illegible] ಬಂಧುಗಳು [illegible] [illegible] ಕ್ಕಾಗಿ ಸ್ವಾತಂತ್ರ್ಯವನ್ನು ಪಡೆಯಲೋಸುಗ ತಮ್ಮ ತನುಮನಧನಗಳನ್ನರ್ಪಿಸಿ, ಭರತಮಾತೆಯ ಸುಪುತ್ರರಾಗಿ ಹಿಂದೂ, ಮುಸ್ಲಿಂ ಬಂಧುಗಳೆಲ್ಲರೂ ಒಗ್ಗಟ್ಟಾಗಿ ಕಾಂಗ್ರೆಸ್ಸಿಗೆ ಜಯವನ್ನು ಸಂಪಾದಿಸುವಂತಾಗಲಿ!

ಮೊಸರು ಮತ್ತು ಮಜ್ಜಿಗೆ.

ಪಂಜಾಬದಲ್ಲಿ ಹಲವರು ಮೊಸರು ಅಥವಾ ಮಜ್ಜಿಗೆಯಿಂದ ತಮ್ಮ ಕೂದಲುಗಳನ್ನೂ ಮುಖವನ್ನೂ ಚೆನ್ನಾಗಿ ತಿಕ್ಕಿ ತೊಳೆಯುವುದುಂಟು. ಸಾಬೂನಿನ ಯುಗದಲ್ಲಿ ಈ ಬಗೆಯ ಶೌಚ್ಯಕ್ರಮವನ್ನು ನೋಡಿ, ಪಾಶ್ಚಿಮಾತ್ಯರಿಗೆ ಆಶ್ಚರ್ಯವಾಗುತ್ತಿದೆ. ಮೊಸರು ಅಥವಾ ಮಜ್ಜಿಗೆಯನ್ನು ತಿಕ್ಕಿ ಕೂದಲುಗಳನ್ನು ತಿಕ್ಕುವುದರಿಂದ ಕೇಶಗಳಿಗೆ ಹೊಳಪುಂಟಾಗುತ್ತದಷ್ಟೆ ಅಲ್ಲದೆ, ಅದು ಉತ್ತಮ "ಟಾನಿಕ್" ಆಗಿದೆ. ಮುಖದ ಮೇಲಿನ ಮೊಡವೆಗಳು ಮಜ್ಜಿಗೆಯ ಲೇಪನದಿಂದ ವಾಸಿ ಹೋಗಿ, ಮುಖವು ನಯವೂ ಮೃದುವೂ ಆಗುವುದೆನ್ನುವರು.

ಕ್ಷೇತ್ರಗಳು



ವಿಶ್ವನಾಥಾಲಯ, ಕಾಶಿ.

ಭಾರತ ವರ್ಷವೇ ಒಂದು ಮಹಾ ಕ್ಷೇತ್ರವಾಗಿದೆ. ಪ್ರಪಂಚದಲ್ಲಿ ವೈಜ್ಞಾನಿಕ ಅದ್ಭುತಗಳನ್ನುಳಿದು, ಶಿಲ್ಪ, ಕಲೆ, ನೈಸರ್ಗಿಕ ನೋಟ ಇವುಗಳಲ್ಲಿ ಹಿಂದೂದೇಶವು ಹಲವು ಅದ್ಭುತಗಳನ್ನೊಳಗೊಂಡಿದೆ. ಹಿಂದೂದೇಶದ ಉತ್ತರಭಾಗದಲ್ಲಿನ ಪ್ರಸಿದ್ಧ ದೇವಾಲಯಗಳಲ್ಲಿ ಹಲವು, ಮಹಮ್ಮದೀಯರ ದಾಳಿಯಲ್ಲಿ ಧ್ವಂಸವಾದುವು. ಆದರೆ, ದಕ್ಷಿಣ ದೇಶವು ಇನ್ನೂ ಶಿಲ್ಪಕಲೆಯ ಅದ್ಭುತಗಳನ್ನು ಅಳಿಯದೆ ಇರಿಸಿಕೊಂಡು ಮೆರೆಯುತ್ತಿದೆ.

ಹಿಂದೂದೇಶದ ಒಂದೊಂದು ಜಿಲ್ಲೆಯಲ್ಲಿಯೂ ಪವಿತ್ರ ಕ್ಷೇತ್ರಗಳು ಅನೇಕವಿವೆ. ಅವುಗಳಲ್ಲಿ ಕಾಶಿ, ಗಯೆ, ಪ್ರಯಾಗ ಮತ್ತು ಅಯೋಧ್ಯೆಗಳು. ದಕ್ಷಿಣ ಭಾಗದಲ್ಲಿಯೂ ಅನೇಕ ದೇವಾಲಯಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಸಾಧ್ಯವು. ಆದ್ದರಿಂದ ಕೆಲವು ಮುಖ್ಯವಾದ ಕೆಲವು ಯಾತ್ರಾ ಸ್ಥಳಗಳನ್ನು ವಿವರಿಸ ಬಯಸುತ್ತೇವೆ.

ಕಾಶಿ.

ಕಾಶಿಯು ಹಿಂದೂದೇಶದಲ್ಲಿ ಸುಪ್ರಖ್ಯಾತ ಯಾತ್ರಾಸ್ಥಳವಾಗಿದೆ. ಮಹಾ ಪಂಡಿತರು ಇಲ್ಲಿದ್ದರು. ಹಲವು ವಿದ್ಯಾಲಯಗಳು ಇಲ್ಲಿದ್ದುವು. ಬ್ರಾಹ್ಮಣರ ಒಲವಾದ ತಾಣವಿದಾಗಿತ್ತು, ದೇವಾಲಯಗಳು, ಮಠಗಳು, ನಾನಾ ದೇವತೆಗಳು ಇವುಗಳಲ್ಲಿ ಕಾಶಿಯಷ್ಟು ಪ್ರಸಿದ್ಧ ಕ್ಷೇತ್ರವು ಇನ್ನೊಂದಿಲ್ಲ. ಕಾಶಿಯು ಕಲ್ಕತ್ತೆಯಿಂದ 420 ಮೈಲು ದೂರದಲ್ಲಿ, ಈಸ್ಟ್ ಇಂಡಿಯನ್ ರೈಲ್ವೆ ದಾರಿಯಲ್ಲಿದೆ. ಹಿಂದೂದೇಶದ ಎಲ್ಲ ಭಾಗಗಳಿಂದ ರಸ್ತೆಗಳು ಬಂದು ಇಲ್ಲಿ ಕೂಡುತ್ತಿವೆ. ಹಾಗೆಯೇ ನಾಲ್ಕು ದಿಕ್ಕುಗಳಿಂದ ರೈಲ್ವೆ ಲೈನು ಇವೆ. ಇದು ಗಂಗಾನದೀ ತೀರದಲ್ಲಿ ನೂರು ಮೈಲು ಉದ್ದಕ್ಕೆ ಹಬ್ಬಿದೆ. ನೂರಾರು ದೇವಾಲಯಗಳಲ್ಲದೆ, ಪವಿತ್ರ ಗಂಗಾಸ್ನಾನಕ್ಕಾಗಿ ಹಲವು ಸ್ನಾನ ಘಟ್ಟಗಳಿವೆ. ವಿಶ್ವನಾಥ ದೇವಾಲಯವೇ ಇಲ್ಲಿ ಮುಖ್ಯ. ಈ ದೇವಾಲಯದ ಕಳಶವು ಬಂಗಾರದ ಒಪ್ಪವುಳ್ಳದಾಗಿದೆ. ಎರಡನೆಯದಾಗಿ ದುರ್ಗಾಪತಿ ಎಂಬ ದೇವಾಲಯವು ಪ್ರಸಿದ್ಧವಾಗಿದೆ. ಪಂಚತೀರ್ಥ, ದಶಾಶ್ವಮೇಧ, ಹನುಮಾನಘಾಟ, ಪಂಚಗಂಗೆ, ಮಣಿಕರ್ಣಿಕಾ, ತುಳಸಿ, ಮಾನಸ ಸರೋವರ ಮೊದಲಾದ ಹೆಸರಿನ ಸ್ನಾನಘಟ್ಟಗಳಿವೆ. ಸಾಮಾನ್ಯವಾಗಿ ಹಿಂದೂಗಳ ಎಲ್ಲ ವಿಧದ ಉತ್ಸವಗಳೂ ಹಬ್ಬಗಳೂ ಇಲ್ಲಿ ಆಚರಿಸಲ್ಪಡುತ್ತಿವೆ. ನೂರಾರು ಧರ್ಮಸಾಲೆಗಳಿವೆ. ಕಾಶಿಯು ಹಿಂದೂದೇಶದ ಅತಿ ಪುರಾತನ ನಗರ. ಇಲ್ಲಿನಷ್ಟು ಸಂಸ್ಕೃತ ಶಾಲೆಗಳು ನಮ್ಮ ದೇಶದ ಮತ್ತಾವ ಕಡೆಯಲ್ಲಿಯೂ ಇಲ್ಲ. ಸಂಸ್ಕೃತ ಶಿಕ್ಷಣವು ಸಾವಿರಾರು ಜನಗಳಿಗೆ ಧರ್ಮಾರ್ಥ ಕೊಡಲ್ಪಡುತ್ತಿದೆ. ಕೈಗಾರಿಕೆಗಳಲ್ಲಿ ಇಲ್ಲಿಯ ಜರತಾರಿ ಮತ್ತು ರೇಶ್ಮೆ ಕೈಗಾರಿಕೆಯು ಪ್ರಸಿದ್ಧ. ಅನಂತರ ಹಿತ್ತಾಳೆ ಮತ್ತು ಮರದ ಕೆತ್ತನೆಯ ಕೆಲಸದಲ್ಲಿ ಕಾಶಿಗೆ ಹೆಸರಿದೆ. ಇಲ್ಲಿಂದ ಸುಮಾರು ಐದೂವರೆ ಮೈಲು ದೂರದಲ್ಲಿ, ಭಗವಾನ್ ಬುದ್ಧನು ಬೌದ್ಧಧರ್ಮ ಬೋಧಿಸಿದ "ಸಾರನಾಥ"ವಿದೆ. ಸಾರನಾಥದಲ್ಲಿ ಅಶೋಕನ ಸ್ತಂಭ, ಮಠಗಳು, ಸ್ತೂಪಗಳು ಇವೆ.



ದ್ವಾರಕೆಯ ದೃಶ್ಯ.

ದ್ವಾರಕೆ.

ದ್ವಾರಕೆಯು ಜಾಮನಗರದಿಂದ 87, ರಾಜಕೋಟದಿಂದ 138 ಮತ್ತು ಓಖಾ ಬಂದರದಿಂದ 18 ಮೈಲು ದೂರದಲ್ಲಿದೆ. ಯುಗಪುರುಷನಾದ ಶ್ರೀ ಕೃಷ್ಣನು ಜನಿಸಿದ ಸ್ಥಳವಿದು. ಇಲ್ಲಿಗೆ ವರ್ಷದ ಎಲ್ಲ ಕಾಲಗಳಲ್ಲಿಯೂ ಯಾತ್ರಾರ್ಥಿಗಳು ಬರುವರು. ಶ್ರೀಕೃಷ್ಣನ ಜೀವನಕ್ಕೆ ಸಂಬಂಧಿಸಿದ ಹಲವು ಉತ್ಸವಗಳು ಇಲ್ಲಿ ನಡೆಯುತ್ತಿವೆ. "ಹಬ್ಬಗಳ ಊರೆಂದೂ ದ್ವಾರಕೆಯು ಹೆಸರಾಗಿದೆ. ಜಗತ್ ಮಂದಿರ, ನರಸಿಂಹಜಿ, ಲಕ್ಷ್ಮೀಗೋಪಾಲ, ಕೇದಾರನಾಥ, ಹನುಮಾನಜಿ, ಗೋಮತೀಜಿ, ಕೃಷ್ಣಕುಂಡ—ಇವು ಮುಖ್ಯ ದೇವಾಲಯಗಳು. ಹಲವು "ಕುಂಡ"ಗಳಿವೆ. ಜನವರಿಯಲ್ಲಿ "ವಸಂತ ಪಂಚಮಿ", ಮಾರ್ಚಿಯಲ್ಲಿ "ಫೂಲ್ ದೋಲ್", ಆಗೋಸ್ಟಿನಲ್ಲಿ "ಜನ್ಮಾಷ್ಟಮಿ", ನವಂಬರದಲ್ಲಿ "ಅನ್ನಕೂಟ" ಇವು ಮುಖ್ಯ ಹಬ್ಬಗಳು. ದ್ವಾರಕೆಯಿಂದ ಇಪ್ಪತ್ತು ಮೈಲುಗಳ ದೂರದಲ್ಲಿ ಶ್ರೀ ಕೃಷ್ಣನ ನಾಲ್ವರು ಮಡದಿಯರ ಹೆಸರಿರುವ ನಾಲ್ಕು ದೇವಾಲಯಗಳಿವೆ.

ಗಯಾ ಮತ್ತು ಬುದ್ಧ ಗಯಾ.

ಗಯಾ ಕ್ಷೇತ್ರವು ಬಿಹಾರದ ಕಾಶಿಯಂತಿದೆ. ಇದು ಕಲ್ಕತ್ತೆಯಿಂದ ೨೫೫ ಮತ್ತು ಕಾಶಿಯಿಂದ ೧೩೭ ಮೈಲು ದೂರದಲ್ಲಿರುವುದು. ಇಲ್ಲಿರುವ ದೇವಾಲಯಗಳಲ್ಲಿ ಮಹಾದೇವಾಲಯ, ವಿಷ್ಣುಪಾದ, ರಾಮಶಿಲಾ, ಪ್ರೇತಶಿಲಾ ಮತ್ತು ಬ್ರಹ್ಮಯೋನಿ—ಈ ದೇವಾಲಯಗಳು ಮುಖ್ಯವಾಗಿವೆ. ಮಹಾದೇವಾಲಯದ ಬಳಿಯಲ್ಲಿ, ಬುದ್ಧನಿಗೆ ಬೋಧೆಯಾದ "ಬೋಧಿ"ವೃಕ್ಷವಿದೆ—ಇದರಲ್ಲಿ ಪಿತೃಪಕ್ಷ ಮೇಳ ಎಂಬ ಉತ್ಸವವು ವರ್ಷಂಪ್ರತಿ ಜರಗುತ್ತದೆ.

ಬುದ್ಧ ಗಯೆಯು, ಗಯಾ ಸ್ಟೇಷನಿನಿಂದ ಏಳು ಮೈಲು ದೂರದಲ್ಲಿದೆ. ಗಯೆಯಿಂದ ಅಲ್ಲಿಗೆ ಒಳ್ಳೆ ರಸ್ತೆಯಿದೆ. ಬುದ್ಧನ ಕೊನೆಯ ತಪಸ್ಸು ಇಲ್ಲಾಯಿತೆಂದೂ, ಬುದ್ಧನಿಗೆ ಜ್ಞಾನಸಂಸ್ಕಾರವೂ ಇಲ್ಲೇ ಆದುದೆಂದೂ ಪ್ರತೀತಿಯಿದೆ. ಬುದ್ಧನು ತಪಸ್ಸಿಗೆ ಕುಳಿತಲ್ಲಿ ಮಹಾದೇವಾಲಯವನ್ನು ಕಟ್ಟಿಸಿರುವರು. ಬುದ್ಧನು ಕುಳಿತ ಜಾಗದಲ್ಲೇ ೫೦ ಅಡಿ ಉದ್ದದ ವೇದಿಕೆ ಕಟ್ಟಿಸಲಾಗಿದೆ. ಬುದ್ಧನು, ಜ್ಞಾನಸಂಸ್ಕಾರ ಹೊಂದಿದ ನಂತರ ಏಳು ದಿನಗಳ ತನಕ ಆಲೋಚನಾಮಗ್ನನಾಗಿ ಈ ವೇದಿಕೆಯಿರುವಷ್ಟು ಸ್ಥಳದಲ್ಲಿ ಸಂಚರಿಸುತ್ತಿದ್ದನಂತೆ.



ಬುದ್ಧಗಯೆಯ ಮಹಾದೇವಾಲಯ.

ಮದರಾಸು

ಮದರಾಸು ನಗರವು ನಮ್ಮ ಪ್ರಾಂತ್ಯದ ರಾಜಧಾನಿಯಷ್ಟೆ ಅಲ್ಲದೆ ಪವಿತ್ರ ಕ್ಷೇತ್ರವೂ ಆಗಿದೆ. ಇಲ್ಲಿ ಅನೇಕ ದೇವಾಲಯಗಳಿವೆ. ವೈಷ್ಣವರ ಪಾರ್ಥಸಾರಥಿ ದೇವಾಲಯ, ಶೈವರ ಶ್ರೀ ಕಪಾಲೀಶ್ವರ ದೇವಾಲಯ, ಇವು ಮುಖ್ಯವಾದುವು. ಯಾತ್ರಾರ್ಥಿಗಳಿಗೆ ಉಳಕೊಳ್ಳುವ ಸಲುವಾಗಿ ಅನೇಕ ಛತ್ರಗಳಿವೆ. ಪಾರ್ಥಸಾರಥಿ ದೇವಾಲಯದ ರಥೋತ್ಸವವು ವಿಜೃಂಭಣೆಯಿಂದ ಜರಗುತ್ತದೆ.



ದ್ವಾರಕೆಯ ಮುಖ್ಯ ದೇವಾಲಯ "ಜಗನ್ಮಂದಿರ"

ಮಧುರೆ

ಮೀನಾಕ್ಷಿ ದೇವಾಲಯವೇ ಮಧುರೆಯಲ್ಲಿ ಹೆಸರಾದುದು. ೧೭ ನೇ ಶತಮಾನದಲ್ಲಿ ಅರಸನಾದ ತಿರುಮಲ ನಾಯಕನು ಇಲ್ಲಿ ಹಲವು ದೇವಾಲಯಗಳನ್ನು ಕಟ್ಟಿಸಿದ್ದಾನೆ. ಮೀನಾಕ್ಷಿ ದೇವಾಲಯದ ರೀತಿ, ಗೋಪುರಗಳು ಅತಿಶಯ ಪ್ರಸಿದ್ಧಿಹೊಂದಿವೆ. ವರ್ಷವೆಲ್ಲ ಆಗಾಗ್ಗೆ ಧಾರ್ಮಿಕ ಉತ್ಸವಗಳು ನಡೆದೇ ಇವೆ.

ನಾಸಿಕ

ಶೂರ್ಪನಖಿಯ ಮೂಗು ಕಡಿದಲ್ಲೇ ಇದೊಂದು ಕ್ಷೇತ್ರ. ಬೊಂಬಾಯಿಯಿಂದ ತೀರ ಸಮೀಪವಿದೆ. ಗೋದಾವರಿ ನದಿಯ ದಡದಲ್ಲಿ ಇದು ಹರಡಿದೆ. ಸೀತಾಗುಂಫಾ ದೇವಾಲಯ, ಕಾಲಾರಾಮ ದೇವಾಲಯ, ಕಪಾಲೇಶ್ವರ, ಸುಂದರ ನಾರಾಯಣ—ಇವು ಹೆಸರಾಂತ ದೇವಾಲಯಗಳು—ಲಕ್ಷ್ಮಣಕುಂಡ, ರಾಮಕುಂಡ, ಮತ್ತು ಧನುಷ್ಯಕುಂಡಗಳೆಂಬ ತೀರ್ಥಗಳಿವೆ. ಶ್ರೀರಾಮನು ವನವಾಸಕ್ಕೆ ಹೋಗಿದ್ದಾಗ ಉಳಕೊಂಡ ಪಂಚವಟಿ ಆಶ್ರಮ, ರಾವಣನು ಸೀತೆಯನ್ನೆತ್ತಿ



ರಥೋತ್ಸವ, ಮದರಾಸು.

ಕೊಂಡ ಸ್ಥಳ ಇವೆಲ್ಲವನ್ನು ಯಾತ್ರಿಕರಿಗೆ, ಅಲ್ಲಿಯ ಆಳುಗಳು ತೋರಿಸುವರು. ಇಲ್ಲಿಂದ ಐದು ಮೈಲುಗಳ ದೂರದಲ್ಲೆ ಪಾಂಡುಲೇನಾ ಎಂಬ ಹೆಸರಿನ, ಎರಡು ಸಾವಿರ ವರ್ಷಗಳ ಹಿಂದಣ ಗವಿಗಳೂ ಇವೆ.



ನಾಸಿಕ: ದೇವಾಲಯಗಳು ಮತ್ತು ಗೋದಾವರಿ ನದಿ.

ಪಂಢರಪುರ

ವಿಠೋಬ ದೇವಾಲಯವು ಪಂಢರಪುರದಲ್ಲಿ ಪ್ರಸಿದ್ಧ. ಭಕ್ತ ಪುಂಡಲೀಕನಿಗೆ ವಿಷ್ಣುವು ಮನುಷ್ಯ ದೇಹಧಾರಿಯಾಗಿ ಬಂದು ಕಾಣಿಸಿಕೊಂಡನೆನ್ನುತ್ತ, ಈ ದೇವಾಲಯ ಕಟ್ಟಿಸಿರುವರು. ನಗರದೊಳಗಿಂದ ಹರಿವ ನದಿಯು, ಈ ಊರಿನಲ್ಲಿ ಅತ್ಯಂತ ಪಾವಿತ್ರ್ಯ ಹೊಂದಿದೆ.

ಪ್ರಯಾಗ

ಅಲ್ಲಹಾಬಾದದ ಒಂದು ಭಾಗವೆ ಪ್ರಯಾಗ. ಸರಸ್ವತಿ, ಯಮುನಾ, ಗಂಗೆಗಳ ಸಂಗಮವಿಲ್ಲಿ ಉಂಟಾದುದೇ ಇದೊಂದು ಕ್ಷೇತ್ರವಾಗಿ ಮಾರ್ಪಟ್ಟಿತು: ಪಾವಿತ್ರ್ಯ ಬಂತು. ಮನುಷ್ಯನ ಎಲ್ಲ ಪಾಪವು ಈ ಸಂಗಮದಲ್ಲಿ ಸ್ನಾನಮಾಡಿದ ಮಾತ್ರಕ್ಕೆ ತೊಲಗುವುದೆಂದು ಹಿಂದೂಗಳು ನಂಬಿರುವರು. ವೇಣಿ ಮಾಧವನ ದೇವಾಲಯವು ಮುಖ್ಯ. ಪ್ರತಿಯೊಂದು ದರ್ಶನಕ್ಕೆ, ಫೀಸು ವಸೂಲು ಮಾಡುವ "ಪಂಡರು" ಇಲ್ಲಿ ತುಂಬ ಇದ್ದಾರೆ. ಅಲ್ಲಿ ಜರಗುವ "ಮಾಘ ಮೇಳ" ಮತ್ತು "ಕುಂಭ ಮೇಳ''ವೆಂಬೀ ಎರಡು ಜಾತ್ರೆಗಳು ಜಗತ್ಪ್ರಸಿದ್ಧವಾಗಿವೆ. ಮಾಘ ಮೇಳವು ವರ್ಷಂಪ್ರತಿ ಜನವರಿ ಅಥವಾ ಫೆಬ್ರುವರಿಯಲ್ಲಿ ಜರಗುವುದು. ಕುಂಭ ಮೇಳವು ಹನ್ನೆರಡು ವರ್ಷಗಳಿಗೊಮ್ಮೆ ಮಾತ್ರ ಜರಗುವುದು. ಈ ಮೇಳಗಳಿಗೆ ಕಡಮೆ ಪಕ್ಷ ಹತ್ತುಲಕ್ಷ ಜನರು ಬಂದು ಸೇರುವರಂತೆ. ಅಲ್ಲಹಾಬಾದ ನಗರವು ಮೂರುಸಾವಿರ ವರುಷಗಳಿಗಿಂತಲೂ ಹಳೆಯದಾದ ಪ್ರಸಿದ್ಧ ನಗರ.

ರಾಮೇಶ್ವರ

ಶ್ರೀರಾಮಚಂದ್ರನ ಹೆಸರಲ್ಲಿರುವ ಈ ನಗರವು, ಅವನಿಂದಲೇ ರಚಿತವಾಯಿತಂತೆ. ಅದು ಕಾರಣ, ರಾಮಾಯಣದಷ್ಟೆ ಹಳತು. ಇಲ್ಲಿಂದಲೇ ಅನತಿದೂರದಲ್ಲಿ, ಶ್ರೀರಾಮನು ಲಂಕೆಗೆ ಹೋಗಲು ಕಟ್ಟಿಸಿದ ಸಂಕದ ಕುರುಹುಗಳಿವೆ. ರಾಮೇಶ್ವರದ ದೇವಾಲಯಗಳು ಅನೇಕ.



ರಾಮೇಶ್ವರದ ದೇವಾಲಯ.

ಇಲ್ಲಿಯ ಕತ್ತಲೆಯ ಕೆಲಸವು ಹೆಸರಾದುದು. (ಗೌಡಸಾರಸ್ವತ ಬ್ರಾಹ್ಮಣ ವೃಂದದವರ ಶ್ರೀ ಕೋದಂಡ ರಾಮಸ್ವಾಮಿ ದೇವಾಲಯವೂ ಶ್ರೀ ಕಾಶಿ ಮಠವೂ ಇಲ್ಲಿವೆ.)



ತ್ರಿಚಿನಾಪಳ್ಳಿ ಬಂಡೆ ಮತ್ತು ದೇವಾಲಯ.

ಕುರುಕ್ಷೇತ್ರ.

ಮಹಾಭಾರತ ಯುದ್ಧವು ನಡೆದ ಸ್ಥಳವಿದು. ಅನೇಕ ಮೈಲುಗಳಿಗೆ ಹಿಡಿದಿದೆ. ವೈದಾನ. ಸ್ಥಳವು ಈಗಲೂ ಕಾಣಿಸುತ್ತಿದೆ. ಇಲ್ಲಿಗೆ ಬಂದು ಪಟ್ಟಣವರ್ಣಿಸ್ಟಿದೆ; ದೈಶ್ವಿ ಸಿದ್ಧಾಂತವೂ ಇದೆ. ಕುರುಕ್ಷೇತ್ರ ವೈದಾನ 134 ಚದರ ಮೈಲು ಇದೆ. ಕುರುಕ್ಷೇತ್ರದಲ್ಲಿ 360 ತೀರ್ಥಗಳಿವೆ. ಸಾವಿರಾರು ವರ್ಷಗಳಿಂದ ಕುಂಭಮೇಳದಷ್ಟೆ ಪ್ರಸಿದ್ಧವಾದ ಮಹಾ ಮೇಳಗಳು, ಈ ವಿಶಾಲ ಮೈದಾನಿನಲ್ಲಿ ಜರಗಿವೆ. ಈ ಮೇಳಗಳು ಸೂರ್ಯಗ್ರಹಣ ಕಾಲದಲ್ಲಿ ಮಾತ್ರ ಜರಗುತ್ತವೆ. "ಭಗವದ್ಗೀತೆ"ಯು ಬೋಧಿಸಲ್ಪಟ್ಟ ಪವಿತ್ರ ಸ್ಥಳವಿದು.

ತ್ರಿಚಿನಾಪಳ್ಳಿ.

ತ್ರಿಚಿನಾಪಳ್ಳಿಯು ಕಾವೇರಿನದಿ ತೀರದಲ್ಲಿದೆ. ದೊಡ್ಡ ನಗರವಲ್ಲದೆ, ಯಾತ್ರಾಸ್ಥಳವೂ ಆಗಿದೆ. ದೊಡ್ಡ ಬಂಡೆಯ ಮೇಲಿರುವ ಗಣೇಶ ದೇವಾಲಯವು ಹೆಸರಾದುದು.



ಚಿದಂಬರದ ದೇವಾಲಯ ಮತ್ತು ಕೆರೆ.
ದಕ್ಷಿಣ ದೇಶದಲ್ಲಿ ಪ್ರಸಿದ್ಧ ಯಾತ್ರಾಕ್ಷೇತ್ರ.

ಮಲೇಜ್ವರವಿಲ್ಲ.

ಕೆಲ ವರ್ಷಗಳ ಹಿಂದೆ ಬೊಂಬಾಯಿ ನಗರದಲ್ಲಿ ಮಲೇಜ್ವರದ ಹಾವಳಿಯು ವಿಶೇಷವಿತ್ತು. ಇಂದು, ಕೊರ್ಪೊರೇಶನಿನವರ ನೂತನ ಯತ್ನಗಳಿಂದ ನುಸಿಗಳ ಕಾಟವೂ, ಅದರೊಂದಿಗೆ ಮಲೇಜ್ವರದ ಹಾವಳಿಯೂ ನಿಂತುಹೋಗಿವೆ.

ಪ್ರಪಂಚದಲ್ಲಿನ ಮಹಾ ನಗರಗಳಲ್ಲಿ ದೊಡ್ಡದೆನಿಸುವ ನ್ಯೂಯಾರ್ಕ್ ನಗರದಲ್ಲಿ ಇಂದು, ಒಂದೇ ಒಂದು ನುಸಿಯು ಇಲ್ಲವಂತೆ!

ಶ್ರೀಮತ್ ಸುಕೃತೀಂದ್ರ ತೀರ್ಥರ ಭಾವಚಿತ್ರಗಳು ಅರ್ಧಾಣೆಯಂತೆ ಪ್ರಭಾತ ಆಫೀಸಿನಲ್ಲಿ ದೊರೆವುವು.



ನ್ಯಾಯದೇವತೆ!

(ಲೇಖಕರು:—ಶ್ರೀ। ಬೋಳಂತೂರ ಕೃಷ್ಣಪ್ರಭು, ಬಂಟವಾಳ.)

...ವ, ದಿನಗೂಲಿಯ ಆಳು. ಅನಂತ ಆಕಾಶವನ್ನು ಹರಕು ಕೊಡೆಗೆ ಹೋಲಿಸಿದನು. ಭಗವಂತನ ಸೃಷ್ಟಿಯಲ್ಲಿ ನ್ಯಾಯವಿದೆಯೇ ಎಂದು ಆಶ್ಚರ್ಯಪಟ್ಟನು. ನ್ಯಾಯಾನ್ಯಾಯಗಳ ಜಿಜ್ಞಾಸೆಯಲ್ಲಿ ಮನಸ್ಸು ಮನುಗ್ನವಾಗಿದ್ದಾಗ, ನ್ಯಾಯಮಾಡುವ ಸಂದರ್ಭವೂ ಒದಗಿತು. ನ್ಯಾಯದೇವತೆಯನ್ನು ಕಂಡನು.....!

ಸುಬ್ಬಣ್ಣನು ಮೊದಲಿನ್ನೂರು [illegible] ಗಾಡಿಯಲ್ಲಿ. ತಂದೆಯು ಮೃತನಾದ ನಂತರ ಅಣ್ಣನು (ಹೆಂಡತಿಯ ಚಾಡಿ ಮಾತನ್ನು ಕೇಳಿ) ಇದ್ದ ಅಲ್ಪಸ್ವಲ್ಪ ಹಣ ಕಾಸುಗಳನ್ನು ಮರೆಪಡಿಸಿ, ಮನೆಯಲ್ಲಿ ನಿಲ್ಲಲು ಸಹ ಅವಕಾಶಕೊಡದಿದ್ದುದರಿಂದ ಅವನಿಂದು ಅನಾಥನಾಗಿ ಅಲೆದಾಡಬೇಕಾಯಿತು. ಅವನಿಗೆ ಅಲ್ಪಸ್ವಲ್ಪ ಓದುಬರಹ ಬರುತಿದ್ದಿತು. ನಿರುದ್ಯೋಗದ ಈ ಕಾಲದಲ್ಲಿ ಜೀವನೋಪಾಯವು ಅದರಿಂದ ನಡೆಯದಾಯಿತು. ಕೊನೆಗೆ [illegible]ಗೆ ಬಂದು ಜೀವನವನ್ನು ಸಾಗಿಸಲು ತೊಡಗಿದನು. ಹಗಲೆಲ್ಲ ಮೈಮುರಿದು ಕೆಲಸಮಾಡಿ ಏಳೆಂಟು ಆಣೆಗಳಷ್ಟು (ಕೂಲಿ) ದುಡಿದು ಅಂದಿನ ಊಟ ಉಪಚಾರಗಳಲ್ಲಿ ಅದನ್ನು ಖರ್ಚು ಮಾಡುವನು. ರಾತ್ರೆ ಮಲಗುವಾಗ ಅವನ ಕೈಯಲ್ಲಿ ಚಿಕ್ಕಾಸಾದರೂ ಉಳಿಯದು. ಎಂದಿನಂತೆ ಅಂದು ರಾತ್ರೆಯ ಊಟವಾದೊಡನೆ ಒಂದು (ಹಾಳುಬಿದ್ದ) ಅಂಗಡಿಯ ಜಗಲಿಯಲ್ಲಿ ಮಲಗಿದನು. ಆಗ ಅವನ ದೃಷ್ಟಿಯು ಅಸಂಖ್ಯ ನಕ್ಷತ್ರಗಳಿಂದ ಕೂಡಿದ ಅನಂತ ಆಕಾಶದ ಮೇಲೆ ಬಿದ್ದಿತು. ಒಡನೆ [illegible] ತನ್ನ ಕೊಡೆಯ [illegible] ತಲೆದಿಂಬಾಗಿಟ್ಟ ಕೊಡೆಯನ್ನು ಮುಟ್ಟಿ ನೋಡಿದನು. ಅದು ಅಲ್ಲೇ ಸುರಕ್ಷಿತವಾಗಿ ಬಿದ್ದುಕೊಂಡಿತ್ತು.

ಸುಬ್ಬಣ್ಣನ ಬಾಡಿದ ಮೋರೆಯಲ್ಲಿ ಕಿರುನಗೆಯು ಮೂಡಿತು. ಅನಂತ ಆಕಾಶವನ್ನು (ಹರಕು) ಕೊಡೆಗೆ ಹೋಲಿಸಿದ ತನ್ನ ಮೆದುಳಿನ ಚಾತುರ್ಯಕ್ಕಾಗಿ.

"ಸಾವಿರಾರು ವಿದ್ಯುದ್ದೀಪಗಳನ್ನು ತೂಗಿಸಿದ (ಅರಮನೆಯ) ಮದುವೆಯ ಚಪ್ಪರಕ್ಕೆ ಹಾಸಿದ—ಶುಭ್ರ ವಸ್ತ್ರದ ಮೇಲು ಕಟ್ಟಿನ ಸಾದೃಶ್ಯವನ್ನು ಮನೋಹರವಾದ ನಭೋಮಂಡಲಕ್ಕೆ ಕೊಡಬಾರದಿತ್ತೆ? ಅದೆಂತು ನಾನೀ ಜನ್ಮದಲ್ಲಿ ಅಂತಹ ಅರಮನೆಯೊಳಗೆ ಕಾಲಿಟ್ಟವನೆ ಅಲ್ಲ" ಇಂತು ವಿಚಾರತರಂಗಗಳು ಅವನ ಮೆದುಳಲ್ಲಿ ಅಲೆಯತೊಡಗಿದವು—ಮರಳಿ ಆಕಾಶವನ್ನು ನೋಡಿ, "ಪರಮಾತ್ಮನು ಅಮೂಲ್ಯ ರತ್ನರಾಶಿಯನ್ನು ಆಕಾಶದಲ್ಲಿ ಚೆಲ್ಲಿಬಿಟ್ಟಿರಬಹುದೇ? ಭೂಮಿಯ ಮೇಲೆ ಅಸಹ್ಯ ದಾರಿದ್ರ್ಯವು ಹರಚಿಕೊಂಡಿರುವಾಗ—ಮನುಷ್ಯ ಸಂಪರ್ಕವೇ ಇಲ್ಲದ ಆಕಾಶದಲ್ಲಿ ಈ ರೀತಿ ರತ್ನರಾಶಿಯನ್ನು ಏತಕ್ಕಾಗಿ ಚೆಲ್ಲಿಬಿಟ್ಟನು? ಅಲಂಕಾರಕ್ಕೆ ವ್ಯತಿರಿಕ್ತವಾಗಿ ನಿರುಪಯೋಗ ಆಭರಣಗಳನ್ನು ಮಾಡಿಸಿ ಇಟ್ಟುಕೊಳ್ಳುವ ಶ್ರೀಮಂತರ ಪ್ರವೃತ್ತಿಯನ್ನೇ ಪರಮಾತ್ಮನೂ ಕೈಕೊಂಡಿರಬಹುದೇ? ಪರಮಾತ್ಮನೆಂಬ ಒಬ್ಬನು ನಿಜವಾಗಿ ಇರುವನೇ—ಅಥವಾ ಅದೊಂದು ಮನುಷ್ಯನಿರ್ಮಿತ ಕಲ್ಪನೆಯಾಗಿರಬಹುದೇ? ಪರಮಾತ್ಮನಿರುವನೆಂದಾದರೆ ಅವನು ನ್ಯಾಯಗಾರನಾಗಿರಬೇಕು. ಯಾವುದೊಂದು ಅಪರಾಧ ಮಾಡದ ನನ್ನನ್ನು ಈ ರೀತಿಯಲ್ಲಿ ಅನಾಥ ಭಿಕ್ಷುಕನನ್ನಾಗಿ ಮಾಡಿದ—ಪರಮಾತ್ಮನನ್ನು ನ್ಯಾಯಗಾರನೆಂದು ಹೇಗೆ ಹೇಳಬರುವುದು? "ಪರಮಾತ್ಮನು ಸಂಪೂರ್ಣ ಸೃಷ್ಟಿಯ ಚರಾಚರ—ವಸ್ತುಗಳಲ್ಲಿ ಇದ್ದೇ ಇರುವನು. ಅವನು ಜಗದ್ರಕ್ಷಕ" ಎಂದು ಹೇಳುವರು. ಹಾಗಿದ್ದರೆ ನನ್ನ ಈ ದುರ್ದೆಸೆಯನ್ನು ಮಾತ್ರ ಅವನು ನೋಡಿಲ್ಲವೇ? ಅವನು ನ್ಯಾಯಾಧೀಶನಾಗಿದ್ದರೆ ನಾನು ಅನುಭವಿಸುವ ಅನ್ಯಾಯವು ಅವನಿಗೆ ಹಿತವಾಗಿದ್ದಿರಬಹುದೇ? ಹಾಗಲ್ಲವಿದ್ದರೆ ನನಗಾದ ಅನ್ಯಾಯವನ್ನು ಅವನೇಕೆ ನಿವಾರಿಸಲಿಲ್ಲ? [illegible] ಇದೊಂದು ದುರ್ಘಟ ಕಾರ್ಯವಲ್ಲ.

"ನನ್ನ ಗತಜನ್ಮದ ಪಾಪಫಲವನ್ನು ನಾನೀ ಜನ್ಮದಲ್ಲಿ ಉಪಭೋಗಿಸುವನೆಂತೆ ನಾನಿದುವರೆಗೂ ಸಾಧ್ಯವಿಲ್ಲ. ನನಗೀ ಜನ್ಮದಲ್ಲಿ ಅದು ಪೂರ್ಣ ಅಗದಷ್ಟಾಗಿದೆ. ಹಾಗಿದ್ದರೆ ನನ್ನ ಪರೀಕ್ಷೆಗಾಗಿ ಹೀಗೆ ನನ್ನನ್ನು ಹಿಂಸಿಸುವನೆ ಬಹುದೇ? ಇರಲಿ! ಇನ್ನೆಷ್ಟು ಕಾಲ ಈ ಪರೀಕ್ಷೆಯು ಮುಂದುವರಿವುದೂ ನೋಡಬೇಕು.

"ನನಗೆ ವಿಶೇಷ ಸಂಪತ್ತು ಬೇಕೆಂದಿಲ್ಲ. ಇಡಿ ದಿವಸ ಮೈಮುರಿದು ಕೆಲಸ ಮಾಡಿ ಬಂದ ನಂತರ ರಾತ್ರೆ ಮಲಗಿರುವುದಕ್ಕೆ ಎಲ್ಲಾದರೊಂದು ಗಾಳಿಮಳೆಯ ಹೊಡೆತವಿಲ್ಲದ ಸ್ಥಳ ದೊರಕಿಸಿಕೊಟ್ಟರೆ ಸಾಕಾಗಿದ್ದಿತು. ಪರಮಾತ್ಮನೆ! ನೀನೆಷ್ಟೋ ವಿಧದಲ್ಲಿ ಬೇಕಾದರೂ ನನ್ನನ್ನು ಪರೀಕ್ಷಿಸು. ನನ್ನ ಇದೊಂದು ಪ್ರಾರ್ಥನೆಯನ್ನು ಮಾತ್ರ ನೆರವೇರಿಸು. ಬೇರೆ ಹೆಚ್ಚು ವೈಭವಗಳೂ ನನಗೆ ಬೇಕಾಗಿಲ್ಲ.

ಸ್ವಲ್ಪ [illegible] ದೂರದಲ್ಲಿ ವಿಶೇಷ ಗಲಿಬಿಲಿಯಾದಂತೆ ಕೇಳಿಸಿತು ಸುಬ್ಬಣ್ಣನಿಗೆ. ಪಕ್ಕನೆ ಎದ್ದುಕುಳಿತು ಆ ಕಡೆ ನೋಡಿದನು. ಒಬ್ಬ (ಕ್ಷೀಣಕಾಯನು) ಓಡಿ ಬರುತಿದ್ದನು. ಕೆಲವರು "ಕಳ್ಳನು ಓಡಿದನು ಹಿಡಿಯಿರಿ!" ಎಂದು ಬೊಬ್ಬೆ ಹಾಕ್ತ ಅವನನ್ನು ಹಿಂಬಾಲಿಸಿಕೊಂಡು ಓಡೋಡಿ ಬರುತ್ತಲಿದ್ದರು. ನೋಡುತ್ತಿದ್ದಂತೆಯೇ ಆ ವ್ಯಕ್ತಿಯು ಸುಬ್ಬಣ್ಣನ ಸಮೀಪಕ್ಕೆ ಬಂದ. ಸ್ವಲ್ಪ ದೂರದಲ್ಲಿ ಜನರು ಹಿಂದು ಓಡಿಬರುತ್ತ "ಕಳ್ಳ—ಹಿಡಿಯಿರಿ! ಕಳ್ಳ!" ಎಂದು ಗಲಭೆಮಾಡುತ್ತಲಿದ್ದರು.

"ಸುಬ್ಬಣ್ಣಾ! ಅನ್ಯಾಯದ ಕುರಿತು ವಿಚಾರಮಾಡುತ್ತಲಿದ್ದೆಯಲ್ಲವೇ—ಹಿಡಿ! ಅವನನ್ನು—ನ್ಯಾಯದಾನಕ್ಕೆ ಸಹಾಯ ಮಾಡು!" ಎಂದು ಸುಬ್ಬಣ್ಣನಿಗೆ ಅವನ ಹೃದಯವು ನುಡಿಯುತಲಿತು. ಸುಬ್ಬಣ್ಣನು ವಿದ್ಯುದ್ವೇಗದಿಂದ ಎದ್ದುನಿಂತು ಮುಂದೆ ಓಡೋಡಿ ಬರುತ್ತಿರುವ ಆ ವ್ಯಕ್ತಿ (ಕಳ್ಳ)ಯನ್ನು ಜಿಗಿದು ಹಿಡಕೊಂಡನು. ಉಭಯತರೂ ಹೊಡೆದುಕೊಂಡರು. ದೈನಂದಿನ ಕೆಲಸದಿಂದ ಸುಬ್ಬಣ್ಣನ ಶರೀರವು ಪುಷ್ಟವಾಗಿದ್ದಿತು. ಈ ಸಂದರ್ಭದಲ್ಲಿ ಅದು ಅವನಿಗೆ ಬಹಳ ಉಪಕಾರಮಾಡಿತು. ಸುಬ್ಬಣ್ಣನು—ಸ್ವಲ್ಪ ಸಮಯದಲ್ಲಿಯೇ ಕಳ್ಳನನ್ನು ಭೂಮಿಯ ಮೇಲೆ ಕೆಡವಿ ಅವನ ಎದೆಯ ಮೇಲೆ ಕೂತುಕೊಂಡನು. ಕಳ್ಳನು ತಪ್ಪಿಸಿಕೊಳ್ಳುವುದಕ್ಕೆ ಎಷ್ಟೋ ತಡಪಡಿಸಿದನು. ಆದು ಅವನಿಗೆ ಸಾಧ್ಯವಾಗಲಿಲ್ಲ. ದೃಢಕಾಯನಾದ ಸುಬ್ಬಣ್ಣನ ಹಿಡಿತದಿಂದ ತಪ್ಪಿಸಿಕೊಳ್ಳುವುದು ಕಳ್ಳನಿಗೆ ಅಶಕ್ಯವಾಗಿ ಕಂಡಿತು. ಆಗ ಜನಸಮೂಹವು ಕಳ್ಳನನ್ನು ಹುಡುಕಿಕೊಂಡು ಸಮೀಪಕ್ಕೆ ಬರುತ್ತಲಿದ್ದಿತು. ಅಂತೆಯೇ ಕಳ್ಳನ ಮೆದುಳಲ್ಲಿ ಒಂದು ಅಪೂರ್ವ ಯೋಚನೆಯು ಉದ್ಭೂತವಾಯಿತು. ತಕ್ಷಣ ಕಳ್ಳನು ತನ್ನ ಕೊರಳಲ್ಲಿದ್ದ ಗುಲಾಬಿ ಬಣ್ಣದ ಖದ್ದರ್ ಶಾಲನ್ನು ತೆಗೆದು ಸುಬ್ಬಣ್ಣನ ಕೊರಳಿಗೆ ಮಾಲೆ ಹಾಕಿಬಿಟ್ಟನು.

ಕಳ್ಳನ ಈ ಹಂಚಿಕೆಯ ಗೂಢಾರ್ಥವು ಕ್ಷಣಾರ್ಧದೊಳಗೆ ಸುಬ್ಬಣ್ಣನಿಗೆ ಹೊಳೆಯಿತು. "ಈಗ ಈ ಕಳ್ಳನು—ಕೊರಳನ್ನು ಹಿಸುಕಿ ತನ್ನನ್ನು ಕೊಲ್ಲಲು ಯತ್ನಿಸುವದರಲ್ಲಿರುವನು" ಎಂದು ಕಳ್ಳನ ಎರಡು ಕೈಗಳನ್ನು ಭದ್ರವಾಗಿ ಹಿಡಿದುಕೊಂಡನು ಸುಬ್ಬಣ್ಣನು. ಕಳ್ಳನ ಕುಯುಕ್ತಿಯ ತಿರುಳನ್ನು ತಿಳಕೊಂಡು ತಕ್ಷಣ ಅದನ್ನು ನಿಷ್ಫಲವಾಗಿಸಿದುದಕ್ಕಾಗಿ ಸುಬ್ಬಣ್ಣನಿಗೆ ಅತ್ಯಾನಂದವಾಯಿತು. ಕಳ್ಳನಿಗೆ ಕೈಗಳನ್ನು ಅಲ್ಲಾಡಿಸುವುದು ಸಹ ಅಸಾಧ್ಯವಾಯಿತು. ಕಳ್ಳನ ಖದ್ದರ್ ಶಾಲು ಮಾತ್ರ ಸುಬ್ಬಣ್ಣನ ಕೊರಳಲ್ಲಿಯೇ ತೂಗಿಕೊಂಡಿತ್ತು. ಆ ಘಟನೆಗಳು ಕೊನೆಗಾಣುವಷ್ಟರಲ್ಲಿ ಜನರ ಗುಂಪು—ಸಮೀಪಕ್ಕೆ ಬಂದಿತು. ಮರುಕ್ಷಣದಲ್ಲಿಯೇ ಜನರು ಇವರಿಬ್ಬರನ್ನು ಸುತ್ತುವರಿದರು. ಇವರು [illegible] ಜನರ ಕೊರಳಿಯ [illegible]ನಾದರು.

ಜನಸಮೂಹದಿಂದ ಒಬ್ಬನು ಮುಂದೆ ಬಂದು ಸುಬ್ಬಣ್ಣನ ಎರಡು ಕೈಗಳನ್ನೂ ಹಿಡಿದುಕೊಂಡು ಒಬ್ಬಾತ ಅಂದ—"ಕದ್ದುಕೊಂಡು ಪಲಾಯನ ಮಾಡಲು ಇನ್ನು ಆಗಲಾರದು. ಸಿಕ್ಕಿಬಿದ್ದೆ. ಮೊದಲೇ ನಾನು ನೋಡಿದ್ದ ಖದ್ದರ್ ಶಾಲು ಇವನ ಕೊರಳಲ್ಲಿದೆ" ಎಂದನು.

ಸುಬ್ಬಣ್ಣನು—ಆ ಮಾತಿನ ಅರ್ಥವಾಗದೆ—ವಿಸ್ಮಯಗೊಂಡು ಕಳ್ಳನ [illegible] ಕಡೆಗೆ ನೋಡಿ ಅವಾಕ್ಕಾದನು.

"ಸ್ವಾಮೀ! ನಾನು ಹಿಡಿದಿರುವುದೇ ಈ ಕಳ್ಳನ. ನಿಮಗೆ ಸಿಗುತ್ತಿರಲಿಲ್ಲ ನೀವು ಬರುವುದಕ್ಕೆ ಸ್ವಲ್ಪ ವಿಳಂಬವಾಗುತ್ತಿದ್ದರೆ ನನ್ನನ್ನು ಕೊಂದೇ ಬಿಡುತ್ತಿದ್ದನು. ಈ ಕಳ್ಳನು" ಎಂದು ಸುಬ್ಬಣ್ಣನ ಕೈಯಿಂದ ತನ್ನ ಕೈಗಳನ್ನು ಬಿಡಿಸಿಕೊಂಡು ಕಳ್ಳನು ದೂರದಲ್ಲಿ ಹೋಗಿ ನಿಂತುಕೊಂಡನು.

ಈಗ ಮಾತ್ರ ಸುಬ್ಬಣ್ಣನ ಮೆದುಳಲ್ಲಿ ಬೆಳಕು ಹರಿಯಿತು. "ನಾನೇ ಕಳ್ಳನೆಂದು ಜನರು ತಿಳಕೊಳ್ಳುವಂತೆ ಈ ಕಳ್ಳನು ಯತ್ನಿಸುವನು" ಎಂದು ಯೋಚಿಸಿ ಮರು ಮಾತಾಡುವಷ್ಟರಲ್ಲಿ ಮರಳಿ ನಾಲ್ಕೈದು ಜನರು ಮುಂದೆ ಬಂದು ಸುಬ್ಬಣ್ಣನನ್ನು ಹಿಡಿದುಕೊಂಡರು. ಸುಲಭದಲ್ಲಿ ದೊರೆತ ಸುಸಂದರ್ಭದಲ್ಲಿ—ಕಳ್ಳನು ಸುಬ್ಬಣ್ಣನ ಬೆನ್ನಿನ ಮೇಲೆ ಬಲವಾಗಿ ಎರಡು ಏಟುಗಳನ್ನು ಹೊಡೆದು—"ಈ ಕಸೆ ಕಳ್ಳನನ್ನು ಬಿಡಲಾಗದು. ಪೋಲೀಸರ ವಶಕ್ಕೆ ಒಪ್ಪಿಸಬೇಕು!" ಎಂದನು.

ಸುಬ್ಬಣ್ಣನು—"ಸ್ವಾಮಿ! ಕಳ್ಳನು ನಾನಲ್ಲ—ಅವನೇ ಕದ್ದು ಓಡುತ್ತಿದ್ದವನು. ನಾನು ಅವನನ್ನು ಹಿಡಕೊಂಡೆನು" ಎಂದನು.

"ವ್ಹಾವವ್ಹಾ, ಕಳ್ಳತನ ಮಾಡಿ ಆ ಮೇಲೆ ನುಣುಚಿ ಸುಳ್ಳಾಡಿ ತಪ್ಪಿಸಿಕೊಳ್ಳುವುದಕ್ಕೆ ನೋಡುವೆ,—ಒಳ್ಳೆ ಜಾಣ" ಎಂದು ಹುಬ್ಬುಗಂಟಿಕ್ಕಿ ಕಳ್ಳನು ನುಡಿದನು.

ಸುಬ್ಬಣ್ಣನು ಅವಾಕ್ಕಾದನು. ಅವನನ್ನು ಹಿಡಿದುಕೊಂಡಿದ್ದವರಲ್ಲಿ ಒಬ್ಬನು ಸುಬ್ಬಣ್ಣನ ಕೆನ್ನೆಗೆ ಒಂದು ಪೆಟ್ಟು ಕೊಡೆದು—"ನಿನ್ನ ಕೊರಳಲ್ಲಿದ್ದ ಈ ಶಾಲನ್ನು ನಾನು ಮೊದಲೇ ಗುರುತಿಸಿರುವೆನು." ಎಂದನು.

ಸುಬ್ಬಣ್ಣನಿಗೆ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಕಳ್ಳನ ಕುಕರ್ಮದ ಗೂಢವೆಲ್ಲವನ್ನೂ ಅವನು ತಿಳಕೊಂಡನು. ಅಷ್ಟರಲ್ಲಿ ಒಬ್ಬ ಪೋಲೀಸ್ ಜವಾನನು ಬಂದು-"ಇದೇನು—ಗಲಾಟೆ ಹಿಂದೆ ಸರಿಯಿರಿ!" ಎಂದು ಸುಬ್ಬಣ್ಣನ ಸಮೀಪಕ್ಕೆ ಬಂದನು. ಸುಬ್ಬಣ್ಣನನ್ನು ಹಿಡಿದುಕೊಂಡವನು ಪೋಲೀಸ್ ಜವಾನನೊಡನೆ-"ಈ ಕಳ್ಳನು ನನ್ನ ಜೇಬಿನಿಂದ ಪೊಕೆಟನ್ನು ಜಾರಿಸಿರುವನು." ಎಂದು ಹೇಳಿದನು.

"ಪೊಕೆಟನ್ನು ಜಾರಿಸಿ ಈ ದಾರಿಯಲ್ಲಿ ಓಡುತ್ತಿದ್ದನು. ಆಗ ನಾನು ಹಿಡಿದುಕೊಂಡೆನು ನನ್ನನ್ನು ಕೊಂದೇ ಬಿಡುತ್ತಿದ್ದನು. ಅಷ್ಟರಲ್ಲಿ ಇವರು ಬಂದು ಈ ದುರಾತ್ಮನ ಕೈಯಿಂದ ನನ್ನನ್ನು ಬಿಡಿಸಿದರು." ಎಂದನು ಕಳ್ಳನು.

"ಹಾಗೇ! ಪೊಕೆಟನ್ನು ಕದ್ದವನು ಅವನೇ ಎಂದು ನೀವು ಖಂಡಿತವಾಗಿ ಹೇಳುವಿರಿ! ಅಲ್ಲವೇ?" ಎಂದು ಪೋಲೀಸನು ಕೇಳಿದನು.

ನಾಲ್ಕೈದು ಜನರು ಮುಂದೆ ಬಂದು "ನಾವು ಕಂಡಿರುವೆವು" ಎಂದರು.

ಕಳ್ಳನು ಮುಂದೆ ಬಂದು—"ಸ್ವಾಮಿ! ಅದೆಲ್ಲ ಏತಕ್ಕೆ? ಈಗ ಈ ಕಳ್ಳನ ಅಂಗಶೋಧನೆ ಮಾಡಿ ನೋಡಬೇಕು. ಕದ್ದ ಪೊಕೇಟು ಸಿಕ್ಕಿದರೆ ಬೇರೆ ರುಜುವಾತೇ ಬೇಡವಲ್ಲವೆ!" ಎಂದನು.

ಎಲ್ಲರೂ "ಹೈ-ಹೈ" ಎಂದರು, ಸುಬ್ಬಣ್ಣನು "ಸ್ವಾಮೀ! ನನ್ನಲ್ಲಿ ಝಡತಿ ಮಾಡಿ ನೋಡಿರಿ! ನಿಜವಾಗಿ ನಾನು ಕದ್ದವನಲ್ಲ. ಕದ್ದವನು ಇವನು" ಎಂದು ಕಳ್ಳನ ಕಡೆ ಬೆರಳನ್ನು ತೋರಿಸಿದನು.

ಕಳ್ಳನು ಕಣ್ಣುಗಳನ್ನು ಅರಳಿಸಿ "ಶಾಭಾಸ್, ನೀನು ಕಾಣಲು ಹಳ್ಳಿಗನಂತಿರುವಿ, ಆದರೆ ಮಾತಿನಲ್ಲಿ ಮಹಾ ಪಂಡಿತ, ಕಳ್ಳತನದಲ್ಲಿ ಪ್ರವೀಣ-ಸುಳ್ಳು ಆಡುವುದರಲ್ಲಿ ಶಿಖಾಮಣಿ. ಆಗಲಿ! ಸ್ವಾಮಿ!, ನನ್ನ ಹೆಸರು ನಾರಾಯಣನ್, ಮೊದಲು ನನ್ನನ್ನು ಝಡತಿ ಮಾಡಿರಿ! ಅನಂತರ ಅವನನ್ನು—ಆಮೇಲೆ ಎಲ್ಲವೂ ತನ್ನಂತೆ ಬಯಲಾಗುವುದು. ಎಂದು—ದೊಡ್ಡ ವೀರಾವೀರನಂತೆ ಕೈಗಳನ್ನೆತ್ತಿ ನಿಂತುಕೊಂಡನು ಕಳ್ಳನು.

ಪೋಲಿಸ್ ಜವಾನನು ಮೊದಲು ಸುಬ್ಬಣ್ಣನ ಅಂಗಶೋಧನೆ ಮಾಡಲು ತೊಡಗಿದನು. ಸುಬ್ಬಣ್ಣನು ತೊಟ್ಟ ಅಂಗಿಯ ಕಿಶೆಯನ್ನು ಒತ್ತಿನೋಡಿದನು. ಯಾವುದೋ ಒಂದು ವಸ್ತುವು ಇದ್ದಂತೆ ಕಂಡಿತು. ಕಿಶೆಗೆ ಕೈಹಾಕಿ ಅದನ್ನು ತೆಗೆದನು. ಅದೊಂದು ಹಣವಿಡುವ ಪೊಕೇಟು ಆಗಿದ್ದಿತು. ಅದನ್ನು ನೋಡಿ ಸುಬ್ಬಣ್ಣನಿಗೆ ತಲೆತಿರುಗಿತು. ಸುತ್ತಲೂ ಕತ್ತಲು ಕವಿದಂತೆ ಭಾಸವಾಯಿತು.

"ಸರಿ! ಇದೇ ನನ್ನ ಪೊಕೇಟು-! ಕಳವು ಪತ್ತೆಯಾಯಿತು. ಒಳ್ಳೇ ಜಾಣ! ತನ್ನ ಕಿಶೆಯಲ್ಲಿ ಕದ್ದ ಪೊಕೇಟನ್ನು ಇಟ್ಟುಕೊಂಡು ಮತ್ತೂ ಝಡತಿಮಾಡೆಂದು ಹೇಳುವನು. ಇವನು ತಾಜಾ ಹಗಲುಗಳ್ಳ" ಎಂದನು ಪೊಕೇಟಿನ ಮಾಲಿಕನು.

"ತಾನು ಕದ್ದು—ನಿರಪರಾಧಿ ನನ್ನನ್ನು ಕಳ್ಳನಾಗಿ ಮಾಡಲು ಯತ್ನಿಸುವನು." ಎಂದು ನಾರಾಯಣ(ಕಳ್ಳ)ನು ಗೊಣಗುಟ್ಟಿದನು.

ಪೋಲಿಸನು ಸುಬ್ಬಣ್ಣನ ಕೈಗೆ ಬೇಡಿಯನ್ನು ಸಿಕ್ಕಿಸಿದನು. ಸುಬ್ಬಣ್ಣನು—ಆಶ್ಚರ್ಯ ಮತ್ತು ದುಃಖದಿಂದ "ಸ್ವಾಮಿ! ನಾನು ಕದಿಯಲಿಲ್ಲ—ಪ್ರಮಾಣ ಮಾಡಿ ಹೇಳುವೆನು. ಈ ಘಟಿಂಗನು ...." ಎನ್ನುವಷ್ಟರಲ್ಲಿ ಪೋಲಿಸನು "ಬಾಯಿಮುಚ್ಚು! ನಿನ್ನ ಹೇಳಿಕೆಯನ್ನು ನಾಳೆ ಕೋರ್ಟಿನಲ್ಲಿ ಹೇಳು!" ಎಂದು ಸುಬ್ಬಣ್ಣನನ್ನು ಅಟ್ಟಿಕೊಂಡು ಸ್ಟೇಶನ ಮಾರ್ಗವನ್ನು ಹಿಡಿದನು. ಸುಬ್ಬಣ್ಣನು ತಲೆಯನ್ನು ತಗ್ಗಿಸಿ ಅವನ ಹಿಂದೆಯೇ ನಡೆದನು. ಅವನಿಗೆ ಇದೊಂದು ದೊಡ್ಡ ಒಗಟಾಗಿ ಕಂಡಿತು, ಅದನ್ನೇ ಯೋಚಿಸುತ್ತ ನಡೆದನು.

ನಾರಾಯಣನ್‌ನು ತಾನು ಸಿಕ್ಕಿಕೊಂಡೆನೆಂದು ಸ್ಪಷ್ಟವಾದಾಕ್ಷಣ ತಪ್ಪಿಸಿಕೊಳ್ಳುವುದಕ್ಕಾಗಿ ಮೆಲ್ಲಗೆ ಪೊಕೇಟನ್ನು ಸುಬ್ಬಣ್ಣನ ಕಿಸೆಯೊಳಗೆ ಹಾಕಿ—ಜನರು ಗುರುತಿಸಿದ ಬಿದ್ದುರ್ ಶಾಲನ್ನು ಅವನಿಗೆ ಉಡುಗೊರೆ ಮಾಡಿದ್ದನು. ಈ ರೀತಿ ಯಾರೊಬ್ಬರೂ ಕಂಡುಹಿಡಿಯದಂತೆ ಕಳ್ಳತನವನ್ನು ಪತ್ತೆಮಾಡಿದವನನ್ನೇ ಕಳ್ಳನಾಗಿ ಮಾಡಿ ಪರಾರಿಯಾದನು.

ಕಚೇರಿಯೊಳಗೆ ಅಪರಾಧಿಗಳು ನಿಲ್ಲುವ ಸ್ಥಾನದಲ್ಲಿ ಸುಬ್ಬಣ್ಣನು ನಿಂತುಕೊಂಡು ತನ್ನ ದುರ್ವಿಧಿಯ ಕಾರ್ಯಕ್ರಮವನ್ನು ಯೋಚಿಸುತ್ತಿದ್ದನು. ಮೇಜಿಸ್ಟ್ರೇಟರು ತೀರ್ಮಾನವನ್ನು ಬರೆದು ಓದಿಹೇಳಿದರು. ...."ಕೊರಳಿನಲ್ಲಿದ್ದ ಬಿದ್ದರ್ ಶಾಲಿನ ಗುರುತಿನಿಂದಲೂ ಕಿಶೆಯಲ್ಲಿ ಸಿಕ್ಕಿದ ಹಣದ ಪೊಕೇಟಿನಿಂದಲೂ—ಸುಬ್ಬಣ್ಣನೇ ಈ ಕಳವಿನ ತಪ್ಪುಗಾರನೆಂದು ದೃಢವಾಗುವುದು. ಎಲ್ಲಾ ಸಾಕ್ಷಿಗಾರರ ಹೇಳಿಕೆಯು ನಂಬತಕ್ಕದ್ದಿದೆ. ಸುಬ್ಬಣ್ಣನು ತಪ್ಪನ್ನು ಒಪ್ಪುವದಿಲ್ಲವಾದರೂ ಅವನ ಮೇಲೆ ತಪ್ಪು ಸ್ಥಾಪಿತವಾಗುವುದು. ಸುಬ್ಬಣ್ಣನು ಓಡಿ ಹೋಗುತ್ತಿರುವಾಗ ಹಿಡಿದುಕೊಂಡ ನಾರಾಯಣರ ಧೈರ್ಯಸಾಹಸಗಳು ಪ್ರಶಂಸಾರ್ಹವಾಗಿವೆ. ಮಾತ್ರವಲ್ಲ, ಅವರೊಬ್ಬ ಶ್ರೇಷ್ಠನಾಗರಿಕರಾಗಿ ಕರ್ತವ್ಯಪಾಲನೆಯನ್ನು ಮಾಡಿರುವರು ಎಂಬುದನ್ನು ಇಲ್ಲಿ ಉಲ್ಲೇಖಿಸುವುದಕ್ಕೆ ನನಗೆ ಅತ್ಯಾನಂದವಾಗುವುದು. ಸುಬ್ಬಣ್ಣನು ಮಾಡಿದ ಕಳವು ಇದೇ ಮೊದಲನೆಯದು. ಇವನಿಗೆ ಮೂರು ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಿರುವೆನು."

* * *

ರಾತ್ರಿ ಸೆರೆಮನೆಯೊಳಗೆ ಮಲಗಿಕೊಂಡಿದ್ದ ಸುಬ್ಬಣ್ಣನು ದೇವನೊಡನೆ "ಪರಮಾತ್ಮನೆ! ನಿರಪರಾಧಿಯಾದ ನನಗೆ ಸೆರೆಮನೆಯೇ—ನಾನು ನ್ಯಾಯಕ್ಕೆ ಸಹಾಯಮಾಡಿದುದೇ ನನ್ನ ಮಹಾಪರಾಧವಾಯಿತು. ಅದಕ್ಕಾಗಿ ನಾನಿಂದು ಭಯಂಕರವಾದ ಸೆರೆಮನೆಯ ಕೋಣೆಯಲ್ಲಿ ಪರಸ್ವಾಧೀನನಾಗಿ ಬಿದ್ದುಕೊಂಡಿರಬೇಕಾಯಿತು. . . . . . ನನ್ನ ಸುತ್ತಲೂ ಭದ್ರವಾದ ಗೋಡೆಗಳಿರುವವು. [illegible] ಹೆದರಿಕೆ ಇಲ್ಲ ಇಲ್ಲ. [illegible] ಕೊಳ್ಳಲು ದಪ್ಪವಾದ ಕಂಬಳಿ ಇದೆ . . . . ಸರಿ! ಪರಮಾತ್ಮನು ಭಕ್ತಮನೋಭೀಷ್ಟದಾಯಕನು. ಹಾ!—ಎಲ್ಲವೂ ನಿಜ. ನಾನು ನಿನ್ನೆ ರಾತ್ರಿ ದೇವನೊಡನೆ ಬೇಡಿದುದೆಲ್ಲ ನನಗಿಂದು ಲಭಿಸಿತು." ಸುಬ್ಬಣ್ಣನು ಹೊಟ್ಟೆ ತುಂಬಾ ನಗುವಂತೆ ನಕ್ಕನು. ಆ ನಗುವನ್ನು ನಿಲ್ಲಿಸಲು ಅವನಿಂದಾಗಲಿಲ್ಲ. ಪಹರೆಯವನು ಬಂದು ನಗಬಾರದೆಂದು ಎಷ್ಟೋ ಹೇಳಿದರೂ ಬೆದರಿಸಿದರೂ [illegible] ಎಲ್ಲವೂ ನಿಷ್ಫಲ . . . . ಬೆಳಕು ಮೂಡಿತು. ಸೆರೆಮನೆಯ ಡಾಕ್ಟರರು ಬಂದು ನೋಡುವಷ್ಟರಲ್ಲಿ ಸುಬ್ಬಣ್ಣನ ನಗುವು ನಿಂತಿತು. . . . . . ಎಲ್ಲಿ [illegible] ಸುಬ್ಬಣ್ಣನ [illegible] ದೇಹದೊಳಗೆ!

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. No. 746/1937.

ಕೆ. ನರಸಿಂಹ ಕಾಮತ್, ಸರಾಫ್ ಮಂಜುನಾಥ ಕಾಮತ್‌ರವರ ಮಗ ಕಾಸರಗೋಡು ಕಸಬೆಯಲ್ಲಿರುವವ— } ವಾದಿ

ಮತ್ತು

ಲಕ್ಷ್ಮೀನಾರಾಯಣ ಪ್ರಭು [illegible] ರಾಮಚಂದ್ರ ಪ್ರಭು [illegible] ರವರ ಮಗ. ಕಾಸರಗೋಡು ತಾಲೂಕು ನೆಕ್ರಾಜೆ ಗ್ರಾಮದ [illegible]ದಲ್ಲಿರುವವ } ಪ್ರತಿವಾದಿ

ಇವರೊಳಗೆ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಯು ವಾದಿಗೆ ತಾರೀಕು 8—8—1934ರಲ್ಲಿ ರೂಪಾಯಿ 1800-0-0ಕ್ಕೆ [illegible] ಸದ್ರಿ ವ್ಯಾಜ್ಯದ ತಾರೀಕು 18-2-1938ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ [illegible] ಪ್ರತಿವಾದಿಯು ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸತಕ್ಕದ್ದು. ಇಲ್ಲದಿದ್ದರೆ ಪ್ರತಿವಾದಿಯನ್ನು ಶಿಕ್ಷ್ಯಾ ಮಾಡಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು. } *P. Ananda Rao,*
1-2-1938. } Plader for Plaintiff.



ಪರಿವರ್ತನ

ಸಂಪತ್ತು, ಸಮೃದ್ಧಿ, ಅಧಿಕಾರ ದರ್ಪ ಹಾಗೂ ವಿಪುಲ ಸಲಕರಣೆಗಳು ಒಂದು ದೇಶದಲ್ಲಿ ಅಧಿಕವಾಗಿರಬೇಕಾದರೆ ಆ ದೇಶವು ತನ್ನ ಸ್ವಾರ್ಥಕ್ಕಾಗಿ ಇನ್ನೊಂದು ದೇಶದಿಂದ ಕೊಳ್ಳೆ ಹೊಡೆದಿದ್ದಿರಬೇಕು. ಇಲ್ಲವೇ, ಅಬಲ ದೇಶವನ್ನು ತನ್ನ ಬರ್ಬರ ವರ್ತನದಿಂದ ಜಯಿಸಿ ಅದನ್ನು ತನ್ನ ಅಂಕಿತದಲ್ಲಿಟ್ಟು ಅದರ ಸಂಪತ್ತನ್ನು ಹೀರಿ ಮೆರೆಯಬೇಕು. ಮತ್ತೂ ಹೇಳುವುದಾದರೆ ಜ್ಞಾನಶೂನ್ಯವಾಗಿದ್ದ ಒಂದು ಜನಾಂಗವನ್ನು ವಂಚಿಸಿ, ವಂಚಿಸಿ ಮೋಸಪಡಿಸಿರಬೇಕು. ಈ ರೀತಿಯಾಗಿ ಒಂದು ಇನ್ನೊಂದನ್ನು ಅಪಹರಿಸದಿದ್ದರೆ ಎಷ್ಟಕ್ಕೂ ಒಂದು ದೇಶವು ಇನ್ನೊಂದಕ್ಕಿಂತ ಪ್ರಬಲವಾಗಲು ಸಾಧ್ಯವೇ ಇಲ್ಲ. ಆ ರೀತಿಯಾಗುತ್ತಿದ್ದರೆ ಪ್ರಕೃತಿಮಾತೆಯು, ಹೆಚ್ಚೇಕೆ ಜಗತ್ಕರ್ತನು ದೋಷಾರೋಪವನ್ನು ಹೊಂದಬೇಕಾದೀತು. ಆದೇ ರೀತಿ ಮಾನವ ಪ್ರಪಂಚದಲ್ಲಿ ತನಗಿಂತ ಜ್ಞಾನಶೂನ್ಯ ಮಾನವ ರಾಶಿಗಳನ್ನು ವಂಚಿಸಿ, ವಂಚಿಸಿ ಮೋಸಪಡಿಸಿ ತಾನು ಧನಾಢ್ಯ ಹಾಗೂ ಬಲಾಢ್ಯನಾಗಿರಬೇಕು. ಹೆಚ್ಚೇಕೆ ಅಧಿಕಾರದರ್ಪದಿಂದ ಮೆರೆದಿರಬೇಕು. ಇದು ಆಧುನಿಕ ಪ್ರಪಂಚದಲ್ಲಿ ದಿನನಿತ್ಯ ನಡೆಯುತ್ತಿರುವ ರೂಢಿ ಪದ್ಧತಿಯಾಗಿದೆ. ಬಲಾತ್ಕಾರದ ದರ್ಪದಿಂದ ಮೆರೆಯುತ್ತಿರುವ ಜನಾಂಗವನ್ನು ಅಬಲ ಹಾಗೂ ಬಡಸಮಾಜವು "ಅದು ಅವರ ಭಾಗ್ಯ, ಅವರಿಗೆ ದೇವರು ಅನುಗ್ರಹಿಸಿರುವನು, ನಾವೇಕೆ ಹೊಟ್ಟೆಕಿಚ್ಚು ಪಡಬೇಕು" ಎಂದು ವೇದವಾಕ್ಯಗಳನ್ನು ಆಡುತ್ತಿರುವರು. ಅದಕ್ಕೆ ಸರಿಯಾದ ತಾಳ ಎಂಬಂತೆ ಬಡಸಮಾಜವನ್ನು ದೇವರೇ ಸೃಷ್ಟಿಸಿದ್ದು, ಅದನ್ನು ಅವರು ಅನುಭವಿಸಿಯೇ ತೀರಬೇಕು, ಅದಕ್ಕೆ ವಿರುದ್ಧವಾಗಿ ಸಹಾಯಮಾಡುವುದೆಂದರೆ ದೇವಶಾಪಕ್ಕೆ ಗುರಿಯಾಗಬೇಕಾಗುತ್ತದೆಂಬ ಪಲ್ಲವಿಯೂ ಹಾಡಲ್ಪಡುತ್ತಿದೆ.

ನವನಾಗರಿಕತೆಯ ಪ್ರಪಂಚದಲ್ಲಿ ಅನೇಕ ಪರಿವರ್ತನಗಳು ಆಗಿವೆ, ಆಗುತ್ತಲಿವೆ ಹಾಗೂ ಇನ್ನೂ ಆಗಲಿವೆ. ಆದರೆ ಇದು ಹೆಚ್ಚು ಕಡಿಮೆ, ಕನಿಷ್ಠ ಎಂಬ ತಾರತಮ್ಯಗಳಿಂದ ಕೂಡಿದೆ. ಪರಿವರ್ತನವು ಬಹಳ ನಿಧಾನವಾಗಿ ಪರಿವರ್ತನ ಹೊಂದುತ್ತಿದೆ. ಅಂದರೆ ಗುಡಾಣ ಗಾತ್ರದ ಹೊಟ್ಟೆಗೆ ಕಾಳಿನ ಚೂರನ್ನು ತುರುಕಿಸಿದಂತೆ ನಡೆಯುತ್ತಿದೆ. ಅದು ಇನ್ನಷ್ಟು ವಿಶಾಲವಾಗಿ ಪರಿವರ್ತನ ಹೊಂದಬೇಕೆಂದೇ ಆಧುನಿಕ ಪ್ರಪಂಚದ ಅಂತಿಮ ಆಶೆ. ಅದು ಎಷ್ಟು ತ್ವರಿತವಾಗಿ ಮುಂದುವರಿಯುತ್ತದೆಯೋ ಅಷ್ಟು ಉತ್ತಮ, ಎಷ್ಟು ವಿಳಂಬವಾಗಿ ಮುಂದುವರಿಯುವುದೋ ಅಷ್ಟೇ ಘಾತವೆಂಬುದನ್ನು ಅಖಿಲ ಪ್ರಪಂಚವು ತಿಳಿದುಕೊಂಡಿದೆ.

ನವನಾಗರಿಕತೆಯಲ್ಲಿ ಮುಂದುವರಿದ ಇಂಗ್ಲಾಂಡಿನಲ್ಲಿ ಜೀವನವು ಪರಿವರ್ತನ ಹೊಂದಿದೆ ಎಂದು ಹೇಳಬಹುದೇ? ಹಾಗಾದರೆ ಅಲ್ಲಿಯೂ ಸಾಮ್ರಾಜ್ಯಶಾಹಿಯ ಬಳಕೆ ಏಕೆ? ಅಮೇರಿಕದಲ್ಲಿದ ತನ್ನ ವಿಜಯಪತಾಕೆಯನ್ನು ಎತ್ತಿಹಿಡಿದಿದೆ ಎಂದು ಘೋಷಿಸಬಹುದೇ? ಹಾಗಿದ್ದರೆ ಅಲ್ಲಿ ನಿರುದ್ಯೋಗಿಗಳ ತಂಡಗಳು ಮುಷ್ಕರ ಇತ್ಯಾದಿಗಳನ್ನು ಹೆಚ್ಚಿಸುವ ಗೋಜಿಗೆ ಹೋಗುವುದೇಕೆ? ಫ್ರಾನ್ಸಿನಲ್ಲಿ ಅವರ ವಿಚಾರವೇನೆಂದು ತಿಳಿಯಲಾಸ್ಪದವುಂಟೆ? ಅಂದರೆ ಫ್ರಾನ್ಸ್ ಇಂಗ್ಲಾಂಡಿನ ಕಡೆಗೆ ಕಣ್ಣನ್ನು ಎತ್ತಿನೋಡುವ ಆವಶ್ಯಕತೆಯೇನು? ಇಟಲಿ, ಜರ್ಮನಿ ಹಾಗೂ ಜಪಾನು ಈ ಮೂರು ದೇಶಗಳ ಸಾಮ್ರಾಜ್ಯದಾಹವು ಇನ್ನೂ ಶಮನವಾಗದಿರುವ ಕಾರಣವಾದರೂ ಅದೇನಿರಬಹುದು? ಹೀಗಿರುವಲ್ಲಿ ಆಧುನಿಕ ರೀತಿಗೊಪ್ಪುವ ಆಗತ್ಯದ ಪರಿವರ್ತನವಾಗದೆ ಗತ್ಯಂತರವಿಲ್ಲ. ಅದು ಇಂದಲ್ಲದಿದ್ದರೆ ನಾಳೆಯಾದರೂ ಪರಿವರ್ತನ ಹೊಂದಲೇಬೇಕಾಗುತ್ತದೆ. ಇದು ಪ್ರಕೃತಿನಿಯಮ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

ಆಧುನಿಕ ರೀತಿಯ ರಷ್ಯದ ಕಡೆಗೆ ಕಣ್ಣೆತ್ತಿದರೆ ಮಾತ್ರ ಅಲ್ಲಿ ಸಂಪೂರ್ಣ ಪರಿವರ್ತನವಾದಂತೆ ಕಾಣುತ್ತದೆ. ಪ್ರಜಾಪ್ರಭುತ್ವವು ಅಲ್ಲಿ ವಿರಾಜಮಾನವಾಗಿ ತನ್ನ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸುತ್ತಿದೆ. ಹದಿನೆಂಟು ಕೋಟಿ ಪ್ರಜಾ ಸಂಖ್ಯೆಯುಳ್ಳ ರಷ್ಯವು ಇಂದು ಸರ್ವಾನುಕೂಲತೆಗಳಿಂದ ಸರಿಸಮಾನವಾದ ಸ್ಥಾನಮಾನಗಳನ್ನು ಹೊಂದಿ ತನ್ನ ರೀತಿ ನೀತಿಗಳನ್ನು ಚಾಚೂ ತಪ್ಪದೆ ನಡಿಸುತ್ತಿದೆ. ವಿದೇಶಗಳ ಬಲತ್ಕಾರವಾಗಲೀ, ವಂಚನೆಯಾಗಲೀ, ಮೋಸವಾಗಲೀ ಅಲ್ಲಿ ನಡೆಯುಗೊಡುವುದಿಲ್ಲ. ಸ್ವದೇಶಿ ಸಾಮಗ್ರಿಗಳಿಂದ ಪರಿವೇಷ್ಟಿತವಾದ ರಷ್ಯವು ಇಂದು ತನ್ನಲ್ಲಿ ನಿರುದ್ಯೋಗತನವನ್ನು ನಿರ್ಮೂಲಪಡಿಸಿದೆ. ಐಶ್ವರ್ಯವಂತ ಬಡವನೆಂಬ ತಾರತಮ್ಯ ಇಲ್ಲದೆ ಉಭಯತರದೂ ಸರಿಸಮಾನವಾದ ಅನುಕೂಲತೆಗಳನ್ನು ಹೊಂದುತ್ತಿರುವರು. ಇದರಿಂದ ಒಬ್ಬರನ್ನೊಬ್ಬರು ಅವಹೇಳಿಸುವದಾಗಲೀ, ಮೋಸಪಡಿಸುವುದಾಗಲೀ, ಕೆಣಕುವುದಾಗಲೀ ಅಲ್ಲಿರುವುದಿಲ್ಲ. ಪೇಟೆ, ಪಟ್ಟಣಗಳು ಪಡೆಯುತ್ತಿರುವ ಸಲಕರಣೆಗಳು ನಿರಾಯಾಸವಾಗಿ ಹಳ್ಳಿ—ಗ್ರಾಮಗಳು ಪಡೆಯುತ್ತಿವೆ. ಈ ದೆಸೆಯಿಂದ ಪ್ರಕೃತಿಮಾತೆಯ ಸಂಪೂರ್ಣ ನಿಯಮವು ಅಲ್ಲಿ ಪಾಲಿಸಲ್ಪಡುವುದು. ಇದು ಅನೇಕ ಯಜ್ಞಗಳ ಸಾಧನಾಫಲವಾಗಿದೆ. ರಷ್ಯವು ಇಂದು ಸರಿಸಮಾನವಾದ ಪರಿವರ್ತನ ಹೊಂದಿ ಪ್ರಕೃತಿಮಾತೆಯ ಆಶೀರ್ವಾದವನ್ನು ಪಡೆದಿದೆ. ಇನ್ನು ರಷ್ಯದಿಂದಲೇ ಅಂಥಹ ಪಾಠವನ್ನು ಮಿಕ್ಕ ದೇಶಗಳು ಪಡೆಯಲಿಕ್ಕಿವೆ.

ಪರಿವರ್ತನದ ವಿಷಯದಲ್ಲಿ ಆಧುನಿಕ ಭಾರತದಲ್ಲಿ ಏನಾದರೂ ಪರಿಣಾಮವುಂಟಾಗಿದೆಯೇ ಎಂಬುದನ್ನು ವಿಚಾರಿಸಬೇಕಾಗಿದೆ. ಅನೇಕ ಕಾಲದಿಂದ ಕಷ್ಟಪಡುತ್ತಿದ್ದ ಭಾರತವು ಚಿತ್ರವಿಲ್ಲದ ಪೆಟ್ಟಿಗೂ, ಅಗ್ನಿಯಿಲ್ಲದ ಕಟ್ಟಿಗೂ ತಲೆಬಾಗಬೇಕಾಯಿತು. ವಿರುದ್ಧವಾದ ಪಾರ್ಟಿಗಳ ವಿಭಾಗದಿಂದ ಸಹೋದರರೊಳಗೆ ಭೇದವುಂಟಾಯಿತು. ಸಾಮ್ರಾಜ್ಯಶಾಹಿಯ ಬಲಾತ್ಕಾರಕ್ಕೆ ತುತ್ತಾಗಬೇಕಾಯಿತು. ತುಳಿದು ಆಳಲ್ಪಡುವ ಭಾರತದಲ್ಲಿ ಒಮ್ಮಿಂದೊಮ್ಮೆ ವಿಚಾರಕ್ರಾಂತಿಯ ಕಿಡಿಯೊಂದು ಪ್ರಕಾಶಮಾನವಾಯಿತು. ದಾಸ್ಯಶೃಂಖಲೆಯಿಂದ ಬಿಗಿಯಲ್ಪಟ್ಟ ಭಾರತಮಾತೆಯ ಕಣ್ಣೀರು ಶರಧಿಯಂತೆ ಹರಿಯಲಾರಂಭವಾಯಿತು. ಅಭಿಮಾನ ಸ್ಥೈರ್ಯದಿಂದ ಪರಿವೇಷ್ಟಿತವಾದ ಜನಾಂಗವು ಒಮ್ಮೆಲೇ ಕಣ್ಣು ತೆರೆಯಿತು. ರಾಷ್ಟ್ರೀಯ ಮಹಾಸಭೆಯು ಜನನವಾಯಿತು. "ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ಜಗತ್ತಿಗೆ ಸಾರಿತು. ಹಣಗಾರರ, ಬಲಾಢ್ಯರ ಹಾಗೂ ಸ್ವದೇಶ ದ್ರೋಹಿಗಳ ಸಹಕಾರ-ಪ್ರೋತ್ಸಾಹದಿಂದ ಆಳರಸರು ಅನೇಕ ತರದ ದಬ್ಬಾಳಿಕೆಯನ್ನು ನಡಿಸಿ ದೇಶದ ಬಡಜನಾಂಗದ ಸ್ವಾತಂತ್ರ್ಯದಾಹವನ್ನು ನಿರ್ಮೂಲಪಡಿಸಲುಪಕ್ರಮಿಸಿದರು. [illegible] ಪ್ರವಾಹದಿಂದ ಎದ್ದ ಸ್ವಾತಂತ್ರ್ಯ ಕಿಡಿಯು ಒಮ್ಮೆಲೇ ಏಕಪ್ರಕಾರವಾಗಿ ಅಖಿಲ ಭಾರತದಲ್ಲಿ ಪ್ರಜ್ವಲಿಸಿತು. ಆದರೆ ಯೋಗ್ಯ ಮಾರ್ಗದರ್ಶಕನ ಅಭಾವವಿತ್ತು. ಭಾಗ್ಯವಶಾತ್ ಪೂಜ್ಯ ಮಹಾತ್ಮಾಜೀಯವರ ನಾಯಕತ್ವವು ಭಾರತಕ್ಕೆ ದೊರಕಿ ನವಚೇತನವು ಉದ್ಭವಿಸಿತು.

ನವೀನವಾದ ಅಹಿಂಸಯ-ಸತ್ಯಾಗ್ರಹ ಚಳವಳವು ದೇಶದಲ್ಲಿ ಬೇರೂರಿತು. ರಕ್ತದಾಹದಿಂದ ಪರಿವೇಷ್ಟಿತವಾದ ಪಾಶ್ಚಾತ್ಯ ಜನಾಂಗವು ಇದನ್ನು ಕಂಡು ಪರಿಹಾಸ್ಯ ಮಾಡಿತು. ಹೆಚ್ಚೇಕೆ? ನಮ್ಮವರೇ ಇದನ್ನು ಅನೇಕ ತರದಲ್ಲಿ ಹಳಿದರು. ಆದರೆ ಕರ್ಮವೀರನ ನಿಸ್ಪೃಹತೆಯ ಕಾರ್ಯಕುಶಲತೆಯು ಸಮಗ್ರ ಭಾರತದ ಕಣ್ಣನ್ನು ತೆರೆಯಿತು. ಹಿಂಸಾವಾದಿಗಳಾಗಿದ್ದ ತರುಣರು ಅಹಿಂಸಾಬದ್ಧರಾದರು. ಸ್ವಾತಂತ್ರ್ಯ ಕದನವು ಅಹಿಂಸಾಬದ್ಧವಾದುದರಿಂದ ಮಹಾತ್ಮಾಜೀಯವರ ಕಾರ್ಯಕುಶಲತೆಗಳು ಸುಸೂತ್ರವಾಗಿ ಮುಂದುವರಿಯುತ್ತಾ ಹೋಗುತ್ತಿದೆ ಎಂಬುದನ್ನು ಪ್ರಚಲಿತ ಭಾರತವು ಸರಿಯಾಗಿ ಮುಂದಟ್ಟು ಮಾಡಿಕೊಂಡದೆ.

ಪ್ರಚಲಿತ ಭಾರತದಲ್ಲಿ ಇನ್ನೂ, ಇನ್ನೂ ವಿಚಾರತರಂಗಗಳು ಏಳಬೇಕು. ಅದಕ್ಕೆ ಬೇಕಾದ ಸಲಕರಣೆಗಳನ್ನು ಆಧುನಿಕ ರೀತಿಗೊಪ್ಪುವ ವಿಚಾರಗಳಿಂದ ಕೂಡಿದ ಪತ್ರಿಕೆಗಳು ಒದಗಿಸಿಕೊಡಬೇಕು. ದೇಶೀಯ ಪತ್ರಿಕೆಗಳೇ ದೇಶದಲ್ಲಿ ನವಚೈತನ್ಯವನ್ನು ಒದಗಿಸಿಕೊಟ್ಟಿವೆ, ಕೊಡುತ್ತಿವೆ ಹಾಗೂ ಇನ್ನೂ ಕೊಡಲಿವೆ. ಇಷ್ಟೆಲ್ಲಾ ಪರಿವರ್ತನಗಳಿಗೆ ಕಾರಣವಾದ ನವಜಾಗ್ರತಿಗೆ ಪೂಜ್ಯ ಗಾಂಧೀಜೀಯವರೇ ಕಾರಣರು. ಅಹಿಂಸಾ ತತ್ವಬೋಧನೆಯಿಂದ ಮೇಧಾಶಕ್ತಿ ಬೆಳೆಯಿತು. ಆತ್ಮಶಕ್ತಿಯ ತೇಜಸ್ಸು ಪ್ರಕಾಶಮಾನವಾಯಿತು. ರಾಷ್ಟ್ರಪತಿ ತ್ಯಾಗವೀರ ಪಂಡಿತ ನೆಹರೂರವರಿಂದ ಅಖಿಲಭಾರತವು ಸಮತಾವಾದದ ತಿರುಳನ್ನು ಕಂಡುಕೊಂಡಿತು. ಕಾರ್ಯಸೂತ್ರವನ್ನು ಮಾಡಿ ತೋರಿಸುವ ಪಾಠ ಕಲಿಸಿತು. ಇನ್ನೂ ಪರಿವರ್ತನದ ನವೀನ ವಿಚಾರಗಳನ್ನು ಭಾರತಕ್ಕೆ ಬೋಧಿಸ ಪ್ರಭಾವೀ ರಾಷ್ಟ್ರಪತಿ ಬಾಬು ಸುಭಾಷರ ವಿಚಾರಪೂರ್ಣತೆಯನ್ನು ಹೊಂದಿರುವ ಸಂದೇಶಗಳು ಕಾರ್ಯರೂಪಕ್ಕೆ ಬರಲಿವೆ. ಆಗ ಹೊಸ ವಿಚಾರ ಹಾಗೂ ಹೊಸ ಪರಿವರ್ತನಹೊಂದಿದ ಕಾರ್ಯರೂಪವು ಬಳಕೆಗೆ ಬಂದು ಬಂಧನದಿಂದ ಕಟ್ಟಲ್ಪಟ್ಟ ಭಾರತದ ಬಿಡುಗಡೆಯಾಗಬೇಕು. ಆಗಲೇ ವಿಶ್ವಶಾಂತಿ, ವಿಶ್ವಬಾಂಧವ್ಯ ತಲೆಯೆತ್ತುವದು.

— ಯು. ಬಿ. ನರ್ಸಪ್ಪ.

ನೋಟೀಸು.

ದ. ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ.

R. E. [illegible]/1937.

ಕೆ. ರಮೇಶರಾವ್—ಅರ್ಜಿದಾರ.

ಮತ್ತು

I. ಚಿಕ್ಕಪ್ಪ ಭಂಡಾರಿ. ಕೋಟ್ಯ ಣ್ಣಾಳ್ವರ ಅಳಿಯ. ಕಾಸರಗೋಡು ತಾಲೂಕು ಕುಂಬಳೆ ಕಸಬೆಯ ಕ್ಯೊಪಾಡಿ ಪಂಚಾಯತ ಕೋರ್ಟು ಬಳಿಯಲ್ಲಿರುವವರು— . . . . ರಿಸ್ಪೊಂಡೆಂಟ್.

ಮೇಲೆ ಹೆಸರು ಕಾಣಿಸಿದ ರೆಸ್ಪೊಂಡೆಂಟರ ಬಾಬ್ತು ಸ್ವಿರಾಸ್ತಿ ವಿಲಿಂ ಬಗ್ಗೆ ಅರ್ಜಿದಾರರು ದಾಖಲುಮಾಡಿದ ಸದರಿ ಅಮಲ್‌ಜ್ಯಾರಿ ಅರ್ಜಿಯು ಇದೇ ತಾರೀಕು 15-2-'38ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆದ್ದರಿಂದ ಸದರಿ ತಾರೀಕಿನಲ್ಲು ರೆಸ್ಪೊಂಡೆಂಟ್ ಕೋರ್ಟುಮುಂದೆ ಹಾಜರಾಗಿ ತನ್ನ ಆಕ್ಷೇಪಗಳನ್ನು ದಾಖಲು ಮಾಡತಕ್ಕದ್ದೆಂತಲೂ, ತಪ್ಪಿದರೆ ರೆಸ್ಪೊಂಡೆಂಟರ ಗೈರಹಾಜರಿಯಲ್ಲಿ ಅರ್ಜಿಯನ್ನು ತೀರ್ಮಾನಿಸಲಾದೀತು ಎಂತ ಸಹಾ ಈ ಮೂಲಕ ತಿಳಿಸೋಣಾಗಿಯದೆ.

(By Order of Court)

Mangalore, 1—2—'38. **K. B. Shanker Rao,** Vakil for Petitioner

ವಿನೋದ ಸಂಸಾರ

(ಲೇಖಕ:—"ಆನಂದ", ಬಾಲವನ, ಮಂಜೇಶ್ವರ.)

ಅಕ್ಕಾ, ಕಾರ್ಕಳ. ೩-೧-೧೯೩೮.

ನೀನು ಮೊನ್ನೆ ಹೊರಟುಹೋದ ನಂತರ ಇಲ್ಲಿ ಒಂದು ವಿಶೇಷ ಹಾಸ್ಯದ ಸಂಗತಿಯು ನಡೆಯಿತು. ತಂಗಿಯಾದ ನಳಿನಿಯು ಬಸುರಿಯಷ್ಟೆ? ಅವಳಿಗಾಗಿ ಮೊನ್ನೆ ನಮ್ಮಲ್ಲಿ ಶೇವಿಗೆ (ಸೂಕಡ್ಡಿ) ಯನ್ನು ಮಾಡಿದ್ದರು. ಆ ದಿವಸ ಅಕ್ಕಿಯನ್ನು ಅರೆಯಲು ಬಂದ ರಾದಮ್ಮನು ಮರುದಿನ ನಮ್ಮಲ್ಲಿ ಹೋಳಿಗೆಮಾಡಿದ ಸಂಗತಿಯನ್ನು ನೆರೆಕೆರೆಯವರಲ್ಲಿ ಹೇಳಿದಳು. ಅದರ ರುಚಿಯನ್ನು ಬಹು ವಿಸ್ತಾರವಾಗಿ ಹೇಳಿದಳು. ಆಗ, ಹೌದು ನಮ್ಮಲ್ಲಿ ಆ ಹೋಳಿಗೆಯನ್ನು ಮಾಡದೆ ಏಳೆಂಟು ತಿಂಗಳುಗಳಾದವು' ಎಂದಳು ಸಿನ್ನ ನಾದಿನಿಯಾದ ರಮೆ. 'ನಮ್ಮಲ್ಲಿ ನನ್ನ ಸೋದರಳಿಯನ ಹೆಂಡತಿ ಗೌರಿಯು ಬಂದಾಗ ಮಾಡಿದ ಮೇಲೆ ಇಷ್ಟರವರೆಗೆ ಆ ಹೋಳಿಗೆಯನ್ನು ಮಾಡಲಿಲ್ಲ. ಸಾಧಾರಣ ಎರಡು ವರ್ಷಗಳಾಗಬಹುದು' ಎಂದಳು ಡಾಕ್ಟರನ ಪತ್ನಿ ಶೀಲೆ. ಹೀಗೆ ಮಾತನಾಡಿ ಯಾರಾದರೊಬ್ಬರ ಮನೆಯಲ್ಲಿ ಅದನ್ನು ಒಟ್ಟಿಗೆ ಸೇರಿ ಮಾಡಿದರೆ ಕೆಲಸವು ಸುಲಭವಾಗುವದೆಂದು ನಿಶ್ಚಯವಾಯಿತು. ಆ ಗುಂಪಿನಲ್ಲಿ ಪೂಜೆ ಭಟ್ಟರ ಹೆಂಡತಿ ರುಕ್ಮಿಣ್ಯಮ್ಮ, ಪುರೋಹಿತ ಭಟ್ರ ಮಗಳು ನಾರಾಯಣಿ, ಗಂಡನಿಂದ ತ್ಯಜಿಸಲ್ಪಟ್ಟು ಮಗನೊಂದಿಗೆ ಕಾಲವನ್ನು ಕಳೆಯುವ ದುಗ್ಗಮ್ಮ ಮತ್ತು ಹೋಟೆಲಿನ ಹಿಟ್ಟುಗಳನ್ನು ಅರೆಯುವ ತಿಮ್ಮಣಿ ಅಮ್ಮ ಮುಂತಾದವರೂ ಸೇರಿದರು. ಗುರುವಾರ ದಿವಸ ಹೋಳಿಗೆ ತಯಾರಿಸುವುದೆಂದೂ, ಅಕ್ಕಿಯನ್ನು ಅರೆಯಲು ರಾದಮ್ಮನೇ ಬರಬೇಕೆಂದೂ ಒಪ್ಪಂದವಾಯಿತು. ಬುಧವಾರ ದಿವಸ ಬೆಳಿಗ್ಗೆ ಅಕ್ಕಿಯನ್ನು ನೆನೆಯ ಹಾಕಬೇಕೆಂದಳು ರಾದಮ್ಮ. 'ಆದರೆ ಅದನ್ನು ಮಾಡುವ ಯಂತ್ರವನ್ನು ಎಲ್ಲಿಂದ ತರಲಿ" ಎಂದಳು ರುಕ್ಮಿಣ್ಯಮ್ಮ. 'ಅದೇನೂ ದೊಡ್ಡದಲ್ಲ. ಮೊನ್ನೆ ತಾನೇ ಬಂದ ರಿಜಿಸ್ಟ್ರಾರರ ಹೆಂಡತಿಯ ಹತ್ತಿರ ಒಳ್ಳೇದಾದ ಯಂತ್ರವಿದೆ. ನನ್ನನ್ನು ಕಂಡರೆ ಅವಳಿಗೆ ಬಹಳ ಪ್ರೀತಿ. ನಾನು ಖಂಡಿತವಾಗಿಯೂ ತರುತ್ತೇನೆ' ಎಂದು ನಾರಾಯಣಿಯು ಭರವಸೆಯಿತ್ತಳು. ಊರಿನ ಜನರಿಂದ 'ಹೆಂಗುಸೆಂದು' ಕರೆಯಲ್ಪಡುವ ಹಾಲುಮಾರುವ ರಂಗಪ್ಪನ ಹೆಸರು ಗೊತ್ತಿದೆಯಷ್ಟೆ? ಇವರ ಸಭೆಯ ವರ್ತಮಾನವನ್ನು ಅವನೂ ತಿಳಿದುಕೊಂಡನು. ಏನುಮಾಡಬೇಕೆಂದು ಯೋಚನೆ ಹೊಳೆಯಿತೋ ಅವನಿಗೆ ನಾನು ಕಾಣೆ. ಮುಗುಳುನಗೆಯಿಂದ ಕೂಡಿದ ಮುಖದೊಡನೆ ಮನೆಗೆ ತೆರಳಿದನು.

* * *

ಬುಧವಾರ ದಿವಸ ಎಲ್ಲರೂ ಅಕ್ಕಿಯನ್ನು ನೀರಿನಲ್ಲಿ ನೆನೆಯಹಾಕಿದ್ದು ಅವನಿಗೆ ಗೊತ್ತಾಯಿತು. ಸಾಯಂಕಾಲ ದೀಪ ಹಚ್ಚುವ ಸಮಯ ಪೇಟೆಗೆ ಹೋಗಿ ದನಕರುಗಳಿಗೆ ಹಾಕಲು ಹಿಂಡಿ, ಮನೆಯಲ್ಲಿ ಅಡಿಗೆಗೆ ಬೇಕಾದ ಸಾಮಾನನ್ನೂ ತರುವಾಗ ರಿಜಿಸ್ಟ್ರಾರರ ಮನೆಯೊಳಗೆ ಹೊಕ್ಕನು. "ಅಮ್ಮಾ ನಿಮ್ಮಲ್ಲಿ ಒಳ್ಳೇದಾದ ಸೂಕಡ್ಡಿಮಾಡುವ ಯಂತ್ರವಿದೆಯಂತೆ. ಅದನ್ನು ಎರಡು ದಿವಸದ ಮಟ್ಟಿಗೆ ನನಗೆ ಕೊಟ್ಟರೆ ಬಹಳ ಉಪಕಾರವಿತ್ತು. ಮಗಳು ಸುನಂದಿಗೆ ಸೂಕಡ್ಡಿ ತಿನ್ನುವ ಆಸೆಯಾಗಿದೆ. ಈಗ ಮೂರು ತಿಂಗಳ ಬಸಿರಿ" ಎಂದನು. ಇವನ ಉಪಾಯವು ಅವಳಿಗೇನು ಗೊತ್ತು? ಅವಳು ಅದನ್ನು ಕೂಡಲೇ ಕೊಟ್ಟುಬಿಟ್ಟಳು. ಸಾಮಾನಿನ ಕುಕ್ಕೆಯಲ್ಲಿ ಅದನ್ನು ಇಟ್ಟನು. ಮೇಲೆ ತೆಳ್ಳಗಿನ ಗೋಣಿ ತುಂಡೊಂದನ್ನೂ ಹಾಸಿದನು. ಎಂದಿನಂತೆ ತನ್ನ ಮನೆಗೆ ಹೋಗುತ್ತಿರುವಾಗ ಮಾರ್ಗದಲ್ಲಿ ಬರುತ್ತಿದ್ದ ನಾರಾಯಣಿಯು 'ಕುಕ್ಕೆಯಲ್ಲೇನು ರಂಗಪ್ಪ? ಎಮ್ಮೆಕರುವೇ?' ಎನ್ನಲು 'ದನಗಳಿಗೆ ಹಾಕಲು ಹಿಂಡಿಯು ಮುಗಿದಿದ್ದ ಕಾರಣ ಹಿಂಡಿ ಮತ್ತು ಅಡಿಗೆಗೆ ಬೇಕಾದ ಸಾಮುಗ್ರಿಯನ್ನೂ ತಂದೆ. ಅದರಿಂದಲೇ ಜೀವನವಾದ ಮೇಲೆ ಯಾವಾಗ ತಂದರೇನವ್ವಾ." ಎನ್ನುತ್ತಾ ಮನಸ್ಸಿನಲ್ಲಿ "ಇವರೆಲ್ಲರಿಗೆ ಈ ಸಮಯದಲ್ಲೇಕೆ ಈ ಹೋಳಿಗೆಯ ಆಸೆಯಾಯಿತು? ಬೇಕಾದರೆ ನಾರಾಯಣಿಯು ಹಳೇ ಯಂತ್ರದಲ್ಲೇ ಮಾಡಿ ತಿನ್ನಲಿ" ಎನ್ನುತ್ತಾ ಮನೆಯನ್ನು ಹೊಕ್ಕನು.

* *

ಇಂದು ಗುರುವಾರ. ನಾರಾಯಣಿಯೂ ಇತರರೂ ತಮ್ಮ ನಿತ್ಯದ ಕೆಲಸಗಳನ್ನು ಬೇಗತೀರಿಸಿದರು. ರಾದಮ್ಮನು, ಅಕ್ಕಿ ಅರೆಯಬೇಕಾದರೆ ರಿಜಿಸ್ಟ್ರಾರರಲ್ಲಿಂದ ಸೂಕಡ್ಡಿಯ ಯಂತ್ರವನ್ನು ತರಬೇಕೆಂದು ಹೇಳಿದಳು. ಅವಳೂ ಒಪ್ಪಿ ಅಲ್ಲಿಗೆ ಹೋದಳು. ಅಲ್ಲಿ ಹೋಗಿ ವಿಚಾರಿಸಿದಲ್ಲಿ ನಿನ್ನೆಯೇ ರಂಗಪ್ಪನು ಅದನ್ನು ಕೊಂಡುಹೋಗಿದ್ದನೆಂದು ವರ್ತಮಾನವು ತಿಳಿಯಿತು. "ಹಾಗಾದರೆ ಅವನಲ್ಲಿಯೇ ಹೋಗುತ್ತೇನೆ" ಎಂದು ರಾದಮ್ಮನು ರಂಗಪ್ಪನಲ್ಲಿಗೆ ಹೋದಳು. "ಈ ಮಾರಿಯು ಯಾವಾಗ ಯಾವ ಕೆಲಸಗಳನ್ನು ಮಾಡುವುದೆಂದು ಹೇಳಲು ಎಲ್ಲರಿಗೂ ಅಸಾಧ್ಯವಾಗಿದೆ. ಇವನಿಗೂ ಈ ಹೊತ್ತೇ ಇದರ ಆಸೆಯಾಗಬೇಕೆ?" ಎಂದು ನೆನಸುತ್ತಾ ಅವನ ಮನೆಯ ಜಗಲಿಯನ್ನು ಹತ್ತುವಾಗ ಕತ್ತನ್ನು ಮೇಲಕ್ಕೆತ್ತಿ ಬಾಗಿಲನ್ನು ನೋಡಿದರೆ ಬೀಗವನ್ನು ಹಾಕಿದ್ದಾನೆ. ಅಲ್ಲಾರೂ ಇಲ್ಲ. ಎಲ್ಲಾದರೂ ಹಾಲು ಕೊಂಡುಹೋಗಿರಬಹುದೆಂದು ಕಾದುಕುಳಿತಳು. ಸುಮಾರು ಅರ್ಧ ತಾಸಿನೊಳಗೆ ಆಳೊಬ್ಬನು ಬಂದು 'ಅವರು ಈ ಹೊತ್ತು ಬೊಳ್ಳದಿಂದ ಎಮ್ಮೆಯನ್ನು ತರಲು ಹೋಗಿರುವರು. ಸಾಯಂಕಾಲ ಬರಬಹುದು' ಎಂದನು. ರಾದಮ್ಮನಿಗೆ ಆಶ್ಚರ್ಯವಾಯಿತು. ಮನೆಗೆ ಬಂದು, 'ನಾಳೆಯೇ ಸೂಕಡ್ಡಿಮಾಡುವ ದುಗ್ಗಮ್ಮ. ಈ ಹೊತ್ತೇನು ನಾಳೇನು ಆಗದೆ?' ಎಂದು ನಡೆದ ಸಂಗತಿಯನ್ನು ತಿಳಿಸಿದಳು ಮನಸ್ಸಿನಲ್ಲೇ ಎಲ್ಲರೂ ರಂಗಪ್ಪನನ್ನು ಬೈದರು. ಅಂದಿನ ದಿನವು ರಂಗಪ್ಪನ ವಿಷಯವಾಗಿಯೇ ಮಾತಾಡುತ್ತ ಕಳೆದುಹೋಯಿತು.

ಮರುದಿನವೂ ರಂಗಪ್ಪನೂ ಬೊಳ್ಳಕ್ಕೆ ಹೋಗಿರುವನೆಂದು ಬೆಳಿಗ್ಗೆಯೇ ವಾರ್ತೆಯು ಬಂದಿತು. ಇನ್ನು ಆ ಯಂತ್ರಕ್ಕೆ ಕಾದುಕುಳಿತರೆ ಸೂಕಡ್ಡಿ ಆಗುವಹಾಗಿಲ್ಲವೆಂದು ನಾರಾಯಣಿಯ ಮನೆಯಲ್ಲಿರುವ ಹಳೇಯ ಯಂತ್ರದಿಂದಲೇ ಸೂಕಡ್ಡಿಯನ್ನು ಮಾಡಿದುದೂ ಆಯಿತು. ಸೂಕಡ್ಡಿಯ ಸಮಾರಂಭವನ್ನು ಮಹಿಸಿಕೊಂಡ ರಾದಮ್ಮನು ಆ ದಿನ ಬಲ್ಪಮಾನ ಬರೇ ಐದು ಗಂಟೆ. 'ನಾನಾ ಲಂ ಹೊತ್ತಾಗುತ್ತದೆಯೋ' ಎನ್ನುತ್ತಾ ಅಂದಿನ ಕೂಟವನ್ನು ಮುಗಿಸಿದಳು.

ಗುರುವಾರ ದಿವಸ ಮಧ್ಯಾಹ್ನ ಸರಿಯಾಗಿ ಹನ್ನೆರಡು ಗಂಟೆಗೆ ರಂಗಪ್ಪನು ಹೋಳಿಗೆಯನ್ನು ತಂದು ನನ್ನ ಕೈಯಲ್ಲೇ ಕೊಟ್ಟನು. ನಿಜವಾಗಿಯೂ ಅವನು ಮಾಡಿದ ಹೋಳಿಗೆಯು ಅತ್ಯಂತ ರುಚಿಕರವಾಗಿತ್ತು. ಅವನೊಡನೆ ನಿನ್ನ ಬಳ್ಳಿಗೆ ಹೋಗಿದ್ದೆಯೆಂದು ಕೇಳಲು "ಅಕ್ಕ ನವ್ರು ರಾದಮ್ಮನಿಗೆ ಹೋಳಿಗೆಯ ಆಸೆ! ನಿಮ್ಮಲ್ಲಿ ಎರಡು ದಿನ ತಿಂದರೂ ಸಾಕಾಗಲಿಲ್ಲವೇ? ಎರಡು ದಿವಸ ನೆನೆಯದಿದ ಅಕ್ಕಿಯ ಹೋಳಿಗೆಯನ್ನು ತಿಂದು ಅಜೀರ್ಣವಾಗಲಿ" ಎಂದನು. ನಗೆಗಿನ್ನ ಹಿಡಿಸಲಾರದ ನಗುವೂ ಅದರೊಡನೆ ಊರಿನವರ ಬಾಯಿಗೆ ಅಡ್ಡ ಬಂದ ಈ ರಂಗಪ್ಪನ ಕರ್ಮವನ್ನು ಕೇಳಿಯೂ ವ್ಯಸನವಾಯಿತು.

ದಿನಾಲೂ ಹೋಗುವಂತೆ ಅಂದು ದೇವಸ್ಥಾನಕ್ಕೆ ಹೋಗಿದ್ದ ನಾವು ಪೂಜೆ ಭಟ್ಟರವರಲ್ಲಿ ಹೋಗಲು ಮುಂಚಿನ ದಿನ ಮಾಡಿದ ಹೋಳಿಗೆಯು ಬಂದೇ ಬಿಟ್ಟಿತು. ಮುಟ್ಟಿದರೆ ನೀರಿನಲ್ಲಿ ನೆನೆಯಿಸಿ ತೆಗೆದಂತೆ ಇತ್ತು. ಕೈಯಿಂದ ಜಾರುತ್ತಿತ್ತು. ಅದೇನೆಂದು ಕೇಳಲು "ಏನಿಲ್ಲಾ, ಆ ರಂಗಪ್ಪನು ಈ ಹೋಳಿಗೆಯನ್ನು ಮಾಡಿದ ಕೂಡಲೇ ಮುಚ್ಚಿಟ್ಟರೆ ನಾಲ್ಕೈದು ದಿವಸ ಕೆಡದಂತೆ ಉಳಿಯುವದೆಂದನು. ಆವಿ ನೀರು ಬಿದ್ದು ಹಾಗಾಗಿರಬೇಕು. ಅದನ್ನು ತಿನ್ನಬೇಡಿರಿ. ಇನ್ನಾದರೂ ಆ ಮಾರಿಯ ಮಾತನ್ನು ನಂಬಬಾರದು" ಎಂದು ಹೇಳುತ್ತಾ ಬೇರೆ ತರದ ತಿಂಡಿಗಳನ್ನು ತಂದು ನಮ್ಮ ಮುಂದಿರಿಸಿದಳು.

ತುಂಟ ರಮೇಶನು ಈ ಸಂಗತಿಯನ್ನು ಅಜ್ಜನೊಡನೆ ಹೇಳಲು "ಅಪ್ಪಾ ಲೋ ಅವನೊಡನೆ ಮಾತನಾಡಬಾರದು. ಆ ಹೋಳಿಗೆಯನ್ನು ಯಾರಾದರೂ ಮುಟ್ಟುತ್ತಾರೆಯೋ? ಅವ ನೀರು ಬೇಳುವುದೆಂದು ಗೊತ್ತಾಗುವುದಿಲ್ಲವೇ? ಅಲ್ಲ ದುಡ್ಡಿನಿಂದಾಗಿ ಇಷ್ಟೇ ದಿವಸ ಕೂತುಕೊಂಡು ಊರಿನ ಜನರ ಸುದ್ದಿ ಅವಗುಣಗಳನ್ನು ಕೇಳುವುದರಲ್ಲೇ ದಿನ" ಎಂದನು.

ಎಲ್ಲರೂ ಕ್ಷೇಮ. ರಮೇಶನು ನಿನ್ನ 'ಸುಧೆ'ಯ ಭಾವಚಿತ್ರವನ್ನು ಕಳುಹಿಸಬೇಕೆಂದು ಹೇಳಿರುತ್ತಾನೆ. ವಿಶೇಷವೇನೂ ಇಲ್ಲ. ಇದನ್ನು ಭಾವನಿಗೆ ಹೇಳು.

ಇಂತಿ,

ನಿನ್ನ ಪ್ರತ್ಯುತ್ತರವನ್ನು ಕಾಯುತ್ತಲಿರುವ

ನಿನ್ನ ತಂಗಿಯಾದ

"ಸುಚರಿತಾ".

ಉಡುಪಿಯ ರಥಗಳು




ಉಡುಪಿ ಪರ್ಯಾಯೋತ್ಸವದ ಸಮಯದಲ್ಲಿ ಎಳೆಯಲ್ಪಡುವ ಶ್ರೀಕೃಷ್ಣ ಮಠದ ರಥಗಳೆರಡು.

(ಈ ಪಡಿಯಚ್ಚು "ನವಯುಗ"ದ ಕೃಪೆಯಿಂದ)

ಚಹಾ (TEA)

ಚಹಾ ಸೊಪ್ಪು ಚೀನಾದೇಶದ ಉತ್ಪತ್ತಿಯಾಗಿದ್ದು ಬಹು ಪುರಾತನ ದಿಂದಲೇ ಚೀನಿಯರು ಪ್ರೀತಿಸುವ ಪಾನೀಯದ ಒಡವೆಯಾಗಿತ್ತು. ಇಂದಿಗೆ ಸುಮಾರು ನೂರು ವರುಷಗಳ ಹಿಂದೆ ಲಂಡನಿನ ಪಾರ್ಲಿಮೆಂಟ್ ಸಭೆಯು ಅಪ್ಪರ ತನಕ ಇಂಡಿಯದ ಈಸ್ಟ್ ಇಂಡಿಯ ಕಂಪೆನಿಯವರಿಗೆ ಕೊಟ್ಟಿದ್ದ ಚೀನದ ವ್ಯಾಪಾರದ ಸ್ವಾತಂತ್ರತೆಯ ಗುತ್ತೆಯನ್ನು ರದ್ದುಮಾಡಿತು. ಆ ತನಕ ಚೀನಾದೇಶದ ಉತ್ಪತ್ತಿಗಳನ್ನು ವಿಲಾಯತಿಗೆ ರವಾನಿಸುವ ಸಂಪೂರ್ಣ ಅಧಿಕಾರವು ಈಸ್ಟ್ ಇಂಡಿಯಾ ಕಂಪೆನಿಯವರಿಗೇನೇ ಇತ್ತು. ಅವರಿಂದ ಬರಹ ಮೂಲಕ ಪಡಕೊಂಡ ಲೈಸನ್ಸಿನ ಹೊರತು, ಇತರ ಯಾವ ವ್ಯಾಪಾರಿಯಾದರೂ ಚೀನಾದೇಶದ ಉತ್ಪತ್ತಿಗಳನ್ನು ವಿಲಾಯತಿಗೆ ಕಳುಹಿಸಕೂಡದೆಂಬ ಕಡ್ಡಾಯವಾದ ಆಜ್ಞೆಯು ಇತ್ತು—ವಿಲಾಯತಿಯ ವಿವಿಧ ಪ್ರಾಂತ್ಯಗಳ ವರ್ತಕರು ಈಸ್ಟ್ ಇಂಡಿಯಾ ಕಂಪೆನಿಯವರಿ[illegible] ಗಿದ್ದ ಈ ಗುತ್ತೆಯನ್ನು ರದ್ದುಮಾಡಿಸಿಕೊಳ್ಳಬೇಕೆಂದು ಜಗೀರಥ ಪ್ರಯತ್ನ ಮಾಡುತ್ತಿದ್ದರು. ವ್ಯಾಪಾರದ [illegible] ಇಲ್ಲಿಗೆ [illegible] ಸಮ್ಮ ಸರಕಾರದ ಪೂರ್ವಜರು ಈ ಲಾಭಕರವಾದ ವ್ಯಾಪ್ತಿಯು ಇತರರ ಕೈಸೇರದಂತೆ ಇಂಗ್ಲಾಂಡಿನ ತಮ್ಮ ಬೋರ್ಡ್ ಒಫ್ ಡೈರಕ್ಟರ ಮೂಲಕ ಸಾಹಸ ಪಡುತ್ತಿದ್ದರು. ಬಹುಕಾಲ ಇಂಗ್ಲಾಂಡಿನ ಪ್ರಧಾನಮಂತ್ರಿಯಾಗಿದ್ದ ವಿಲ್ಲಿಯಂ ಎವಾರ್ಟಗ್ಲಾಡ್‌ಸ್ಟನ್ ಪ್ರಭುಗಳ ತಂದೆ [illegible] ಹಲವು ಮಂದಿ ಪ್ರಸಿದ್ಧ ಲಂಡನಿನ ವರ್ತಕರು ಈಸ್ಟ್ ಇಂಡಿಯಾ ಕಂಪೆನಿಯವರು ಅನುಭವಿಸುತ್ತಿದ್ದ ಈ ಗುತ್ತೆಯನ್ನು ರದ್ದುಪಡಿಸಬೇಕಾಗಿ ಪಾರ್ಲಿಮೆಂಟ್ ಸಭೆಗೆ [illegible]. ಈ ಕುರಿತು ವಿಶೇಷ [illegible] ೧೮೩೩ನೇ ಇಸವಿಯಲ್ಲಿ ಪಾರ್ಲಿಮೆಂಟ್ ಸಭೆಯು, ವರ್ತಕರ ಅಕ್ಷೇಪಣೆಗಳನ್ನು ಮನ್ನಿಸಿ ಆ ಗುತ್ತೆಯನ್ನು ಮುಕ್ತಾಯಪಡಿಸಿದರು. ವಿಲಾಯತಿಯ ವರ್ತಕರಲ್ಲಿ ಈ ರೀತಿಯ ಚಳವಳವು ನಡೆಯುತ್ತಿದ್ದ ವೇಳೆ ಹಿಂದುಸ್ಥಾನದಲ್ಲಿ ಚಹಾಸೊಪ್ಪಿನ ಕುರಿತು ವಿಶೇಷ ಉತ್ತೇಜನವು ತಲೆದೋರುತ್ತಿತ್ತು. ಈ ಗುತ್ತೆಯು ರದ್ದಾಗುವ ಸ್ವಲ್ಪ ಮೊದಲು ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಸೇರಿದ ಹಡಗುಪಡೆಯ ಒಬ್ಬ ಕೆಪ್ತನನು ಚೀನಾದೇಶದ ಕೆಂಟನ್ ನಗರದ ಸ್ವಲ್ಪ ಚಹಾ ಗಿಡದ ಬೀಜಗಳನ್ನು ಹಿಂದುಸ್ಥಾನಕ್ಕೆ ತಂದು ಆಗ ಕಂಪೆನಿ ಸರಕಾರದ ಗವರ್ನರ್ ಜನರಲರಾಗಿದ್ದ ವಾರ್‌ನ ಹೇಸ್ಟಿಂಗ್ಸ್ ಪ್ರಭುಗಳಿಗೆ ಕೈವರ್ತಿಸಿದನು. ಅವರು ಬುಡಾನಿನಲ್ಲಿದ್ದ ತನ್ನ ಸ್ನೇಹಿತನಾದ ಜೋರ್ಜ್‌ಬೋಗ್ಲ್ ಎಂಬುವವರಿಗೆ ಸ್ವಲ್ಪ ಬೀಜವನ್ನು ಕಳುಹಿಸಿಕೊಟ್ಟರು. ಮತ್ತು ಉಳಿದವುಗಳನ್ನು (Bengal Infantry) ಬಂಗಾಳದ ಇನ್‌ಫೇಂಟ್ರಿ ಎಂಬುವ ಅಶ್ವದಳಕ್ಕೆ ಸೇರಿದ ಲೆಫ್ಟನೆಂಟ್ ಕರ್ನಲ್ ರೋಬರ್ಟ್ಸ್‌ಕಿಡ್ ಎಂಬುವವರು ಕಲ್ಕತ್ತದ ಸಮೀಪ ಶಿವಪುರ ಎಂಬಲ್ಲಿದ್ದ ತನ್ನ ಖಾಸಗಿ ತೋಟದಲ್ಲಿ ಬಿತ್ತಿ ಬೆಳೆಯಿಸಿದರು. ಆ ತೋಟದಲ್ಲಿ ಆ ಸಸಿಗಳು ಬಹುಪುಷ್ಟಿಯಾಗಿ ಬೆಳೆಯ ಹತ್ತಿದವು.

೧೮೨೩ನೇ ಇಸವಿಯಲ್ಲಿ ಮೇಜರ್ ರೋಬರ್ಟ್ಸ್ ಬ್ರೂಸ್ ಎಂಬಾತನೊಬ್ಬನು ವ್ಯಾಪಾರ ಸಂಬಂಧವಾದ ಒಂದು ಕಮಿಶನಿನೊಡನೆ ಅಸ್ಸಾಮ ದೇಶಕ್ಕೆ ಹೋಗಿದ್ದನು. ಅಲ್ಲಿ ಶಿವಸಾಗರದಿಂದ ಬೆಣಿಸಿಕೊಳ್ಳುವ ಪ್ರದೇಶದ ದಿಣ್ಣೆಗಳಲ್ಲಿ ಚಹಾ ಗಿಡಗಳು ತಾವಾಗಿಯೇ ಯಥೇಷ್ಟವಾಗಿ ಬೆಳೆಯುತಿದ್ದುದನ್ನು ಕಂಡು ಅವುಗಳ ಬೀಜಗಳನ್ನೂ ಕೆಲವು ಸಸಿಗಳನ್ನೂ ಕಲ್ಕತ್ತೆಗೆ ಕಳುಹಿಸಿ ಕೊಡುವಂತೆ ಅಲ್ಲಿಯ [illegible] (Singpo) ಅಧಿಕಾರಿ[illegible] ದನು. ೧೮೨೬[illegible] ಮೊದಲನೇ ಯುದ್ಧದ [illegible] [illegible] ಅಧಿಕಾರ [illegible] ಹಿಂದುಸ್ಥಾನದೊಳಗೆ ಚಹಾ ಸೊಪ್ಪನ್ನು [illegible] ಬೆಳೆಯುವ [illegible] [illegible] ಒಂದು [illegible]. ಚಹಾ ಸೊಪ್ಪಿನ ವ್ಯಾಪಾರದ ಕುರಿತು [illegible] ತು. ಮತ್ತು ೧೮೩೮ರಲ್ಲಿ ಹಿಂದುಸ್ಥಾನದಲ್ಲಿಯೇ ಬೆಳೆದ [illegible] ಚಹಾ ಸೊಪ್ಪು [illegible] ಪೆಟ್ಟಿಗೆಗಳಲ್ಲಿ ತುಂಬಲ್ಪಟ್ಟು ಮೊದಲನೇ ಸಾರಿಗೆ ಹಿಂದುಸ್ಥಾನದಿಂದ ವಿಲಾಯತಿಗೆ ರವಾನಿಸಲ್ಪಟ್ಟಿತು. ಈ ಚಹಾ ಪೌಂಡು ಒಂದಕ್ಕೆ [illegible] ಶಿಲ್ಲಿಂಗಿನಿಂದ ೩೪ ಶಿಲ್ಲಿಂಗಿನ ತನಕದ ಬೆಲೆಗೆ ವಿಕ್ರಯಿಸಲ್ಪಟ್ಟಿತು. ೧೮೭೨ನೇ ಇಸವಿಯೊಳಗೆ ಹಿಂದುಸ್ಥಾನದಲ್ಲಿ ೧೩,೨೨೨ ಎಕ್ರೆ ವಿಸ್ತೀರ್ಣದ ಸ್ಥಳ ಚಹಾ ಸೊಪ್ಪಿನ ಬೆಳವಣಿಗೆಯಲ್ಲಿ ಪ್ರಯೋಗಿಸಲ್ಪಡಲಾಯಿತು. ಅಂದಿನಿಂದ ನಂತರದ ಐವತ್ತು ವರುಷಗಳಲ್ಲಿ ಹಿಂದುಸ್ಥಾನದಲ್ಲಿ ಬೆಳೆದ ೮೬,೦೦೦,೦೦೦ ಪೌಂಡು ಚಹಾ ವಿಲಾಯತಿಯಲ್ಲಿ ಖರ್ಚಾದಂತೆ ತೋರುತ್ತದೆ ಮತ್ತು ಕಳೆದ ಐವತ್ತು ವರ್ಷಗಳಲ್ಲಿ ಹಿಂದುಸ್ಥಾನ ಮತ್ತು ಸಿಲೋನಿನಲ್ಲಿ ಬೆಳೆದ ಚಹಾ ಸೊಪ್ಪು ಸಾವಿರ ಪಾಲಷ್ಟು ಹೆಚ್ಚಿಗೆ ವಿಲಾಯತಿಯ ದೇಶಗಳಿಗೆ ರಫ್ತಾದಂತೆ ತೋರುತ್ತದೆ. ವಿಲಾಯತಿಯವರು ಚಹಾ ಪಾನೀಯವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುವಂತೆ ವಿವಿಧ ಪ್ರಯತ್ನಗಳು ನಡೆಯುತ್ತಿವೆ. ಟೀ ಪ್ರೊಪಗಾಂಡ ಬೋರ್ಡು ಎಂಬುವ ಒಂದು ಸಂಸ್ಥೆಯು ಸರಕಾರದ ಸಹಕಾರದೊಂದಿಗೆ ಈ ಉದ್ದೇಶನಿಂದಲೇ ನಿರ್ಮಿತವಾಗಿದೆ. ವಿಲಾಯತಿಯ ಎಲ್ಲಾ ತರಗತಿಯ ಸ್ತ್ರೀಪುರುಷರೊಳಗೆ ಚಹಾ ಪಾನಿಯದ ರುಚಿಯನ್ನು ಹೆಚ್ಚಿಸುವಂತೆ ಚಹಾ ಪಾನೀಯವನ್ನು ಹಲವು ಕಡೆಗಳಲ್ಲಿ ಧರ್ಮಾರ್ಥವಾಗಿ ಹಂಚುವ ಏರ್ಪಾಡು ಇದೆ.



೧೮೬೫ರಲ್ಲಿ ಆಗಿನ ಪ್ರಧಾನ ಮಂತ್ರಿಗಳಾದ ವಿಲ್ಲಿಯ[illegible]ವರ್ಟ ಗ್ಲಾಡಸ್ಟನ್ ಪ್ರಭುಗ[illegible] ಚಹಾ ಸೊಪ್ಪಿನ ಮೇಲಿದ್ದ[illegible] ಇಳಿಸಿದರು. ಅವ[illegible] ಈಸ್ಟ್ ಇಂಡಿಯಾ [illegible]ಗಿದ್ದ ಗುತ್ತೆಯನ್ನು ರದ್ದು[illegible]

೧೭೮[illegible] ಚಹಾ ಸೊಪ್ಪಿನ ವ್ಯಾಪ[illegible] ಮೂರು ದೊ[illegible] ಕಂಪೆನಿ[illegible] ಲಂಡನಿನಲ್ಲಿ [illegible] ವರ್ತಕರು [illegible] ೧೭೦೬ರಲ್ಲಿ [illegible] Twinning [illegible] ಚಹಾ [illegible]ಸುತ್ತದೆ. [illegible] ಹಿಂದುಸ್ಥಾನದ [illegible] ಚಹಾ ವಿಲಾಯತಿಯವರ ನಾಲಿಗೆಗಳ ರುಚಿಯನ್ನು ಆಕರ್ಷಿಸಿಕೊಂಡಿರುತ್ತದೆ. ಎಲ್ಲಾ ಕಡೆಗಳಲ್ಲಿಯೂ ಹಿಂದುಸ್ಥಾನದ ಎಂದರೆ, ಎಂಪಾಯರ್ (Empire) ಚಹಾ ಬೇಕೆಂದು ಕೇಳುವ ಕುತೂಹಲವು ಇರುತ್ತದೆ. ಹಿಂದುಸ್ಥಾನದಲ್ಲಿ ಉಪಯೋಗವಾಗುವುದಕ್ಕಿಂತಲೂ ಬಹು ಹೆಚ್ಚಾಗಿ ವಿಲಾಯತಿಯಲ್ಲಿ ಚಹಾ ಪ್ರಯೋಗಿಸಲ್ಪಡುತ್ತದೆ. ಮಹಮ್ಮದ್ ಪೈಗಂಬರರಿಗೆ ಕಾಫಿಯು ಪ್ರಯೋಗಕ್ಕೆ ಅಷ್ಟು ಮೆಚ್ಚವಿದ್ದ ಕಾರಣದಿಂದ ಈಗಲೂ ಕೂಡಾ ನಮ್ಮ ಮಹಮ್ಮದೀಯ ಬಂಧುಗಳು ಚಹಾ ಪಾನೀಯವನ್ನೇ ಹೆಚ್ಚಾಗಿ ಪ್ರಯೋಗಿಸುತ್ತಾರೆಂದು ನಾವು ತಿಳಿಯಬಹುದು. ವಿಲಾಯತಿಯಲ್ಲಿ ಚಾಪೆಯಿಂದ ಏಳುತ್ತಲೇ ಹಾಸಿಗೆಯಲ್ಲಿಯೇ ಒಂದು ಕಪ್ (Bed Tea) ಚಹಾ ಕುಡಿಯುವ ಕ್ರಮವು ಸರ್ವಸಾಮಾನ್ಯವಾಗಿ ರೂಢಿಯಲ್ಲಿದೆ. ಮನುಷ್ಯನ ಕಲ್ಪನಾಶಕ್ತಿಯಿಂದ ತಯಾರಿಸಲ್ಪಟ್ಟ ವಿವಿಧ ಪಾನೀಯಗಳಲ್ಲದೆ ಪ್ರಕೃತಿದೇವಿಯು ತಾನಾಗಿಯೇ ಒದಗಿಸಿಕೊಟ್ಟ ಅತೀ ರುಚಿಕರವೂ ಪುಷ್ಟಿಕರವೂ ಆದ ಪಾನೀಯಗಳಿಗೆಲ್ಲಾ ನಮ್ಮ ಪೂರ್ವದೇಶವೇ ಮಾತೃಭೂಮಿಯಾಗಿರುವುದು. ಕಾಫಿ, ಚಹಾ, ಆರೋರೂಟ್, ಸಾಗೂ ಇವುಗಳೆಲ್ಲಾ ಪೂರ್ವ ದೇಶಗಳ ಉತ್ಪತ್ತಿಗಳಾಗಿ ನಮ್ಮ [illegible] ವಿಲಾಯತಿಗೆ ರವಾನಿಸಲ್ಪಟ್ಟು [illegible] ಸೊಂದಿಗೆ ತಿರುಗಿ ಇಲ್ಲಿಗೆ ಕಳು[illegible] [illegible] ಜೇಬುಗಳನ್ನು ಬರಿದುಮಾಡುತ್ತಿರುವುದನ್ನು ನಾವು ದಿನಾಗಲೂ ನೋಡುತ್ತಿದ್ದೇವೆ.

ಶ್ರೀ ಸುಭಾಷ್ ಚಂದ್ರಬೋಸ್

ಹರಿಪುರ ಕೊಂಗ್ರೆಸ್ಸಿನ ಅಧ್ಯಕ್ಷರು.

ಈ ತಿಂಗಳ ಮೂರನೆಯ ವಾರದಲ್ಲಿದ ಗುಜರಾಥದ ಹರಿಪುರದಲ್ಲಿ ನಡೆವ ರಾಷ್ಟ್ರ ಸಭಾಧಿವೇಶನಕ್ಕೆ, ಬಂಗಾಳದ ತರುಣ ಮುಖಂಡ ಶ್ರೀಯುತ ಸುಭಾಷ್‌ಚಂದ್ರಬೋಸರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಸುಭಾಷರು, ಹಲವು ಭಾರತ ಮಕುಟಮಾಣಿಕಗಳೆನಿಸಿಕೊಂಡ ವೀರ ಪುರುಷರಿಗೆ ಜನ್ಮದಾತ್ರಿಯಾದ ಬಂಗಾಳದಲ್ಲಿ ಜನಿಸಿದರು. ಇವರ ಜನನ ಕಾಲದಲ್ಲಿ ಬಂಗಾಳದ ಸ್ಥಿತಿಯು ಪ್ರಕ್ಷುಬ್ಧವಾಗಿಯೇ ಇತ್ತು.

ಸುಭಾಷರಿಗೆ ಉತ್ತಮ ಶಿಕ್ಷಣ ದೊರೆಯಿತು. ಶಾಲೆಯಲ್ಲಿ ಅತಿಚುರುಕಾದ ಹುಡುಗನೆಂದು ಇವರಿಗೆ ಹೆಸರಿತ್ತು. ಮುಂದೆ ಪ್ರೌಢ ಶಿಕ್ಷಣಹೊಂದುತ್ತ, ಮೇಧಾವಿಗಳೆಂದು ಹೆಸರು ಪಡೆದರು.

ಐ. ಸಿ. ಎಸ್. ಪದವಿಯನ್ನು ಪಡೆದಾಗ, ಕೃತ್ರಿಮ ವಾತಾವರಣಕ್ಕೆ ಸಿಳೆದೊಯ್ಯಲ್ಪಡದೆ ಶ್ರೀ ಸುಭಾಷರು, ಮಾತೃಭೂಮಿಯ ಕರೆಗೆ ಕಿವಿಗೊಟ್ಟು, ಚಳಕಿನ ಜಾಳನ್ನು ತೊರೆದರು; ಪದವಿ ಸುಖವನ್ನು ತೃಣೀಕರಿಸಿ, ಸ್ವಾತಂತ್ರ್ಯ ರಂಗಕ್ಕೆ ಬದ್ಧಕಂಕಣರಾಗಿ ಇಳಿದರು. ಅಸಹಕಾರರಂಗವನ್ನು ಪ್ರವೇಶಿಸಿ, ಮೂರು ವರ್ಷಗಳ ಕಾಲ ಸೆರೆಮನೆ ವಾಸವನ್ನನುಭವಿಸಿದರು. ಇದರಿಂದ ಅವರ ಪ್ರಕೃತಿಯು ಮೊದಲನೆ ಬಾರಿಗೆ ಕೆಟ್ಟಿತೆನ್ನಬಹುದು. ಆದರೂ, ಹೋರಾಟದ ಅಭಿಲಾಷೆಯು ತೀವ್ರವಾಗಿಯೇ ಇತ್ತು: ಪುನಃ ಕಾರ್ಯರಂಗಕ್ಕಿಳಿದರು.

೧೯೨೧ರಿಂದ ೧೯೩೭ರವರೆಗೆ ನಡೆದ ಸ್ವಾತಂತ್ರ್ಯದ ಕದನಗಳಲ್ಲೆಲ್ಲ ಶ್ರೀ ಸುಭಾಷರು ಅವಿರಾಮವಾಗಿ ಹೋರಾಡಿ, ಅನೇಕ ಬಾರಿ ಕಾರಾಗ್ರಹವನ್ನು ಸೇರಿದರು. ಅವರ ಜೀವಿತವೇ ಸ್ವಾತಂತ್ರ್ಯ ಸಂಗ್ರಾಮವಾಗಿತ್ತು. ವೀರಪುರುಷನಿಗೆ ಅದರಲ್ಲಿ ದಣುವಾಗಲಿಲ್ಲ; ತನುವು ಸವೆಯುತಿತ್ತು; ಮನವು ದಣಿಯದಿತ್ತು.

೧೯೩೨ರಲ್ಲಿ, ಇವರನ್ನು ನೂರಾರು ವರ್ಷಗಳ ಹಿಂದಣ (೧೮೧೮ನೇ ರೆಗ್ಯುಲೇಷನ್) ಕಾನೂನಿನನ್ವಯ ರಾಜಕೈದಿಯಾಗಿ ಬಂಧಿಸಿದರು. ಸೆರೆಮನೆಯಲ್ಲಿ ಇವರ ಪ್ರಕೃತಿಯು ಆಗ, ಯೋಚನೆಗೀಡಾಗುವಷ್ಟು ಕೆಟ್ಟಿತು.

ದೇಶದಲ್ಲೆಲ್ಲ ಶ್ರೀಯುತರ ಆರೋಗ್ಯದ ವಿಷಯವಾಗಿ ನಾನಾ ಸಂದೇಹಗಳು ಒರಹತ್ತಿದುವು. ವಿಷಯವು ಚಿಕ್ಕದಲ್ಲ; ಅವರಿಗೆ ಕ್ಷಯಬಾಧೆಯು ಪೀಡಿಸುತಿತ್ತು! ವೀರ ಸುಭಾಷರು ಇನ್ನೂ



ಸೆರೆಮನೆಯಲ್ಲಿ ಕೊಳೆಯುವರೇ? ಅವರ ಚಿಕಿತ್ಸೆ ಬಗ್ಗೆ ಯೋಗ್ಯ ವ್ಯವಸ್ಥೆಯಾಗುತ್ತಿದೆಯೇ? ಬಂಧನಾಸವು ಇನ್ನೂ ಮುಂದುವರಿಸಲ್ಪಡುವುದೇ? . . . . . ನಾನಾ ಸಂದೇಹಗಳು: ನಾನಾ ಪ್ರಶ್ನೆಗಳು. ಸರಕಾರವು ಇಷ್ಟನ್ನು ಕೇಳಿಯೂ ಕಿವುಡಾಗದು. ಶ್ರೀಯುತರನ್ನು "ಬಿಡುಗಡೆ" ಮಾಡಿತು: ಚಿಕಿತ್ಸೆಗಾಗಿ ಪರದೇಶಕ್ಕೆ ಕಳುಹಿತು. ಅಲ್ಲಿಂದ ಹಿಂದೂ ದೇಶಕ್ಕೆ ಬರಲು ಪುನಃ ಸರಕಾರದ ಅಪ್ಪಣೆ ಬೇಕು!

1936ನೇ ಇಸವಿಯಲ್ಲಿ ಭಾರತಕ್ಕೆ ಬಂದರು. ಆಗ ಆರೋಗ್ಯವಿನ್ನೂ ಸುಧಾರಿಸಿರಲಿಲ್ಲ. ಇವರ ಚಲನವಲನಗಳ ಮೇಲೆ ದೃಷ್ಟಿಯಿಡಲಾಯಿತು. ಅದೊಂದು ಬಗೆಯ "ರಾಜಸೆರೆ!" ಸುಭಾಷರು ಇಷ್ಟನ್ನೂ ಸಹಿಸಿದರು. ಮತ್ತೊಮ್ಮೆ ವಿಲಾಯತಿಗೆ ಹೋಗಬೇಕಾದ ಆವಶ್ಯಕತೆ ತೋರಿತು. ಚಿಕಿತ್ಸೆಗಾಗಿ ತೆರಳಿದರು.

ಅವರ ಪ್ರಕೃತಿ ಇನ್ನೂ ಸುಧಾರಿಸಿರಲಿಲ್ಲ. ಪೂರ್ಣ ಗುಣಹೊಂದಲು ವರುಷಗಳೇ ಬೇಕಾಗಬಹುದು. ಆದರೆ, ಅವರೇ ಈ ಬಾರಿಯ ಕೊಂಗ್ರೆಸ್ಸಿಗೆ ಅಧ್ಯಕ್ಷರಾಗಬೇಕೆಂದು ಜನತೆಯ ಅಪೇಕ್ಷೆ! ಸರ್ವಾನುಮತದಿಂದ ಅವರನ್ನು ಈ ಪದವಿಗೆ ಆರಿಸಲಾಯಿತು: ಹಿಂದೂದೇಶದ ಅನಭಿಷಿಕ್ತ ಚಕ್ರವರ್ತಿಯಾಗಲು,– ಶ್ರೀಯುತರು, ತನ್ನ ಅಸೌಖ್ಯವನ್ನು ಲಕ್ಷಿಸದೆ, ಒಪ್ಪಿದರು.

೧೯೩೭ನೇ ಮಾರ್ಚಿ ತಿಂಗಳಲ್ಲಿ ಅವರಿಗೆ ಪೂರ್ಣ ಬಿಡುಗಡೆಯಾಯಿತು.

ಸುಭಾಷರು ಇನ್ನೂ ತರುಣರು, ಸಾರ್ವಜನಿಕ ಕಾರ್ಯಗಳಲ್ಲಿ ಇವರು ೧೯೨೧ರಿಂದಿತ್ತ ಪ್ರವೇಶಿಸಿದವರು. ಇಷ್ಟು ಅಲ್ಪಾವಧಿಯಲ್ಲೆ ತಮ್ಮ ಜೀವನವನ್ನು ಮಾತೃಭೂಮಿಯ ಸೇವೆಗಾಗಿ ಸವೆಯಿಸುತ್ತ ಈ ಜೀವನವೆಂಬುದು ಕೇವಲ ದೇಶಸೇವೆಗಾಗಿಯೇ ಇದೆಯೆಂದು ದೃಷ್ಟಾಂತವಾಗಿ ತೋರಿಸಿದವರು.

ಈ ತನಕ ರಾಷ್ಟ್ರಸಭಾಧಿವೇಶನದ ಅಧ್ಯಕ್ಷ ಪದವಿಗೆ ಆರಿಸಿ ಬಂದವರಲ್ಲಿ ಶ್ರೀ ಸುಭಾಷ ಚಂದ್ರಬೋಸರು ತರುಣರು.

ಸುಭಾಷರ ವಯಸ್ಸೀಗ ೪೧. ಇನ್ನೂ ವಿವಾಹವಾಗದೆ, ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿರುವರು.

೧೯೩೭ನೇ ಕೊನೆಗೆ ಇವರು, ಪುನಃ ಆರೋಗ್ಯಲಾಭಕ್ಕಾಗಿ ಪರದೇಶಕ್ಕೆ ಹೋಗಿದ್ದವರು, ಕಳೆದ ತಿಂಗಳ ಕೊನೆಯಲ್ಲಿ ಹಿಂತಿರುಗಿರುವರು. ಅವರ ಮುಂದೆ ಅಪಾರವೆನಿಸುವ ಕಾರ್ಯವಿದೆ. ಅದನ್ನು ನಡೆಸಿಕೊಂಡು ಹೋಗುವ ಸಾಮರ್ಥ್ಯ ಬೇಕು; ಶಕ್ತಿ ಬೇಕು. "ಇದು (ಈ ಶಕ್ತಿಯು) ನಿಮ್ಮಲ್ಲಿ ಬರಲಿ!" ಎಂದು ಮಹಾತ್ಮಾಜಿಯವರು ಶ್ರೀಯುತರನ್ನು ಹಾರ್ದವಿಸುತ್ತಾರೆ.

ಕೊಂಗ್ರೆಸ್ ಮಂತ್ರಿಮಂಡಲಗಳ ಕಾರ್ಯಕಲಾಪಗಳ ವಿಮರ್ಶೆ, ಮುಂದಿನ ಕಾರ್ಯಕ್ರಮ ಗೊತ್ತುವಳಿಗಳು; ನವರಾಜ್ಯಾಂಗ ರಚನೆಯ ಕುರಿತಾದ ನಿರ್ಣಯ, ಫೆಡರೇಶನ್ (ಸಮ್ಮಿಳಿತ ರಾಜ್ಯಭಾರ ಪದ್ಧತಿ)ನ ವಿಚಾರ–ಇವೆಲ್ಲವೂ ಈ ವರ್ಷದ ಕೊಂಗ್ರೆಸ್ ಅಧಿವೇಶನದ ಮುಂದೆ ಬರುವ ಕೆಲವು ಮಹತ್ವದ ವಿಷಯಗಳು.

ಈ ಸಂಚಿಕೆಯ ಆರಂಭದಲ್ಲಿ ಕೊಟ್ಟ ಚಿತ್ರವು, ಶ್ರೀ ಸುಭಾಷ್ ಚಂದ್ರಬೋಸರು, ಇದೇ ಜನವರಿ ಕೊನೆಯ ವಾರದಲ್ಲಿ ವಿದೇಶದಿಂದ ವಿಮಾನದಲ್ಲಿ ಕರಾಚಿಗೆ ಬಂದಿಳಿದ ಕೂಡಲೇ ತೆಗೆದ ಛಾಯಾಚಿತ್ರವಾಗಿರುತ್ತದೆ. ಸಂಪಾ.

[ಈ ಪುಟದಲ್ಲಿ ಕೊಟ್ಟಿರುವ ಅವರ ಚಿತ್ರವು ಇತ್ತೀಚೆಗಿನದು: ಇದನ್ನು, ಉಡುಪಿ ಐಡಿಯಲ್ ಸ್ಟೋರ್ಸಿನ ಮ್ಹಾಲಕರೂ, ...ಯಲ್ ಫೊಟೋ ಸ್ಟುಡಿಯೋದ ಆಡಳಿತೆಗಾರರೂ ಆಗಿರುವ ಶ್ರೀಯುತ ಕೆ. ವಾಸುದೇವ ನಾಯ್ಕರು ನಮ್ಮೀ ವಿಶೇಷ ಸಂಚಿಕೆಗಾಗಿ ಬರೆದು ಕೊಟ್ಟಿರುವರು. ಈ ತರುಣ ಚಿತ್ರಲೇಖಕರಿಗೆ ನಮ್ಮ ಅಭಿನಂದನೆಗಳು.]

ನಿರೂಪಣೆ
(JUDEMENT)

ನ್ಯಾಯಸಾರೋಕ್ತವಾದ ಬುದ್ಧಿ ಶಕ್ತಿಗೆ ನಿರೂಪಣೆ ಎಂದು ಹೇಳಬಹುದು. ಜೀವನದ ಸಂಗ್ರಾಮದ ಸಮಯ ಅನೇಕ ವಿಷಯಗಳು ನಮ್ಮನ್ನು ಎದುರಿಸುತ್ತವೆ. ಬುದ್ಧಿಯಾದರೋ ಈ ಸಮಯ ಸುಮ್ಮನಿರುವುದಿಲ್ಲ. ಕೃತ್ಯಾಕೃತ್ಯ ವಿವೇಚನೆಯನ್ನು ಮಾಡಿಸುತ್ತದೆ. ಅವುಗಳಲ್ಲಿ ಬೇಕಾದಂತೆ ನಡೆದುಕೊಳ್ಳುತ್ತದೆ. ಒಂದೊಂದು ಸ್ಥಿತಿ ವಿಶೇಷಗಳಲ್ಲೂ ಬೇಕಾದಂತೆ ನಡೆದುಕೊಳ್ಳುತ್ತದೆ. ಈ ವ್ಯಾಪಾರವೂ ನಿರೂಪಣೆಯೇ. ಯಾವುದಾದರೂ ಒಂದು ಸಂಗತಿಯನ್ನು ಅನುಮೋದಿಸುವುದರಲ್ಲೂ ನಿಷೇಧಿಸುವುದರಲ್ಲೂ ಮಾನಸಿಕ ವಿಚಾರವು ನಮ್ಮನ್ನು ಸಹಕರಿಸುತ್ತದೆ. ಇದನ್ನೇ ನಿರೂಪಣೆಯೆಂದು ಹೇಳಬಹುದು.

ನಿರೂಪಣೆಯಲ್ಲಿ ನಿರ್ವಿಕಲ್ಪ ಜ್ಞಾನ, ಪರಾಮರ್ಶನ, ನಿಗಮನ ಎಂಬ ಮೂರು ಅಂಗಗಳಿವೆ. ನಿರ್ವಿಕಲ್ಪ ಜ್ಞಾನದ ವಿಷಯ ಏನೆಂಬುದು ಹೇಳಲಾಗುವುದಿಲ್ಲ. ಇದೇ ಇದರ ಮುಖ್ಯ ಸ್ವಭಾವ. ಮಾತ್ರವಲ್ಲ, ಈ ಜ್ಞಾನದ ಮೂಲಕ ನಮಗೆ ಸಂಶಯಗಳೇ ಹುಟ್ಟುತ್ತಿವೆ. ಆ ಮೇಲೆ ಸಂಶಯ ಕೋಟಿಗಳ ಪರಾಮರ್ಶೆಯಾಗುತ್ತದೆ. ಈ ಪರಾಮರ್ಶೆಗಳ ಮೂಲಕ ಅನುಭೂತಿ ವಿಷಯದಲ್ಲಿ ಅಸಂದಿಗ್ಧವಾದ ಒಂದು ತೀರ್ಪು ಬರುತ್ತದೆ. ಈ ತೀರ್ಪೇ ನಿಗಮನವು. ಈ ಮೂರು ಅಂಗಗಳೂ ಕೂಡಿದ ಒಂದು ನಿರೂಪಣೆಯಾಗದು. ಇಂತಹ ನಿರೂಪಣೆಯು ಪೂರ್ಣ ವಿಶ್ವಾಸಜನಕವಾಗಿಯೂ ಸ್ಪಷ್ಟವಾಗಿಯೂ ಉದಾತ್ತವಾಗಿಯೂ ತೀರುವುದು. ಇನ್ನು ಇದಕ್ಕೆ ಒಂದು ಉದಾಹರಣೆಯನ್ನು ಕೊಡೋಣ.

ಕಾರ್ಕಳಕ್ಕೆ ಹೋಗುವವರು ದೂರದಿಂದ ಗೋಮಟೇಶ್ವರ ಪ್ರತಿಮೆಯನ್ನು ನೋಡಿದರೆಂದು ತಿಳಿಯುವ ಮೊದಲು, ಆ ಗೋಮಟೇಶ್ವರನನ್ನು ನೋಡಿ ಯಾವನೋ ಒಬ್ಬ ಮನುಷ್ಯನೆಂದು ತಿಳಿಯುತ್ತಾರೆ. ಅನಂತರ ಅವರ ಮನಸ್ಸಿನಲ್ಲಿ, ಮನುಷ್ಯನಾದರೆ ಏಕೆ ಸ್ಥಿರವಾಗಿ ನಿಂದಿರುವನು ಎಂಬ ಸಂಶಯವು ಹುಟ್ಟುತ್ತದೆ. ಮಾತ್ರವಲ್ಲ, ಕಪ್ಪಾದ ಆ ರೂಪವನ್ನು ಕಂಡು ಇದು ಕಲ್ಲೋ ಎಂಬ ಸಂಶಯವೂ ಅದರೊಂದಿಗೇ ಮೊಳೆಯುತ್ತದೆ. ಇದುವರೆಗೆ ಉಂಟಾದ ಭಾವನೆಗೆ ಪರಾಮರ್ಶವೆನ್ನಬೇಕು. ಕಡೆಗೆ ಕಲ್ಲಿನಿಂದಲೋ ಇಲ್ಲವೇ ಇತರ ಸಾಮಾಗ್ರಿಗಳಿಂದಲೋ ಮಾಡಿದ ಒಂದು ಮಾನವನ ಚಿತ್ರವೆಂಬ ತೀರ್ಪುಬರುತ್ತದೆ. ಈ ತೀರ್ಪಿಗೆ ನಿಗಮನವೆನ್ನಬಹುದು. ಈ ರೀತಿಯಾಗಿ ಇನ್ನೊಂದು ಉದಾಹರಣೆ ಇದೆ. ನಾರದನು ಆಕಾಶಮಾರ್ಗವಾಗಿ ಇಳಿಯುತ್ತಿದ್ದನು. ಶ್ರೀ ಕೃಷ್ಣನು ಆಗ ವಸುದೇವನ ಮನೆಯಲ್ಲಿದ್ದನು. ಥಕ್ಕನೆ ಅವನಿಗೆ ಒಂದು ಶೋಭೆಯು ಕಂಡಿತು. ಇದು ನಿರ್ವಿಕಲ್ಪ ಜ್ಞಾನವು. ಅಲ್ಪ ಹೊತ್ತಿನಲ್ಲಿ ಅವಯವ ವಿಭಾಗವು ತಿಳಿಯಿತು. ಮನುಷ್ಯನೆಂದು ತಿಳಿದನು. ಇಲ್ಲಿ ಪರಾಮರ್ಶವಾಯಿತು. ಕಡೆಗೆ ನಾರದನೆಂದು ತಿಳಿದನು. ಇಲ್ಲಿ ನಿಗಮನವು ಮಾಡಲ್ಪಟ್ಟಿತು.

ನಿರೂಪಣೆಯೆಂದರೆ ಕೇವಲ ಮಾನಸಿಕವೃತ್ತಿ. ಅದು ವಾಗ್ರೂಪಕ್ಕೆ ವಿಷಯವಾಗಿ ಭವಿಸಿದಾಗ ಪ್ರಮೇಯವಾಗುತ್ತದೆ. ನಮ್ಮ ಜ್ಞಾನವು ನಿರೂಪಣೆಯ ಸ್ವರೂಪದಲ್ಲಿದೆ. ಒಂದು ನಿರೂಪಣೆಯು ತೀರಾ ತಪ್ಪಾಗಿದ್ದರೂ ಆ ನಿರೂಪಣೆಯನ್ನು ಮಾಡುವಾಗ ಅದು ತಪ್ಪು ಎಂಬ ತಿಳಿವು ನಮಗುಂಟಾಗುವುದಿಲ್ಲ. ಇದರಿಂದ ವಾಸ್ತವವೆಂದು ತಿಳಿದುಬಂದ ವಿಷಯದಲ್ಲಿ ಮಾತ್ರ ನಿರೂಪಣಾಧಿಕಾರವು ನಮಗಿದೆ. ಅಲ್ಲದವುಗಳಲ್ಲಿಲ್ಲ, ಎಂಬುದು ಸ್ಪಷ್ಟ.

ನಿರೂಪಣೆಯಲ್ಲಿ ಉದ್ಗ್ರಥನರೀತಿಯೆಂದೂ ಅಪಗ್ರಥನ ರೀತಿಯೆಂದೂ ಎರಡು ಭೇದವಿದೆ. ಈ ರೀತಿಗಳಲ್ಲಿ ಉದ್ಗ್ರಥನ ರೀತಿಯೇ (Synthesis) ಹೆಚ್ಚಾಗಿ ನಮಗೆ ಕಾಣಬರುತ್ತದೆ. ಈ ಊರು ಬಹಳ ಉಷ್ಣದಿಂದ ಕೂಡಿದೆ ಎಂದು ಹೇಳಿದರೆ, ಆ ಊರಿನ ಅನುಭವ ವಿಷಯಗಳಲ್ಲಿ ಇದು ಮುಖ್ಯವಾದುದು ಎಂದಂತಾಗುವುದು. ಈ ರೀತಿಗೆ ಅಪಗ್ರಥನ ರೀತಿಯೆನ್ನಬಹುದು. ಹಕ್ಕಿಯು ಹಾರುತ್ತದೆ ಎಂಬಲ್ಲಿ ಉದ್ಗ್ರಥನ ರೀತಿಯು. ಏಕೆಂದರೆ ಹಕ್ಕಿಯು ಎಂದೊಡನೆ ಹಾರುತ್ತದೆ ಎಂದು ಅದರಲ್ಲಿ ಸೇರಿದೆ. ಇದರಿಂದ ಸಾಕ್ಷಾದನುಭವವಾಯಿತು. ಈ ಎರಡು ರೀತಿಯ ವ್ಯತ್ಯಾಸವನ್ನು ಇನ್ನೊಂದು ಉದಾಹರಣೆಯ ಮೂಲಕ ತಿಳಿಯೋಣ. ೬+೩=೯ ಆರು ಮೂರು ಕೂಡಿದರೆ ಒಂಭತ್ತು. ಒಂಭತ್ತೆಂಬುದು ಆರೂ ಮೂರೂ ಕೂಡಿದ್ದಾಗಿದೆ. ಇಲ್ಲಿ ಮೊದಲಿನದು ಉದ್ಗ್ರಥನ ರೀತಿಯು.

ನಮ್ಮ ಜ್ಞಾನವು ನಿರೂಪಣಾಸ್ವರೂಪವಾಗಿದೆ. ಆದರೆ ನಿರೂಪಣೆಗಳೆಲ್ಲಾ ನಾವು ಹೊಸತಾಗಿ ಸೃಷ್ಟಿಸತಕ್ಕವುಗಳಲ್ಲ. ನಾವು ಸಮುದಾಯ ಪರವಾಗಿಯೂ ಆಚಾರ ಪರವಾಗಿಯೂ ಮತ ಪರವಾಗಿಯೂ, ವೇಷ ಪರವಾಗಿಯೂ ಆಹಾರ ಪರವಾಗಿಯೂ ನಮ್ಮ ಪೂರ್ವಿಕರ ನಿರೂಪಣೆಯನ್ನೇ ವಿಚಾರವಿಲ್ಲದೆ ಸ್ವೀಕರಿಸುತ್ತೇವೆ. ಈ ರೀತಿಯ ವಿಷಯಗಳು ಇನ್ನೂ ಹಲವಿವೆ. ಇದು "ರೆಡೀಮೇಡ್" ಶರ್ಟುಗಳನ್ನು ತೆಗೆದುಕೊಳ್ಳುವ ಸಂಪ್ರದಾಯದಂತೆ ಎಂದುದೆಂದರೆ ತಪ್ಪಾಗದು. ಗಾಢವಾಗಿ ಆಲೋಚಿಸಿ ಉಂಟಾದ ನಿರೂಪಣೆಯೇ ನಮ್ಮ ಮತಾಚಾರಗಳಲ್ಲಿದೆ. ಆದುದರಿಂದ ನಾವು ಅವುಗಳನ್ನು ಅಷ್ಟೊಂದು ಗೌರವವಾಗಿ ಚಿಂತಿಸುವುದಿಲ್ಲ.

ಒಂದು ತೆರನಾಗಿ ವಿಚಾರಿಸಿದರೆ ನಿರೂಪಣೆಯೆಂಬುದು ಎರಡು ಸಾಮಾನ್ಯಾನುಭೂತಿಗಳ ಯೋಜನಾರೂಪವಾಗಿ ಉಳ್ಳದೆಂದು ಹೇಳಬಹುದು. ಮಾತ್ರವಲ್ಲ, ಈ ಸಾಮಾನ್ಯಾನುಭೂತಿಗಳೆರಡಕ್ಕೂ ಬಂಧವಿದೆ. ಹೀಗೆ ಹೇಳುವುದೂ ನಿರೂಪಣೆಯೇ ನಿರೂಪಣಾವ್ಯಾಪ್ತಿಯು ಸಾಮಾನ್ಯಾನುಭೂತಿಗಳನ್ನು ಅನುಸರಿಸಿ ವ್ಯತ್ಯಾಸವಾಗಿರುತ್ತದೆ. "ರಾಮನು ಸಾಯುವನು" "ಎಲ್ಲಾ ಮನುಷ್ಯರಿಗೂ ಮರಣವಿದೆ" ಎಂಬಲ್ಲಿ ಮೊದಲನೆಯದು ಎರಡನೆಯದಕ್ಕಿಂತ ವ್ಯಾಪ್ತಿಶೂನ್ಯವಾಗಿದೆ. ಇಲ್ಲಿ ರಾಮನು ಸಾಯುವನು ಎಂಬುದು ವ್ಯಕ್ತಿಪರವಾಗಿದೆ, ಎಲ್ಲಾ ಮನುಷ್ಯರಿಗೂ ಮರಣವಿದೆ. ಎಂಬುದು ಸಾರ್ವಜನೀನವಾಗಿದೆ. ನಿರೂಪಣೆಯ ಪರಿಣಾಮವನ್ನನುಸರಿಸಿ ಅದಕ್ಕೆ ನಾನಾ ತೆರನಾದ ಭೇದವನ್ನು ಕಲ್ಪಿಸಬಹುದು.

1. ಅಪೌರುಷೇಯ = (Impersonal judgment) (೨) ನಿರ್ದೇಶಕ ನಿರೂಪಣೆ (Demonstrative judgment) (೩) ಪ್ರತ್ಯೇಕ ಬಂಧಪರ (Santicular Relation) (೪) ಚಾರಿತ್ರ್ಯವ್ಯಕ್ತಿಪರ (Historical singualar judgment) (೫) ಸಂಖ್ಯಾನನಿರೂಪಣೆ (E. numeration) (೬) ಸಾಮಾನ್ಯನಿರೂಪಣೆ (Generic judgment) ೭. ವಿಧಾಯಕ ನಿರೂಪಣೆ (Hypothetical judgment) ಮಳೆಯು ಸುರಿಯುತ್ತಿದೆ, ಗಾಳಿ ಬೀಸುತ್ತಿದೆ. ಇವುಗಳು ಅಪೌರುಷೇಯಗಳು. ಇದು ಶಾಲೆ, ಅದು ಮನೆ, ಅದು ಅಂಗಡಿ ಅದು ಮೇಜು, ಅದು ಹೂತೋಟ, ಅದು ಆಟದ ಬಯಲು, ಅದು ಗುಡ್ಡ, ಇನ್ನು, ಅನು, ಈಗ, ಆಗ ಎಂಬಿತ್ಯಾದಿಗಳು ನಿರ್ದೇಶಕ ನಿರೂಪಣೆಗಳು. ಪ್ರತ್ಯೇಕ ಬಂಧ ನಿರೂಪಣೆಯಲ್ಲಿ ಎರಡು ವಸ್ತುಗಳ ಅನ್ಯೋನ್ಯ ಬಂಧವ ಹೇಳಲ್ಪಡುವುದು. ಸಿಲೋನ್ ಹಿಂದೂದೇಶದ ದಕ್ಷಿಣ ದಿಕ್ಕಿನಲ್ಲಿದೆ, ಎಂಬುದು ಇದಕ್ಕೆ ದೃಷ್ಟಾಂತ. ಈ ನಿರೂಪಣೆಯು ಮೊದಲಿನವುಗಳಿಗಿಂತ ಉತ್ಕೃಷ್ಟವಾದದ್ದು. ಈ ಕಾಗದವು ಆ ಕಾಗದಕ್ಕಿಂತ ಹಾಳು. ಎಂಬುದೂ ಈ ನಿರೂಪಣೆಯಲ್ಲಿ ಸೇರಿದ್ದು. ತೊಗಲಕ್ ಮಹಮ್ಮದನು ಹಿಂದೂಸ್ಥಾನದ ದೇವಾಲಯಗಳಿಗೆ ದಾಳಿ ಇಟ್ಟನು, ಎಂಬುದು ಚಾರಿತ್ರ್ಯವ್ಯಕ್ತಿಪರವಾದ ನಿರೂಪಣೆಯು. ಈಗ ಹತ್ತು ವರ್ಷಗಳಿಂದ ರಜಾ ದಿನಗಳನ್ನು ಮನೆಯಲ್ಲೇ ಕಳೆಯುತ್ತೇನೆ—ಎಂಬುದು ಸಂಖ್ಯಾನ ನಿರೂಪಣೆಯು. ಈ ನಿರೂಪಣೆಯು ಕಾಲಾದಿ ವಿಷಯಗಳನ್ನು ಬೋಧಿಸುವುದಾಗಿದೆ. ಮಾತ್ರವಲ್ಲ ಇದರ ಉಪಯೋಗವು ಈ ವರ್ತಮಾನವು ಪ್ರತ್ಯಭಿಜ್ಞಾತಗಳಾದ ಅನೇಕ ಅತೀತಾನುಭೂತಿಗಳೊಂದಿಗೆ ಸೇರಿದ್ದು, ಎಂಬಲ್ಲಿ ಸಾರ್ಥಕವಾಗುತ್ತದೆ. ನಿರೂಪಣೆಗೆ ಅನುಭವದ ಸೀಮೆಯನ್ನು ಎಂದೂ ದಾಟಲು ಸಾಧ್ಯವಿಲ್ಲ. ಆದರೂ ಎಲ್ಲಾ ಪ್ರಾಣಿಗಳೂ ಹುಲ್ಲು ತಿನ್ನುತ್ತವೆ. ಎಲ್ಲಾ ಮನುಷ್ಯರು ಸಾಯುತ್ತಾರೆ, ಎಂಬಿವೇ ಮೊದಲಾದ ಇಂತಹ ನಿರೂಪಣೆಗಳನ್ನು ಮಾಡುತ್ತೇವೆ. ಯಾರಾದರೂ ಎಲ್ಲಾ ಪ್ರಾಣಿಗಳೂ ಹುಲ್ಲನ್ನು ತಿನ್ನುವವೇ? ಎಲ್ಲಾ ಮನುಷ್ಯರೂ ಸಾಯುವರೇ? ನೀನು ನೋಡಿದ್ದಿಯೇ ಎಂದು ಕೇಳಿದರೆ ನಾವು ಮೂಗು ಮುರಿಯುತ್ತೇವೆ. ಆದುದರಿಂದ ಈ ನಿರೂಪಣೆಯ ವ್ಯಾಪ್ತಿಯನ್ನು ಅಷ್ಟರವರೆಗೆ ಎಳೆಯುವುದು ಯುಕ್ತವಲ್ಲ.

ಅದೂ ಅಲ್ಲದೆ ಇಂತಹ ನಿರೂಪಣೆಗಳು ಯಾವಾಗಲೂ ಸರಿಯಾಗಿರಬೇಕೆಂದಿಲ್ಲ. ನಾವು ನಮ್ಮ ಪೂರ್ವಜರೂ ನೋಡಿದ ಮೃಗಗಳು ಹುಲ್ಲು ತಿನ್ನುವವುಗಳಾಗಿರಬಹುದು. ಇನ್ನು ಮುಂದಿನವುಗಳು ಹೀಗೆ ಇರಬೇಕೆಂದಿಲ್ಲ. ನಮ್ಮ ಪ್ರಾಚೀನರು ಹಂಸವು ಬಿಳುವಾದ್ದು ಎಂದು ಹೇಳುತಿದ್ದರು. ಆದರೆ ಆಸ್ಟ್ರೇಲಿಯದ ಹಂಸಗಳನ್ನು ನೋಡಿದರೆ ಈ ಧಾರಣೆಯನ್ನು ದೂರಮಾಡಬೇಕಾಗುವುದು. ಆದುದರಿಂದ ಅನುಭವಾತೀತ ನಿರೂಪಣೆಯು ತಪ್ಪಾಗಬಹುದು. 'ಏ ಯು ಈ ಸ್ಥಿತಿಯಲ್ಲಿ ಬಿ' ಯು ಎಂಬುದು ಸಾಮಾನ್ಯ ನಿರೂಪಣೆ. 'ಏಯು ಬಿಯಾದರೆ ಅದು ಎಸ್', ಎಂಬುದು ವಿಧಾಯಕ ನಿರೂಪಣೆಯು. "ಗಾಳಿ ದ್ರವವಾಗಿದ್ದರೆ ನೀರೂ ದ್ರವವಾಗಿದೆ." "ಮುಕ್ತನು ಯಾವುದನ್ನೂ ಮಾಡದವನಾದರೆ ಮೂರ್ಖನೂ ಅಂತೆಯೇ" ಎಂಬುದೂ ವಿಧಾಯಕ ನಿರೂಪಣೆಯು.

ಈ ಲೋಕದಲ್ಲಿ ತಪ್ಪಾದ ನಿರೂಪಣೆಗಳು ಹಲವಿವೆ. ಅದಕ್ಕೆ ನಿರೂಪಣೆಗೆ ಆಶ್ರಯವಾದ ಸಂಕಲ್ಪಗಳ ಸಂದಿಗ್ಧತ್ವವು ಅಸ್ಪಷ್ಟತೆಯೂ ಕಾರಣ. ಅನುಭೂತಿಗಳನ್ನು ಪರಿಶೋಧಿಸಿ ಮಾಡಿದ ನಿರೂಪಣೆಯು ತಪ್ಪಾಗಿ ಹೋಗಿಲ್ಲ. ಮುಕ್ತಳ ನಿರೂಪಣೆಯು ವಿಕಲವಾಗಿರುವುದಕ್ಕೆ ಅನುಭೂತಿ ದೈನ್ಯವೇ ಮುಖ್ಯಕಾರಣ. ಅನುಭೂತಿಯನ್ನು ಪರಿಶೋಧಿಸುವುದಕ್ಕೆ ಕಾಲವು ಹೆಚ್ಚು ಬೇಕು. ಕಾಲವು ಕಡಮೆಯಾದರೆ ಅದು ಸರಿಯಾಗಿರುವುದಿಲ್ಲ. ಅನ್ಯರ ನಿರೂಪಣೆಯನ್ನು ಕಣ್ಣು ಮುಚ್ಚಿ ಸ್ವೀಕರಿಸುವುದೂ ಇನ್ನೊಂದು ನಿರೂಪಣೆಯ ವೈಕಲ್ಯಕ್ಕೆ ಕಾರಣ. ಅನೇಕ ವೇಳೆ ನಮ್ಮ ಪ್ರಪಂಚದ ಮೇಲಾಟವು ನಿರೂಪಣೆಯ ದಾರಿಯನ್ನು ಕೆಡಿಸುವುದು. ಮಾತ್ರವಲ್ಲ, ವಿಕಾರವಿಕ್ಷುಬ್ಧವಾದ ಬುದ್ಧಿಯು ನಮ್ಮ ಮಾರ್ಗವನ್ನು ಅನೇಕ ವೇಳೆ ಹಾಳು ಮಾಡುತ್ತಿದೆ ಆದುದರಿಂದ ಯಾವುದೊಂದು ಕ್ಷೋಭವಿಕಾರವಿಲ್ಲದ ಸಮಯ ನಿರೂಪಣೆಗೆ ಕೈಹಚ್ಚಬೇಕು. ಜ್ಞಾನ ಸುವರ್ಣವನ್ನು ನಿರೂಪಣಾಗ್ನಿಯಲ್ಲಿ ಹಾಕಿದರೆ ಅದರ ಶೋಭೆಯೂ ಬೆಲೆಯೂ ಹೆಚ್ಚುವುದು. ಆದುದರಿಂದ ನಿರೂಪಣೆಗೆ ಎಂತಹ ಸ್ಥಾನವೆಂಬುದು ಸ್ಪಷ್ಟ.

ಎಮ್. ಸುಬ್ರಾಯನ್.



ದಿವಂಗತ ಶರಚ್ಚಂದ್ರ ಚತರ್ಜಿಯವರು.

ದಿವಂಗತ
ಶ್ರೀ! ಶರಚ್ಚಂದ್ರ ಚತರ್ಜಿಯವರು

ಬಂಗಾಲದ ಪ್ರಮುಖ ಸಾಹಿಗಳಲ್ಲೊಬ್ಬರಾದ ಶ್ರೀ! ಶರಚ್ಚಂದ್ರ ಚತರ್ಜಿಯವರು, ಕಳೆದ ತಿಂಗಳ ಕೊನೆಯ ವಾರದಲ್ಲಿ ಕಾಲವಶರಾದರು. ಶ್ರೀಯುತ ಚತರ್ಜಿಯವರು, ಸಮಾಜದ ಕುಂದುಕೊರತೆಗಳನ್ನು ಉಗ್ರವಾಗಿ ಟೀಕಿಸಿ ಹಲವು ಕಾದಂಬರಿಗಳನ್ನೂ ಲೇಖನಗಳನ್ನೂ ಬರೆದಿರುವರು. ಮುಖ್ಯವಾಗಿ ಇವರ ಕತೆಗಳು ಜನರ ಮನಸ್ಸಿಗೆ ಚೆನ್ನಾಗಿ ಹಿಡಿಯುವಂಥವು. ಇವರ ಜೀವನ ಚರಿತ್ರವನ್ನಿಲ್ಲಿ ಸಂಕ್ಷೇಪವಾಗಿ ಕೊಡಲಾಗಿದೆ.



ಲೇಖಕರು:—
ಶ್ರೀ! ಜಿ. ರಾಘವೇಂದ್ರರಾವ್.

ಸಾಹಿತ್ಯವು ಬಹುಮುಖವಾಗಿ ಹರಿಯುತ್ತಲಿದೆ. ಕಾವ್ಯ ಬರೆದೇ ಸಾಹಿತಿಯಾಗಬೇಕೆಂದಿಲ್ಲ. ಅಥವಾ ಕಾವ್ಯವೊಂದೇ ಸಾಹಿತ್ಯವಲ್ಲ. ಕಥೆಗಳಿಂದಲೂ ಸಾಹಿತ್ಯದ ಸೇವೆಯು ನಡೆದಿದೆ: ಇಂಗ್ಲಿಷ್ ಸಾಹಿತ್ಯವು ಹಲವು ಕಥಾ ಲೇಖಕರಿಂದ ಮತ್ತೂ ಉಜ್ವಲಿಸಿ ಹೆಚ್ಚು ಶೋಭೆಗೊಂಡಿದೆ. ಫ್ರಾನ್ಸಿನ ವಿಕ್ಟರ್ ಹ್ಯೂಗೋ, ಇಂಗ್ಲೆಂಡಿನ ಡಿಕ್ಕನ್ಸ್, ರಷ್ಯಾದ ಟೋಲ್‌ಸ್ಟಾಯಿ ಇವರೆಲ್ಲ ಕವನಗಳನ್ನು ಬರೆದವರಲ್ಲ. ಅವರ ಕಥೆಗಳು ಇಂದು ಅಚ್ಚಾಗಿ ನಾಶ ಆಳಿದುಹೋಗುವಂಥವಲ್ಲ; ಅಜರಾಮರವೆನಿಸುವವು. ದಿವ್ಯ ಸೌಂದರ್ಯದ ಕಟ್ಟಡಗಳವು. ಕಳೆದ ತಿಂಗಳ ಕೊನೆಯ ವಾರದಲ್ಲಿ ದಿವಂಗತರಾದ ಬಂಗಾಲದ ಶ್ರೀ! ಶರಚ್ಚಂದ್ರ ಚತರ್ಜಿಯವರು ಬಂಗಾಲೀ ಸಾಹಿತ್ಯದ ಶೋಭೆಯನ್ನು ಹೆಚ್ಚಿಸಿದ ಕಲಾವಿದ: ಜನಹೃದಯ ಸಾಗರದಲ್ಲಿ ಸಹಾನುಭೂತಿಯ ತೆರೆಗಳ ಸೃಷ್ಟಿಸಿದ ಕೃತಕೃತ್ಯ ಸಾಹಿತಿ.

ಶರಚ್ಚಂದ್ರರು ಕೇವಲ ಬಡ ಕುಟುಂಬದಲ್ಲಿ ಜನಿಸಿದರು. ಪ್ರಾಯ ಪ್ರಬುದ್ಧರಾಗುವನಕ ಇವರನ್ನು ದಾರಿದ್ರ್ಯವು ಬಿಟ್ಟಿರಲಿಲ್ಲ. ತಂದೆ ಬಿಟ್ಟುಹೋದ ಆಸ್ತಿಯೇ ಇದು— ಈ ದಾರಿದ್ರ್ಯ! ಬಹುಶಃ ಈ ದಾರಿದ್ರ್ಯವೇ ಶರಚ್ಚಂದ್ರರಿಗೆ ಮುಂದಿನ ಬಾಳಿಗೆ [illegible]ಯವಾಯಿತು. ದೇಶದಲ್ಲಿ ಎಂತಹ [illegible]ಗಳಿರುವುವು, ಸಮಾಜವು ಹೇಗೆ ನಡೆದಿದೆ, ಎಂಬುದನ್ನು [illegible] ಈ ದಾರಿದ್ರ್ಯವೇ ಅವರಿಗೆ ಸಹಾಯಕವಾಯಿತು. ಕೆಲಸಕ್ಕಾಗಿ ಅಲೆವುದು,— ಇದರಿಂದ ಅನೇಕ ಹೃದಯಗಳನ್ನು ತಿಳಿಯಲೂ ಅನುವಾಯಿತು. ಉದ್ಯೋಗಕ್ಕಾಗಿ ಬಹಳ ಪೇಚಾಡಿದರು. ಈ ಪೇಚಾಟದಲ್ಲಿ ಕೆಟ್ಟ ಅಪವಾದಗಳೂ ಬಂದುವು: ನೀಚ ಜನರನ್ನು ಕಂಡರು; ಒಳ್ಳೆಯ ಹೃದಯಗಳ ಅರಿವೂ ಸ್ವಲ್ಪ ಮಟ್ಟಿಗಾಯಿತು.

ದೇಶದಲ್ಲಿನ ಸ್ಥಿತಿಗಾಗಿ ಅವರ ಮನಸ್ಸು ಚೆನ್ನಾಗಿ ನೊಂದುಕೊಂಡಿತು. ಒಂದೊಂದು ಹೊಸ ವಿಚಾರವನ್ನು ತಂದಿತು. ನಿತ್ಯವೂ ನಡೆದ ಹೋರಾಟದಲ್ಲಿ, ಮಥಿಸಿಬಂದ ವಿಚಾರಗಳೇ ಅವರ ಮುಂದಿನ ಕಾದಂಬರಿಗಳಲ್ಲಿ ಪ್ರತಿಬಿಂಬಿತವಾಗಿವೆಯೆನ್ನಬಹುದು.

ಅಲೆದಾಡುತ್ತಲಿರುವವರಿಗೆ ಒಂದು [illegible] ದೊರೆಯದೆ ಇಲ್ಲ. ಬಹುಕ್ರಮದ ನಂತರ ಶರಚ್ಚಂದ್ರ ಚತರ್ಜಿಯವರಿಗೂ ಒಂದು ಕೆಲಸ ದೊರೆಯಿತು. ಇದು ದೊರೆತುದು ರಂಗೂನಿನಲ್ಲಿ! ಬಂಗಾಳದಿಂದ ಅವರು ರಂಗೂನಿಗೆ ಪ್ರಯಾಣ ಬೆಳೆಸಿದ್ದರು. ಕೆಲಸ ದೊರೆತಾಗ ಕೊಂಚ ವಿರಾಮ ದೊರೆಯುತ್ತೇನೋ!

ಆ ಕಾಲಕ್ಕೆ ಸರಿಯಾಗಿ, ಕಲ್ಕತ್ತದಲ್ಲಿ, ಶ್ರೀ! ಶರಚ್ಚಂದ್ರರ ಸ್ನೇಹಿತರು ಕೆಲವರು ಒಂದು ಮಾಸಪತ್ರಿಕೆ ಹೊರಡಿಸಿದ್ದರು. ಶರಚ್ಚಂದ್ರರು ತಮ್ಮ ಪ್ರಥಮಯತ್ನವೆಂದು ಒಂದು ಕತೆ ಬರೆದು ಆ ಪತ್ರಿಕೆಗೆ ಕಳುಹಿದರು. ಅದು ಅಚ್ಚಾಯಿತು. ಆ ಕತೆಯು ಬಂಗಾಳದಲ್ಲೆಲ್ಲ ಅತ್ಯಂತ ಹರ್ಷದಿಂದ ಓದಲ್ಪಟ್ಟಿತು. ಅದೊಂದು ಕತೆಗೆ ಎಲ್ಲೆಲ್ಲೂ ಮಾನ್ಯತೆ: ಎಲ್ಲೆಲ್ಲೂ ಆದರ—ಪುರಸ್ಕಾರಗಳು; ಎಲ್ಲೆಲ್ಲೂ ಪ್ರಶಂಸೆ! ಲೇಖಕನ ಪ್ರಥಮಪ್ರಯತ್ನವಾದರೂ, ಅಚ್ಚುಕಟ್ಟಾಗಿತ್ತು. ಭಾಷಾಶೈಲಿಯು ಮನೋಹರವಾಗಿತ್ತು. ಎಲ್ಲಕ್ಕಿಂತಲೂ ಮೇಲಾಗಿ ಸಾಮಾನ್ಯರು ಸಹಾನುಭೂತಿಯಿಂದ ತಿಳಕೊಳ್ಳಬಲ್ಲ ಭಾವಗಳು ಅದರಲ್ಲಿದ್ದುವು.

ಕಥಾಲೇಖಕನು ಜನಸಾಮಾನ್ಯರ ಸಹಾನುಭೂತಿಯಿಂದ ತಿಳಿಯಬಲ್ಲ ಭಾವಗಳನ್ನು ಪ್ರತಿಬಿಂಬಿಸಿದರೆ ಮಾತ್ರ ಸಫಲನು: ಕಥಾಲೇಖನದಲ್ಲಿ ಭಾಷೆಯ ಸೊಗಸು ಎಷ್ಟು ಅಗತ್ಯವೋ ಅದಕ್ಕಿಂತಲೂ ಸಹಜತೆ ಹಾಗೂ ಸ್ವಾಭಾವಿಕತೆಯೂ ಅವಶ್ಯವಿದೆ. ಶ್ರೀ! ಶರಚ್ಚಂದ್ರರು ಇದರಲ್ಲಿ ನಿಪುಣರು. ಅವರ ಮೆದುಳು ಅನಂತ ಸುಂದರ ಕಥೆಗಳ ಭಾಂಡಾಗಾರ.

ತಮ್ಮ ಒಂದು ಕತೆಗೆ ದೊರೆತ ಮನ್ನಣೆಯಿಂದ ಪ್ರೋತ್ಸಾಹಿತರಾದ ಶ್ರೀ! ಶರಚ್ಚಂದ್ರರು ಮುಂದೆ ಅನೇಕ ಸಣ್ಣ ಕತೆಗಳನ್ನು ಕಾದಂಬರಿಗಳನ್ನೂ ಬರೆಯತೊಡಗಿದರು. ಇವರ ಎಲ್ಲ ಕತೆಗಳೂ ಬಹು ಜನಾದರ ಪಡೆದುವು. ಸಮಾಜದ ದುಸ್ಥಿತಿಗಳನ್ನು ಕಂಡು ಬೆಂದ ಇವರ ಹೃದಯವು ಬಿಸಿಬಿಸಿ ನಿಟ್ಟುಸಿರುಗಳನ್ನು ಬಿಟ್ಟಿತು. ಅವುಗಳ ತಾಪವನ್ನು ತಡೆಯಲಾರದವರು, ಶರಚ್ಚಂದ್ರ ಚತರ್ಜಿಯವರನ್ನು ದೂರಿದರು; ಬೈಗಳಿದರು; [illegible] ಟೀಕೆಗಳಿಗೂ ಕೊರತೆಯಿಲ್ಲ. ಆದರೆ, ಶರಚ್ಚಂದ್ರ ಚತರ್ಜಿಯವರು ಅದನ್ನೊಂದನ್ನೂ ಗಣಿಸಲಿಲ್ಲ. ತಮ್ಮ ಹೃದಯದಲ್ಲಿ ಅನುಭವಿಸಿದುದನ್ನು ಬರೆದರು. ಸಮಾಜದ ಬಿರುನೋಟವನ್ನು ಎದುರಿಸಿ ನಿಂತರು.

ಕವೀಂದ್ರರವೀಂದ್ರರು ಶರಚ್ಚಂದ್ರರನ್ನು ಮನಸಾರೆ ಹೊಗಳುವರು. "[illegible] ಅವರ ಸಾಹಿತ್ಯ" "[illegible] ಹೃದಯವು ಶರಚ್ಚಂದ್ರರ ಕೃತಿಗಳಿಗೆ [illegible]" ಇದಕ್ಕಿಂತ [illegible] ಬೇಕೇ?

ಯಾರೋ ಒಬ್ಬರು ಇವರನ್ನು ಕೇಳಿದರು ಒಮ್ಮೆ: "ನಿಮ್ಮ ಕೃತಿಗಳನ್ನು ನಾವು ಗ್ರಹಿಸಲು ಶಕ್ಯರಾಗುತ್ತೇವೆ. ರವೀಂದ್ರರ ಲೇಖನಗಳನ್ನು ನಾವು ಸುಲಭದಲ್ಲಿ ಅರಿತುಕೊಳ್ಳಲಾರೆವು" ಎಂದು. ಅದಕ್ಕೆ—"ನಾನು ನಿಮಗಾಗಿ ಬರೆಯುತ್ತಿದ್ದೇನೆ; ರವೀಂದ್ರರು ನಮಗಾಗಿ ಬರೆಯುವರು" ಎಂದು ಚತುರೋಕ್ತಿಯನ್ನಾಡಿದರಂತೆ.

ನಿಜವಾದ ಸಾಹಿತಿಯಾಗಲು ಜನಸಾಮಾನ್ಯರು ಅರಿತುಕೊಳ್ಳಬೇಕಾದುದನ್ನು, ಅವರಿಗೆ ಉಪಕಾರವಾಗುವಂತಹದನ್ನು ಬರೆಯಬೇಕಾಗಿದೆ. ಶರಚ್ಚಂದ್ರ ಚತರ್ಜಿಯವರು ಇದಕ್ಕೆ ನಿದರ್ಶನ. ಅವರ ಪಾಂಡಿತ್ಯವು ಕೇವಲ ಭಾಷಾಪಾಂಡಿತ್ಯವಲ್ಲ; ವಿವಿಧ ಮನೋಧರ್ಮಗಳನ್ನರಿತ ಪಾಂಡಿತ್ಯ.

ಶರಚ್ಚಂದ್ರರು ಬರೆದ ಕಾದಂಬರಿಗಳಲ್ಲಿ "ಶ್ರೀಕಾಂತ" ಮತ್ತು "ದೇವದಾಸ" ಇವು ಅತ್ಯಂತ ಮನೋಹರವಾಗಿವೆ ಎಂದು ಜನಾಭಿಪ್ರಾಯವಿದೆ.

ಇಪ್ಪತ್ತನೆ ಶತಮಾನದ ಪ್ರಖ್ಯಾತ ಬಂಗಾಲೀ ಸಾಹಿತಿಗಳಲ್ಲಿ ಶರಚ್ಚಂದ್ರರು ಒಬ್ಬರು.

ಕೈಮಗ್ಗಗಳ ಉದ್ಯೋಗ

ಬೊಂಬಾಯಿ ಇಲಾಖೆಯಲ್ಲಿ ಸುಮಾರು ೧ ಲಕ್ಷ ಮಗ್ಗಗಳನ್ನು, ೮ ಲಕ್ಷ ಜನರಿಗೆ ಕೆಲಸ [illegible]. [illegible] ಕಾಲದಲ್ಲಿ [illegible] ಹತ್ತಿಯ, ಉಣ್ಣೆಯ ಹಾಗೂ [illegible] ಬಟ್ಟೆಗಳನ್ನು ತಯಾರಿಸುವುದರಲ್ಲಿ ಬಹಳ ಪ್ರಸಿದ್ಧಿ ಪಡೆದಿತ್ತು. ಆದರೆ, ಈಗ ಈ ಉದ್ಯೋಗವು ಬಹಳ [illegible] ಸ್ಥಿತಿಗೆ ಬಂದಿದೆ. ಅದರ ಪುನರುಜ್ಜೀವನದ ಆವಶ್ಯಕತೆಯು [illegible]ಯಾಗಿದ್ದೆ.



ಕವಿ—ಗೀತ!

ನಾದದೇವಿಯ ಸಿರಿಯ ಮೂಡಿಸುವ ಬನದೊಳಗೆ
ಹಾಡುವನು ಕಬ್ಬಿಗನು ಏಕಾಂತವಾಗಿ!
ತೀಡುತಿದೆ ತಂಗಾಳಿ—ಹಾಡುತಿದೆ ಭೃಂಗಾಳಿ-
ಕೂಡಿ ಮನಗೂಡಿ ಹಾಡುವನಲ್ಲಿ ನೀಗಿ!!

ಮೇಲೆ ಮೋಹನರಾಗವೆತ್ತಿ ಹಾಡುವ ದೇವ
ಲೋಕವಕ್ಕಿಯು; ಅದರ ಇಂಚರದ ಹಾಡಂ
ಕೇಳಿ ಮನಸೋತ ರಸಿಕರ ಕೂಗು ಕೇಳುತಿದೆ:
"ಕಬ್ಬಿಗಾ, ತಡೆವಾಯ! ಕೇಳು ಸುರಗಾನಂ!!"

ಕೋಗಿಲೆಯ ಇಂಚರಕೆ ಸರಿಬಾರದೀ ಭಾವ
ರಸದುಂಬಿ ತುಳುಕುತಿಹ ಕವಿಯ ಗೀತಂ!
ವಿಶ್ವವನೆ ಮರೆಸಿ ಹೊಸತೊಂದು ಏಂ ಎಂದಿಸುವ
ಸ್ವರ್ಗದ ಸಕ್ಕರೆ ಪೂರ ಹರಿವಪ್ರವಾಹಂ!!

ಕೇಳಿತೀರಿತು: ರಸಿಕರೂರ ಸೇರಿದುದಾಯ್ತು!
ಕಬ್ಬಿಗನು ಮನನೊಂದು, ತನ್ನತಾಹಳಿದು
ಪ್ರಕೃತಿ ತನಗಿತ್ತ ಶೃಂಗಾರ ವೃದುತಲ್ಪವನು
ಸೇರಿ. ಹಾಡಿದ ಹಾಡ ಮುಗಿಸಿದನು ಒರೆದು.

ಇನ್ನೊಂದು ದಿನ—ರಸಿಕರಾ ಬನಕೆ ಬರಲು ಸುರ
ಗಾನವೆಲ್ಲಿದೆ? ಕೇಳಿದಾ ಚಣಕ ಇಲ್ಲ!
ಎಲ್ಲ ಆ ಬನದಲ್ಲಿ ಮಾರ್ದನಿಗಳೇಳುತಿವೆ:
ಸೃಷ್ಟಿಯನೆ ಸೂರೆಗೊಂಡಿಹ ಕವಿಯ ಸೊಲ್ಲು!!

ಸೀಲಾಂಗ. ಪುತ್ತೂರು

ನೋಟೀಸು.

ಪಡುಬಿದ್ರೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕಡೆಯಿಂದ—ಸದರಿ ದೇವಸ್ಥಾನಕ್ಕೆ ಬೇರೆ ಬೇರೆ ಕುಳಗಳಿಂದ ಬೇರೆ ಬೇರೆ ರೂಪವಾಗಿ ಅಕ್ಕಿ, ಕಾಯಿ, ಎಣ್ಣೆ, ನಗದು ವಗೈರೆಯಿಂದ ಬರುವಂತಾದ್ದು ಇದ್ದು ಅದು ಬಹಳ ವರ್ಷಗಳಿಂದ ಬಾಕಿ ಉಂಟು. ಸದರಿ ದೇವಸ್ಥಾನದ ಬಾಬ್ತು ಇರುವ ವಿಶಿಷ್ಟ ಲೆಖ್ಖಪತ್ರಗಳು ಮೊದಲಿನ ಮೊಕ್ತೇಸರರಾದ ಆದಿರಾಜರಸ ಕಿನ್ಯಕ್ಕ ಬಲ್ಲಾಳರ ಸ್ವಾಧೀನ ಇದ್ದು ಅದನ್ನು ಕೇಳಿ ನಾವ ಡಿಸ್ಟ್ರಿಕ್ಟ್ ಕೋರ್ಟು O. P. 4/38ಕ್ಕೆ ನಡಿಸಿದ ವ್ಯವಹಾರ ತಾರೀಕು 22-2—38ಕ್ಕೆ ಇಟ್ಟಿದೆ. ತನ್ಮಧ್ಯೆ ಸದರಿ ಬಲ್ಲಾಳ್ ಮತ್ತು ಕೆಲವು ಕುಳಗಳು ಒಂದಾಗಿ ಹಿಂದಿನ ತಾರೀಕಿನ ನಮೂನಿನಿಂದ ತಮ್ಮ ಸಲುವಳಿಕೆಗಳ ಬಗ್ಗೆ ರಶೀದಿಯನ್ನು ಕಲ್ಪಿಸಿಕೊಳ್ಳತೊಡಗಿದ ಸಂಗತಿ ನಮ್ಮ ತಿಳುವಳಿಕೆಗೆ ಬಂದದೆ. ಆದುದರಿಂದ! ಸದರಿ ದೇವಳ ಕುಳವಾರುಗಳು ಗತ 12 ವರ್ಷಗಳ ಲಾಗಾಯ್ತು ಭಂಡಾರಕ್ಕೆ ಸಲ್ಲಿಸಿ ಪಡೆದ ರಶೀದಿಗಳನ್ನು ಇದೇ ಫಬ್ರವರಿ ತಾರೀಕು 13ರ ಒಳಗೆ ನಮ್ಮ ಮುಂದೆ ಹಾಜರುಪಡಿಸಿ ಕಂಡ ಕುರಿತು ನಮ್ಮ ದಸ್ಕತು ಪಡಿಯುವ ಹಾಗೂ ಗತ ಬಾಕಿಗಳನ್ನು ಸಹ ವಸೂಲುಕೊಟ್ಟು ಪಾವತಿಪಡಕೊಳ್ಳದಿದ್ದರೆ ನಾವೆ ಮಾಡಬೇಕಾಗುತ್ತದೆ. ನಂತರ ತರುವ ಸಂದಾಯ ರಶೀದಿಗಳು ದೇವಳ ಕ್ರಮವಾದ ಲೆಕ್ಕಗಳಿಂದ ರುಜುಮಾಡಬೇಕು. ವಿನಹ ಅಂಥಾ ರಶೀದಿಗಳು ದೇವರ ಮೇಲೆ ಬಾಧಿಸತಕ್ಕವುಗಳೂ ಅಲ್ಲ, ಅದು ಒಪ್ಪತಕ್ಕದ್ದೂ ಅಲ್ಲ.

P. ಭುಜಂಗರಾವ್,
ಆಡಳ್ತೆ ಮೊಕ್ತೇಸರ್.

ತಾರೀಕು 1-2-1938.
ಪಡುಬಿದ್ರೆ.

ಪತ್ರಪ್ಪಬೈಲು ವೆಂಕಟ್ರಮಣಯ್ಯ,
ಶೀನಪ್ಪ ಶೆಟ್ಟಿ,
ಮೊಕ್ತೇಸರರು.

ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್, ಮಂಗಳೂರು.

ಇಂದು, ಬೀಡಿ ಕೈಗಾರಿಕೆಯು ಮುಂದುವರಿದ ಒಂದು ಉದ್ಯಮವಾಗಿದೆ. ಒಂದು ಕಾಲದಲ್ಲಿ ಈ ಕೈಗಾರಿಕೆಗೊಂದು ಸ್ಥಾನ, ಮಾನವೆಂಬುದಿರಲಿಲ್ಲ. ಆದರೆ, ಸುಶಿಕ್ಷಿತರು ಈ ಉದ್ಯಮಕ್ಕೆ ಕೈಹಚ್ಚಿದ ನಂತರ, ಇದರ ಇಯತ್ತೆಯು, ಇತರ "ಬಹುಮಾನ"ದ ಕೈಗಾರಿಕೆಗಳ ಸಾಲಿಗೆ ಬಂತು. ನಮ್ಮ ಜಿಲ್ಲೆಯಲ್ಲಿ ಈ ಕೈಗಾರಿಕೆಯ ಇಯತ್ತೆಯನ್ನೇರಿಸಿದ ಕೀರ್ತಿಯು ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್, ಇದರ ಮಾಲಕರಾದ ಕಸ್ತೂರಿಕಾರ್ ಬಂಧುಗಳಿಗೆ ಸಲ್ಲುತ್ತದೆ. ದರ್ಬಾರ್ ಬೀಡಿಗಳೆಂದರೆ, ಜಿಲ್ಲೆಯ ಹೊರಗೂ—ದೇಶದ ನಾನಾ ಕಡೆಗಳಲ್ಲಿ ಹೆಸರಾಗಿವೆ. ಈ ಸಂಸ್ಥೆಯ ಕ್ರಮವಾದ ಅಭಿವೃದ್ಧಿಯು ಎಷ್ಟೋಜನರು ಬಯಕೆಪಡು (envy) ವಂತೆ ನಡೆದಿದೆ. ಶಿಸ್ತು, ಕೆಲಸಗಾರರ ವಿಷಯಕವಾಗಿರುವ ಅವರ ಕರುಣೆ, ವ್ಯವಹಾರ ಕೌಶಲ್ಯ— ಇವು ಮೂರೂ ಸೇರಿ ಈ ಸಂಸ್ಥೆಯ ಅಭಿವೃದ್ಧಿಯನ್ನು ಸಾಧಿಸಿರುವುವು. ಇಂದು ಜಿಲ್ಲೆಯ ಪ್ರಾಮುಖ್ಯ ಬೀಡಿ ಕಾರ್ಖಾನೆಯಿದು ಮುಂದೆಯೆಂದೆಂದೂ ಹಾಗೆಯೇ ತನ್ನ ಇಯತ್ತೆಯನ್ನು ಕಾದಿರಿಸುವುದೆಂದು ನಂಬಿರುವೆವು.




ಅಫೀಮು ಸೇವಕರು, ಯಥೇಚ್ಛ ಅಫೀಮಿನ ಧೂಮ್ರಪಾನ ಮಾಡಿ, ... [illegible]

ಚೀನದ ಅಫೀಮು ಸೇವಕರು!

ಅಫೀಮು ಸೇವಕರಿಗೆ ಮರಣದಂಡನೆ!

ಅಫೀಮು ಸೇವನೆಯ ಚಟವು, ಕುಡಿಕತನಗಿಂತಲೂ ಕೆಟ್ಟುದು. ಅದಕ್ಕೆ ತುತ್ತಾದವನನ್ನು ಪುನರುಜ್ಜೀವಿಸಿತರುವುದು ಅಸಾಧ್ಯವೇ ಆಗಿದೆ. ಇಂಡಿಯದಲ್ಲಿ ಈ ಅಫೀಮು ಚಟವು ಅಸ್ಸಾಮಿನಲ್ಲಿ ವಿಶೇಷವಾಗಿದೆ. ಇದನ್ನು ತಡೆಯಲು ಅಲ್ಪಸ್ವಲ್ಪ ಯತ್ನಗಳು ನಡೆದಿರುವುವು. ಅಫೀಮು ಚಟವು ವೈಪರೀತ್ಯಕ್ಕೆ ಹೋದವರ ಬಗ್ಗೆ ಆಶ್ರಮಗಳೇನೋ ಕೆಲವಿವೆ. ಆದರೆ, ಚೀನದಲ್ಲಿ ಅಫೀಮು ಸೇವಕರಿಗೆ ಮರಣದಂಡನೆ!



[illegible]

ಅಫೀಮು ಚಟವು ಮನುಷ್ಯನ ಆರೋಗ್ಯಕ್ಕೆ ಸಹಾಯಕನಲ್ಲ. ಧೂಮ್ರಪಾನ, ಸಿಹಾಪಾನಗಳಿಗಿಂತಲೂ ಕಠಿಣತರವಾದ ವಿಷವಿದು. ಆದರೂ ಪ್ರಪಂಚದ ನಾನಾ ಭಾಗಗಳಲ್ಲಿ ಇದು ವಿಶೇಷವಾಗಿದೆ. ಚೀನವು ಅಫೀಮುಭುಂಜಕರಿಗೆ ತವರುಮನೆಯಂತಿದೆ.

ಇಂದು ಹಿಂದೂದೇಶವು ತನ್ನಲ್ಲಿನ ಅಫೀಮುಚಟ, ಗಾಂಜಾ, ಕುಡಿಕತನ ಮೊದಲಾದುವುಗಳನ್ನು ಕಡಿಮೆಮಾಡಲು ಅಲ್ಪಸ್ವಲ್ಪವಾಗಿ ಯತ್ನಿಸುತ್ತಿರುವಾಗ, ಚೀನವು ಅಫೀಮು ಚಟವನ್ನು ಪೂರ್ಣ ನಿಲ್ಲಿಸಿಬಿಡುವ ಮಹಾಯತ್ನದಲ್ಲಿದೆ. ಇಡಿಯ ಚೀನದೇಶದಲ್ಲಿಂದು ಸುಮಾರು ಒಂದು ಸಾವಿರ ಅಫೀಮುಚಟ ನಿಲ್ಲಿಸುವ ಆಸ್ಪತ್ರೆಗಳು ಅಲ್ಲಲ್ಲಿ ತೆರೆಯಲ್ಪಟ್ಟಿವೆ. ದೇಶದ ಎಲ್ಲೆಡೆಗಳಲ್ಲಿ ಅಫೀಮು ಸೇವನೆ ಗೆದುರಾಗಿ ಬಲವಾದ ಚಳವಳ ಹೂಡಲ್ಪಟ್ಟಿದೆ. ಅಫೀಮು ಸೇವಕರಿಗೆ ಮರಣದಂಡನೆ,— ಈ ಶಾಸನವು ಬಹು ಪರಿಣಾಮಕಾರಿಯಾದಂತೆ ತೋರುತ್ತದೆ. ಹಿಂದೂದೇಶದ ಶಾಸನಕರ್ತರು ಈ ವಿಭಾಗದಲ್ಲಿ ಚೀನದ ಆದರ್ಶವನ್ನು ಅನುಕರಿಸಬಹುದಾಗಿದೆ.

ಅಫೀಮುಚಟ ನಿಲ್ಲಿಸುವಲ್ಲಿ ಚೀನವು ಕೈಕೊಂಡ ಯತ್ನಗಳನ್ನು ಸರಕಾರೀ ಪ್ರಕಟಣೆಯ ಆಧಾರದಿಂದಲೇ ಇಲ್ಲಿ ಬರೆಯಲಾಗಿದೆ.

ಚೀನದ ಅಫೀಮುಚಟಕ್ಕೆ ನೂರು ವರ್ಷಗಳ ದುಶ್ಚರಿತ್ರೆಯಿದೆ. ಅದೆಲ್ಲವನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದು ಪ್ರಸ್ತುತವಲ್ಲ. ಸರಕಾರವು ಆರಂಭದಿಂದಲೂ ಈ ಚಟದ ನಿರ್ಮೂಲನಕ್ಕಾಗಿ ಯತ್ನಿಸುತ್ತಿದೆಯೆಂದರೆ ಸಾಕು. 1935ರಲ್ಲಿ ಚಯಾಂಗ-ಕೆಯ-ಶೇಕರು ಈ ಅಫೀಮು ಚಟ ನಿರ್ಮೂಲನ ಸಮಿತಿಯ ಡೈರೆಕ್ಟರರಾಗಿ ನೇಮಿಸಲ್ಪಟ್ಟರು. ಅಂದಿನಿಂದಿತ್ತ ಆದ ಪ್ರಗತಿಯು ಲಕ್ಷಿಸತಕ್ಕದಾಗಿದೆ. ಸರಕಾರವೀಗ ಅಲ್ಲಿ ಅಫೀಮಿನ ಉತ್ಪತ್ತಿ, ಮಾರಾಟ, ರಫ್ತು ಇವೆಲ್ಲವನ್ನು ಹತೋಟಿಯಲ್ಲಿರಿಸಿಕೊಂಡಿದೆ.

ಆದರೆ ಜನರಿಗೆ ಸರಕಾರದ ಒಂದು ವರ್ತನೆಯನ್ನು ನೋಡಿ ಆಶ್ಚರ್ಯವಾಗುತ್ತಿದೆ. ಅಫೀಮು ಚಟವನ್ನು ನಿರ್ಮೂಲನಗೊಳಿಸಲು ಒಂದು ಕಡೆಯಿಂದ ಮಹಾ ಯತ್ನಗಳು ನಡೆಸಲ್ಪಡುತ್ತಿರುವಾಗ ಮತ್ತೊಂದು ಕಡೆಯಿಂದ ಅದೇ ಸರಕಾರವು ಅಫೀಮಿನ ಮಾರಾಟವನ್ನು ಹಲವು ಪ್ರಾಂತ್ಯಗಳಲ್ಲಿ ತಾನೇ ಸ್ವತಃ ಕಾರದಿಂದ ಬಹಿರಂಗವಾಗಿ ಅಲ್ಲಲ್ಲಿ ಮಾಡಗೊಡುತ್ತಿರುವುದೇಕೆ? ಇದನ್ನು ಸ್ವಲ್ಪ ವಿವರಿಸಬೇಕಾಗಿದೆ. ಮೊದಲು ಸರಕಾರವು, ಅಫೀಮಿನ ಉತ್ಪತ್ತಿ, ಮಾರಾಟಗಳನ್ನು ಪೂರ್ಣ ನಿಲ್ಲಿಸಿಬಿಟ್ಟಿತು. ಕಳ್ಳಬಟ್ಟೆಯಿಂದ ತಯಾರಿಸುವುದನ್ನು ಕಂಡುಹಿಡಿದು ಅವರನ್ನೂ, ಸೇವಕರನ್ನೂ ವಸ್ತುನಿಷ್ಠವಾಗಿ ದಂಡಿಸಿತು. ಈ ಧೋರಣೆಯು ಕೆಲವು ವರ್ಷಗಳ ವರೆಗೆ ಕೈಕೊಳ್ಳಲ್ಪಟ್ಟಿತು. ಆದರೆ, ಇದರಲ್ಲಿ ವಿಶೇಷ ಪ್ರಗತಿ ಕಂಡುಬರಲಿಲ್ಲ. ಸರಕಾರವು ಇದರಲ್ಲಿ ಯಶಸ್ವಿಯಾಗದ ಕಾರಣವೇನೆಂದರೆ,—ಅಫೀಮು ಚಟವು ಧೂಮ್ರಪಾನ, ಕುಡಿಕತನ ಮೊದಲಾದ ಚಟಗಳಿಗಿಂತ ಕಠಿನ ತರದ ಚಟವಾಗಿದೆ. ಒಮ್ಮೆ ಅದನ್ನು ಹಿಡಿದವನು ಮತ್ತೆ ಬಿಡುವದೆಂದರೆ ಅಸಾಧ್ಯವೆಂಬಷ್ಟು ಕಠಿಣವದು. ಇದಲ್ಲದೆ, ಅಫೀಮು ಸೇವಕರಿಗೆ ವಿಧಿಸಲ್ಪಡುವ ಶಿಕ್ಷೆಯು ಅಷ್ಟೊಂದು ಕಠಿನವಾಗಿರಲಿಲ್ಲ.

ಸರಕಾರವೀಗ, ಕ್ರಮಾನುಗತವಾಗಿ ಈ ಚಟವನ್ನು ನಿರ್ಮೂಲಿಸುವ ಧೋರಣೆಯನ್ನು ಕೈಗೊಂಡಿದೆ. ಇದಕ್ಕೆ ಲೀಗ್ ಆಫ್ ನೇಶನ್ಸಿನ ಅನುಮೋದನೆಯೂ ದೊರೆತಿದೆ. ಈ ಧೋರಣೆಯಿಂದ ಚೀನಾ ಸರಕಾರವು, ೧೯೩೫ರಿಂದಾರಂಭವಾಗಿ ಇನ್ನು ಆರು ವರ್ಷಗಳಲ್ಲಿ ಈ ಚಟವನ್ನು ಪೂರ್ಣ ಅಳಿಸಿಬಿಡುವ ಭರವಸೆಯಿಂದಿದೆ. ೧೯೪೦ರಲ್ಲಿ ಅಫೀಮುರಹಿತವಾದ ಚೀನವು ನಮ್ಮ ಮುಂದೆ ಕಂಗೊಳಿಸುವುದೆಂಬ ಆಸೆ. ಇದಲ್ಲದೆ ಎರಡೇ ವರ್ಷಗಳಲ್ಲಿ ಇತರ ಅಮಲುಕರ ಪದಾರ್ಥಗಳ ಚಟವನ್ನೂ ನಿರ್ಮೂಲಿಸುವ ಯತ್ನವಿದೆ. ಈ ಆರು ವರ್ಷಗಳ ಅಂತರದಲ್ಲಿ ವೃದ್ಧರ ಮತ್ತು ಅಸ್ವಸ್ಥದವರ ಬಗ್ಗೆ ಒಂದು ವಿನಾಯತಿ ಕೊಡಲಾಗಿದೆ. ವೃದ್ಧರೂ ಸ್ವಾಸ್ಥ್ಯವಿಲ್ಲದವರೂ ಒಂದಿಷ್ಟು ಅಫೀಮನ್ನು ಸೇವಿಸಬಹುದೆಂದೂ, ಆದರೆ ಕ್ರಮೇಣ ಕಡಮೆಮಾಡುತ್ತ ಬಂದು ಆರು ವರುಷಗಳೊಳಗೆ ಅದನ್ನು ಪೂರ್ಣ ನಿಲ್ಲಿಸಬೇಕೆಂದೂ ಶರ್ತು ಇದೆ. ಇಂತಹ ಅಸಾಧ್ಯ ಸೇವಕರಿಗೆ ಸೇವನೆ ಬಗ್ಗೆ ಸರಕಾರದ ಪರ್ಮಿಟುಗಳನ್ನು ಕೊಡಲಾಗಿದೆ. ಇಂತಹವರಿಗೆ ಲೈಸೆನ್ಸ್ ಕೊಟ್ಟಿರುವ ಕಾರಣ, ಅಫೀಮನ್ನು ಒದಗಿಸುವುದು ಅವಶ್ಯವಿದೆ. ಈ ಬಗ್ಗೆ ಕೆಲವೇ ಮಂದಿಗೆ ಮಾತ್ರ ಅಫೀಮು ಮಾರಾಟದ ಲೈಸೆನ್ಸು ಕೊಟ್ಟಿರುವರು. ಇಂತಹ ಲೈಸೆನ್ಸುಗಳನ್ನು ಕ್ರಮೇಣ ಕಡಮೆಮಾಡುತ್ತ ಬರುತ್ತಿರುವರು. ಆರು ವರುಷಗಳೊಳಗೆ ಎಲ್ಲ ಲೈಸೆನ್ಸುಗಳೂ ರದ್ದುಗೊಳಿಸಲ್ಪಡುವುವು.

"ಅಫೀಮು ಸೇವಕರಿಗೆ ಮರಣದಂಡನೆ!"—ಈ ಭಯಂಕರ ಶಿಕ್ಷೆಯೇಕೆ ಎಂದು ಕೆಲವರಿಗೆ ಆಶ್ಚರ್ಯವಾಗುತ್ತಿದೆ. ಭೂತದಯೆಯ ದೃಷ್ಟಿಯಿಂದ ಈ ಉಗ್ರ ಶಾಸನವು ಹಲವರಿಂದ ಕಡುತರವಾಗಿ ಟೀಕಿಸಲ್ಪಟ್ಟಿದೆ. ಟೀಕಾಕಾರರು ಹೆಚ್ಚಾಗಿ ಪರದೇಶದವರು. ಅವರಿಗೆ ಪರಿಸ್ಥಿತಿಯ ಭೀಕರತೆಯೂ ಶಾಸನದ ಪೂರ್ಣ ಅರ್ಥವೂ ಇನ್ನೂ ತಿಳಿದಿಲ್ಲವೆನ್ನಬೇಕು. ೧೯೩೬ನೇ ಅಂತ್ಯಕ್ಕೆ, ಇತರ ಅಮಲುಕರ ಪದಾರ್ಥಗಳ ನಿರ್ಮೂಲನದ ಅವಧಿಯು ಮುಗಿಯಿತು. ಆ ಮೊದಲು, ವಿಷಕರ ಪದಾರ್ಥಗಳನ್ನು (ಅಮಲಿನ ವಸ್ತುಗಳು) ಮಾರಾಟಮಾಡುವವರು, ಮರಣದಂಡನೆಗೊಳಗಾಗುತಿದ್ದರು. ೧೯೩೭ರಿಂದ ತಿನ್ನುವವರೂ (ಉಪಯೋಗಿಸುವವರೂ) ಈ ಶಿಕ್ಷೆಗೆ ಗುರಿಯಾಗುವರು. ಮರಣದಂಡನೆಯು ಜ್ಯಾರಿಗೆ ಬಂದನಂತರ ಅಮಲುಕರ ಪದಾರ್ಥ ಸೇವಕರಿಗೆ ತಮ್ಮ ಚಟವನ್ನು ಬಿಡಲು ಎರಡು ವರುಷಗಳ ಅವಧಿಯಿತ್ತು. ಈ ಅವಧಿಯ ನಂತರ ಆ ಅಮಲುಕರ ಪದಾರ್ಥ ಸೇವಕರು ಗುಣಹೊಂದಿಯೂ ಮೂರನೆ ಬಾರಿ ತಪ್ಪುಮಾಡುವರೆನ್ನುತ್ತಲೇ ಈ ಶಿಕ್ಷೆ ವಿಧಿಸಲಾಗುತ್ತಿದೆ.

ಸರಕಾರವು ಮರಣದಂಡನೆಯೇ ಮೊದಲಾದ ಉಗ್ರ ಶಾಸನಗಳ ಮೂಲಕ ನಿರ್ದಾಕ್ಷಿಣ್ಯವಾಗಿ, ಕಾಠಿಣ್ಯದಿಂದ ವರ್ತಿಸುತ್ತ ಈ ಚಟವನ್ನು ನಿಲ್ಲಿಸುತ್ತದೆ ಯೆನ್ನಬಹುದು. ಆ ಚಟವನ್ನು ಬಿಡಲು ಅವರಿಗೆ ಅನೇಕ ಸಂದರ್ಭ-ಸಮಯಗಳನ್ನು ಕೊಡಲಾಗಿದ್ದರೂ ಮರಣದಂಡನೆಯಂತಹ ಕಠಿನ ಶಿಕ್ಷೆಯ ವಿನಾ ಈ ಚಟವು ನಿಲ್ಲದೆಂದು ಸರಕಾರವು ಮನಗಂಡಿದೆ. ಚೀನದಲ್ಲಿ ಈ ಚಟವು ಅಷ್ಟು ರೂಢಮೂಲವಾಗಿ ಹೋಗಿದೆ.

ಈ ಕಠಿನ ಶಾಸನಗಳು ಒಂದು ಕಡೆಯಿಂದ ಜ್ಯಾರಿಗೆ ತರಲ್ಪಡುವಾಗ ಮತ್ತೊಂದೆಡೆಯಿಂದ, ಆ ಚಟ ತೊಲಗುವಂತೆ ಯತ್ನಿಸಲು ಮನಸ್ಸಿಲ್ಲದವರ ಬಗ್ಗೆ ಆಸ್ಪತ್ರೆಗಳನ್ನು ತೆರೆದ ಕಾರ್ಯವನ್ನೂ ಮರೆಯಲಿಲ್ಲ. ೧೯೩೬ರಲ್ಲಿ ... ಆಸ್ಪತ್ರೆಗಳು ಅಫೀಮು ಭುಂಜಕರ ... ಬಗ್ಗೆಯೇ ತೆರೆಯಲ್ಪಟ್ಟುವು. ... ಕೊನೆಯೊಳಗೆ ... ಆಸ್ಪತ್ರೆಗಳಾದುವು. ಇತರ ೩೦೦ ಆಸ್ಪತ್ರೆಗಳಲ್ಲೂ ಅಫೀಮು ಚಟ ಚಿಕಿತ್ಸೆಗೆ ಏರ್ಪಾಡು ಮಾಡಲಾಗಿದೆ.

ಅಫೀಮು ಭುಂಜಕರು ಚೀನದಲ್ಲಿ ಎಷ್ಟು ಮಂದಿ ಇರುವರೆಂಬುದನ್ನು ನೋಡಲು, ಚೀನದ ಸರಕಾರವು ಒಮ್ಮೆ ಎಲ್ಲ ಅಫೀಮು ಭುಂಜಕರ ರಿಜಿಸ್ಟ್ರೇಶನಿಗೆ ಆಜ್ಞೆ ಕೊಟ್ಟಿತು. ಆ ರಿಜಿಸ್ಟ್ರೇಶನ ಸಂಖ್ಯೆಗಳ ಪ್ರಕಾರ ಚೀನದಲ್ಲಿ ... ಲಕ್ಷ ಅಫೀಮು ಸೇವಕರಿರುವರೆಂದು ತಿಳಿದುಬಂದಿದೆ.

ಹಿಂದೂದೇಶದ ಅಸ್ಸಾಮ್ ಮೊದಲಾದ ಕಡೆಗಳಲ್ಲಿ ಅಫೀಮು ಸೇವಕರು ಸಾವಿರಗಟ್ಟಲೆಯಲ್ಲಿರುವರು. ಇವರಲ್ಲಿ ಹಲವರು ಅಫೀಮು ತಿನ್ನುವ ಒಂದು ವೃತ್ತಿಯ ಹೊರಗೆ ಇನ್ನಾವುದನ್ನೂ ಅರಿಯರು. ಅಫೀಮು ತಿನ್ನಸಿಗದಿದ್ದಾಗ ಹಲವರಿಗೆ ಹುಚ್ಚು ತಗಲಿ ಸಿಕ್ಕಾಬಟ್ಟೆ ಓಡಿ ಖೂನಿ ಮಾಡುವ ಪ್ರಸಂಗಗಳೂ ಇವೆ. ಅದು ಜನರ ಮಾನಸಿಕ—ಕಾಯಕ ಶಕ್ತಿಗಳನ್ನು ಕುಗ್ಗಿಸಿ, ನಿರ್ವೀ

ರ್ಯರಸ್ನಾಗಿ ಮಾಡುವುದು. ಈ ರಾಕ್ಷಸನಿಗೆ ಬಲಿ ಬೀಳದ ಮಾನವನು ಧನ್ಯನಹುದು.

ಅಫೀಮು ಸೇವಕರು ಕಲ್ಕತ್ತಾ ಮೊದಲಾದ ದೊಡ್ಡ ನಗರಗಳಲ್ಲಿಯೂ ಇರುವರು. ಅಫೀಮನ್ನು ಚೆನ್ನಾಗಿ ತೊಳೆದು ಚಿಲುಮೆಯಲ್ಲಿ ಹಾಕಿ ಸುಹುತ್ತ ಸೇವಿಸುವರು; ಚಿಕ್ಕ ಗುಳಿಗೆಗಳಾಗಿ ಮಾಡಿ ಮುಕ್ಕುವರು. ಇವೆರಡು ಬಗೆಯ ಸೇವನೆಗಳಿವೆ. ಇಂತಹ ಸೇವಕರ ಬಗ್ಗೆ, ಚಿಕ್ಕ ಮನೆಗಳು ಅಲ್ಲಲ್ಲಿ ರಹಸ್ಯವಾಗಿ ಇವೆ. ಸೇವನೆ ಮಾಡಿ ಈ ದುರ್ಭಾಗಿ ಜೀವಿಗಳು ಅಲ್ಲೆ, ಅಮಲಿಳಿವನಕ ಮಲಗುವುವು!

ನಮ್ಮ ಬೆಟರಿಗಳು.

"ನಮ್ಮ ಬೆಟರಿಗಳು" ಎಂದು ಯಾವುದನ್ನು ಕರೆವಿರಂತೆ? ದೇಶದಲ್ಲೆಲ್ಲ ವಿದೇಶೀ ಬೆಟರಿಗಳು ತುಂಬಿಹೋಗಿವೆ. ಎಲ್ಲೆಲ್ಲೂ ವಿದೇಶಿಯ ಮಾತು! ಸ್ವದೇಶೀ ವಸ್ತುಗಳ ಮೇಲಿನ ನಮ್ಮ ಜನರ ಪ್ರೇಮವು ಇಂದೆಲ್ಲಿ? ನಮ್ಮ ದೇಶದಲ್ಲಿ ಬೆಟರಿಗಳು ತಯಾರಾಗುತ್ತಿಲ್ಲವೇ? ಒಳ್ಳೇಯ ಬೆಟರಿಗಳನ್ನು ಜನರು ಕಂಡಿಲ್ಲವೆ?

ಸ್ವಾತಂತ್ರ್ಯ ಚಳವಳ, ಸ್ವದೇಶೀ ಚಳವಳಗಳು ನಡೆವೀ ಕಾಲದಲ್ಲಿ ಅಮೇರಿಕದ ಬೆಟರಿಗಳು ನಮ್ಮ ದೇಶದಲ್ಲಿ ಲಕ್ಷಗಟ್ಟಲೆ ಖರ್ಚಾಗುತ್ತಿವೆ. "ಬೆಟರಿ" ಎಂಬುದನ್ನು ವಿದೇಶೀಯರು ಮೊದಲಾಗಿ ಇಲ್ಲಿ ತಂದರೆಂಬ ಇದೊಂದೇ ಕಾರಣದಿಂದ ನಮ್ಮ ಜನರ ಪ್ರೇಮವು ಆ ಕಡೆ ವಾಲಿಕೊಂಡಿರುವುದು ನ್ಯಾಯವಲ್ಲ. [illegible] ಹಿಂದೂದೇಶದಲ್ಲಿ ಒಂದು ವರ್ಷಕ್ಕೆ [illegible] ಅಮೇರಿಕನ್ ಬೆಟರಿಗಳು [illegible]ಗುತ್ತಿರುವುವಂತೆ! ದೇಶೀಯ [illegible] ಅರ್ಧಾಂಶ ನೇಕಡಾ ೨೦ [illegible] ಅಂಶವಾದರೂ ಇಲ್ಲವೆಂದರೆ, [illegible] ವಿಪರ್ಯಾಸ!

ಅಮೇರಿಕನ್ ಬೆಟರಿಗಳಿಗಿಂತಲೂ ಉತ್ಕೃಷ್ಟ ಬೆಟರಿಗಳು ನಮ್ಮ ದೇಶದಲ್ಲಿ ತಯಾರಾಗುತ್ತಿರುವುವು. ಕೆಲವೊಂದು ದೇಶೀಯ ಬೆಟರಿಗಳು ಬೆಟರಿಗಳ ಹೆಸರನ್ನು ಕೆಡಿಸಿರಬಹುದೇನೋ! ಆದರೆ, ಬಾಸ್ಕೋ ಕೆಮಿಕಲ್ ಎಂಡ್ ಎಲ್ಲಾಯ್ಡ್ ಇಂಡಸ್ಟ್ರಿಸ್ ಕಂಪೆನಿ, ಬೊಂಬಾಯಿ—ಇವರು ತಯಾರಿಸುವ "ಎಸ್ಟ್ರೆಲ್ಲಾ" ಬೆಟರಿಗಳ ವಿಷಯವಾಗಿ ಎಷ್ಟು ಜನರು ಅರಿತಿರುವರು? ಅವುಗಳ ಹೆಸರನ್ನು ಕೇಳಿದ ಮಾತ್ರಕ್ಕೆ ಮನಸೋಲಬೇಕೆಂದು ನಾವು ಹೇಳುವುದಿಲ್ಲ. ಅವುಗಳನ್ನು [illegible] ಕೊಂಡುಕೊಳ್ಳಿರಿ; ಉಪಯೋಗಿಸಿರಿ! ಶುದ್ಧ ದೇಶೀಯ ಬೆಟರಿಗಳವು. "ನಮ್ಮ ಬೆಟರಿ"ಗಳೆಂದು ಕರೆಯಬಹುದಾದರೆ "ಎಸ್ಟ್ರೆಲ್ಲಾ" ಬೆಟರಿಗಳನ್ನು. ಅವುಗಳನ್ನು ಕೊಂಡುಕೊಂಡು, ನೀವೂ ಈ ಸತ್ಯವನ್ನು ಮನಗಾಣಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ!

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. No. 776/1937.

ದಿ ಪ್ರಾಮಿಸಿ ಬೇಂಕ್ ಲಿಮಿಟೆಡ್, ಮಂಗಳೂರು—ಇದರ ಮೆನೇಜಿಂಗ್ ಡೈರೆಕ್ಟರ್ ಕೆ. ಆರ್. ಗುರು—. . . . ವಾದಿ.

ಮತ್ತು

1. ಕೆ. ಅಹಮ್ಮದ್, 2. ಲುವಿಸ್ ಡಿಸೋಜ, 3. ಜುಮಾನಾ ಲೋಬೊ ಪ್ರತಿವಾದಿರು

1ನೇ ಪ್ರತಿವಾದಿ ಕೆ. ಅಹಮ್ಮದ್. ಬಿ. ಅಬ್ದುಲ್ಜಬ್ಬಾರಿ ಮಗ- ಮಂಗಳೂರು ಕ್ಪಹಾರ ಮಿಶನ್‌ಶಾಲೆ ಹತ್ತರ ಇರುವವರಿಗೆ.

ಸದರಿ ಮೇಲ್ಕಂಡ ವ್ಯಾಜ್ಯದಲ್ಲಿ 1ನೇ ಪ್ರತಿವಾದಿಗೆ ಸಬ್ಸಟೂಟೆಡ್ ಸರ್ವಿಸ ನೋಟೀಸು ಹುಕುಂ ಮಾಡಿ 1938ನೇ ಫೆಬ್ರವರಿ ತಾರೀಕು 21ರಲ್ಲು ತನಖೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ. 1ನೇ ಪ್ರತಿವಾದಿಗೆ ಏನಾದರೂ ಉಪಾಪರಣೆ ಕೊಡುವದಿ ಇದ್ದರೆ, ಆ ದಿನಸ ಹಗಲು 11 ಗಂಟೆಗೆ ಖುದ್ದಾಗಲೀ ಯಾ ವಕೀಲ ದ್ವಾರವಾಗಲಿ ಹೇಳಿಕೊಳ್ಳ ತಕ್ಕದ್ದು. ಇಲ್ಲದಿದ್ದರೆ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು. ತಿಳಿದಿರಲಿ.

G. Narayana Rao,
Vakil for Plaintiff

ನೋಟೀಸು.

ಪುತ್ತೂರು ಡಿ। ಮು। ಕೋರ್ಟಿನಲ್ಲಿ.

O. S. 310/37.

1. [illegible] ಮುತ್ತಪ್ಪ
2. [illegible] ಬಾಲಕೃಷ್ಣ
3. ವೆಂಕಟ್ರಮಣ

} ವಾದಿ

ಮುಂಡೆಕೋಲು ಗ್ರಾಮದ ಮಾಪಂಜಿ.

ಚಂದನ್ ನಾಯರ್ ಕೂಡಾ 5 ಜನರು— } ಪ್ರತಿವಾದಿರು.

4ನೇ ಪ್ರತಿವಾದಿ- ಪದ್ದಯ ಗೌಡ-3ನೇ ಪ್ರತಿವಾದಿ ಹುಲಿ ಚಿನ್ನಪ್ಪನ ಮಗ-ಕೊಡಗು ಜಿಲ್ಲಾ ವೀರರಾಜಪೇಟೆ.

ಸದರಿ ದಾವೆಯಲ್ಲಿ ವಾದಿರು ಪ್ರತಿವಾದಿರ ಮೇಲೆ ದಾವಾ ಆಸ್ತಿಯನ್ನು 5 ಪಾಲುಮಾಡಿ 3 ಪಾಲುಗಳನ್ನು ವಾದಿರಿಗೆ ಕೊಡಿಸಬೇಕಾಗಿ ಪಗೈರೆ ನಿವೃತ್ತಿಗಳಿಗೆ ಪಿಶಿ ವ್ಯಾಜ್ಯಮಾಡಿರುತ್ತಾರೆ. ಅದು ಇದೇ ತಾರೀಕು 18-2-1938ಕ್ಕೆ ನೋಟೀಸಿನ ತಕ್ಷಿ ವ್ಯಾದೆಯಾಗಿರುವದರಿಂದ ಆ ವ್ಯಾದೆಗೆ ಸದರಿ 4ನೇ ಪ್ರತಿವಾದಿಯು ಸ್ವತಹ ಯಾ ಆತನ ಕಡೆ ವಕೀಲ್ ಮುಖಾಂತರ 10 ಘಂಟೆಗೆ ಕೋರ್ಟಿಗೆ ತಪ್ಪದೆ ಹಾಜರಾಗಿ ತನ್ನ ಆಕ್ಷೇಪಗಳಿದ್ದರೆ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಆತನನ್ನು ಬಿಟ್ಟು ಎಂತ ಮಾಡಿ ದಾವೆಯನು ಮುಂದರಿಸಲಾಗುತ್ತದೆ ಎಂತ ಈ ಮೂಲಕ ತಿಳಿಸಿಯದೆ. ವಾದಿರ ಕಡೆಯಿಂದ ಕೊಟ್ಟ R. I A. 79/38ನೇ ಅರ್ಜಿ ಮೇಲಾದ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿದೆ.

ಪುತ್ತೂರು, ತಾ. 31-1-38 } **B. Ramchandra Rao,** Pleader for Plaintiff.

ಶ್ರೀ
ಗೌಡಸಾರಸ್ವತ ಬ್ರಾಹ್ಮಣ ವೃಂದದ
ಮಂಗಳೂರ
ಶ್ರೀ ವೀರ ವೆಂಕಟರಮಣಸ್ವಾಮಿಯ
ರಥೋತ್ಸವ ಸಮಾರಂಭ!




ಮಂಗಳೂರು ರಥೋತ್ಸವದ ದೃಶ್ಯ.
(೩೫ ವರ್ಷಗಳ ಹಿಂದಿನ ರಥೋತ್ಸವದ ನೋಟವಿದು)

ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಸಾರಸ್ವತ ಬ್ರಹ್ಮವೃಂದದ ಮಾತುಬರಿ ದೇವಸ್ಥಾನದಲ್ಲಿ ಮಂಗಳೂರಿನ ದೇವಸ್ಥಾನವು ಒಂದಾಗಿರುವುದು. ವಿದ್ಯಾ ಸಮುತ್ಪನ್ನತೆಯ ಗೌ. ಸಾ. ಬ್ರಾಹ್ಮಣರ ಕೇಂದ್ರ ಸ್ಥಾನವೇ ಮಂಗಳೂರೆಂದರೆ ಅತಿಶಯೋಕ್ತಿಯಾಗಲಾರದು. ಈ ದೇವಸ್ಥಾನವೂ, ಇದರ ಸಮೀಪವೇ ಇರುವ ಶ್ರೀ ಮಹಾಮ್ಮಾಯಾ ದೇವಸ್ಥಾನವು ಕೂಡಾ ಹೆಚ್ಚಿನದಾಗಿ ಪುರಾತನದ್ದೆಂದು ಹೇಳಬಹುದಾಗಿದೆ. ಶ್ರೀ ವೀರ ವೆಂಕಟರಮಣ ಸ್ವಾಮಿಯ ವಿಗ್ರಹದ ವಿಷಯವಾಗಿಯೂ ದೇವಳ ವಿಷಯವಾಗಿಯೂ ಹಿರಿಯರು ಅನೇಕ ಪ್ರಕಾರವಾಗಿ ಹೇಳಿರುವರು. ಈ ವೆಂಕಟರಮಣ ಸ್ವಾಮಿಯ ವಿಗ್ರಹವನ್ನು ಇದೇ ರಥಬೀದಿಯಲ್ಲಿ ಹಿಂದೆ ವರ್ತಕ ವೃತ್ತಿಯನ್ನು ನಡಿಸುವ ಸಾ। ಮಾಧವ ಪೈಗಳೆಂಬುವರ ಅಂಗಡಿಗೆ ಭಿಕ್ಷಾರ್ಥವಾಗಿ ಬಂದಿರುವ ಸನ್ಯಾಸಿಗಳಲ್ಲೊಬ್ಬರು ತನ್ನ ಉದರ ಶಾಂತಿಗಾಗಿ ಕೆಲವು ದೀನಸುಗಳನ್ನು ಪಡೆದು ಈ ವಿಗ್ರಹವಿರುವ ಒಂದು ಕಲಮುದಾನಿಯನ್ನು ಸಾಹುಕಾರರ ಕೂಡೆ ಒತ್ತೆ ಇಟ್ಟಂತೆಯೂ, ಅನೇಕ ದಿವಸಗಳು ಕಳದರೂ ಬಾರದೆ ಇದ್ದುದಾಗಿಯೂ, ನಂತರ ಆ ಅಂಗಡಿಗಾರರಿಗೆ ಅನೇಕ ಕಷ್ಟನಷ್ಟಗಳುಂಟಾದಂತೆಯೂ, ಕೆಲವು ಸಮಯದ ನಂತರ ರಾತ್ರೆಕಾಲದಲ್ಲಿ ಅಂಗಡಿಯೊಳಗೆ ಬೆಂಕಿ ಉದ್ಭವಿಸಿರುವುದನ್ನು ಕಣ್ಣಾರೆ ಕಂಡು, ಈ ಉತ್ಪಾದನೆಗಳನ್ನು ಸಹಿಸಲಾರದೆ ತನ್ನ ನೆರೆಮನೆಯವರಾದ ಸಾಹುಕಾರ ಸುಬ್ರಾಯ ಪೈಗಳ ಕೂಡೆ ಹೇಳಿಕೊಂಡಲ್ಲಿ ಅವರು ಆ ಮೂರ್ತಿ ಇರುವ ಕಲಮುದಾನಿಯನ್ನು ಶುದ್ಧ ಮುದ್ರಿಕೆಯಿಂದ ಪರಿಶೋಧಿಸಿದಲ್ಲಿ, ಆ ಮೂರ್ತಿಯ ಅತೀ ಸುಂದರಾಕೃತಿಯನ್ನು ಕಂಡು ಆಶ್ಚರ್ಯಚಕಿತರಾಗಿ ಅದರ ಸೊಂಟದಲ್ಲಿ ನೇತಾಡುವ ಕಠಾರಿಯನ್ನು ಕಂಡು ಅದಕ್ಕೆ ವೀರ ವೆಂಕಟಸ್ವಾಮಿಯೆಂಬ ನಾಮಧೇಯದಿಂದ ಪ್ರಕೃತ ಇರುವ ದೇವಳವನ್ನು ಸ್ಥಾಪಿಸಿದ್ದಾಯಿತ್ತಾಗಿ ಹಿರಿಯರಿಂದ ತಿಳಿದು ಬರುತ್ತದೆ. ನಂತರ ಅದೇ ಮನೆತನದವರಾದ ೧ನೇ ಬಾಬು ಪೈ, ನರಸಿಂಹ ಪೈ, ನಂತರ ೨ನೇ ಬಾಬಪೈಗಳು ಇವರೇ ಮುಂತಾಗಿ ಈ ಸಂಸ್ಥೆಯು ಶಾಶ್ವತವಾಗಿ ನಡೆದುಕೊಂಡು ಬರುವಂತೆ ಸ್ವಜಾತಿಯ ಹತ್ತು ಸಮಸ್ತರಿಗೆ ಒಪ್ಪಿಸಿ ಅನಂತರ ಅವರ ಕುಟುಂಬದ ಹಿರೇ ಮೆಂಬರರಾದ ಸಾಹುಕಾರ ರಾ। ಪಾಂಡುರಂಗ ಲಕ್ಷ್ಮಣ ಪೈಗಳು ನಡೆಸಿಕೊಂಡು ಬರುತ್ತಿದ್ದರು. ಇತ್ತೀಚೆಗೆ ತನ್ನ ವೃದ್ಧಾಪ್ಯದ ದೆಸೆಯಿಂದ ಅದರಿಂದ ನಿವೃತ್ತಿ ಹೊಂದಿರುವರು.

ಗೌಡಸಾರಸ್ವತ ಬ್ರಹ್ಮವೃಂದದ ಅನುಯಾಯಿಗಳ ಪೈಕಿ ಒಬ್ಬರಾದ ಮಂಗಳೂರು ವೆಂಕಟೇಶ ಪೈಗಳೆಂಬ ಆಗರ್ಭ ಶ್ರೀಮಂತರು ಈ ದೇವಸ್ಥಾನದ ಆರ್ಥಿಕ ಸ್ಥಿತಿಯನ್ನು ತನ್ನ ತನುಮನ ಧನವನ್ನು ಅರ್ಪಿಸಿ ವೃದ್ಧಿಗೊಳಿಸಿ ಶಾಶ್ವತವಾಗಿ ದೇವಸ್ಥಾನದಲ್ಲಿ ಪಂಚಪರ್ವಗಳು ನಡೆಯುವಂತೆಯೂ ಮುಂದಕ್ಕೆ ಯಾವವಿಧದ ಕೊರತೆಯೂ ತಲೆಯೆತ್ತದಂತೆಯೂ ಮಾಡಿ ತನ್ನ ವೃದ್ಧಾಪ್ಯದಿಂದ ಕಾಲವಶರಾದರು. ಅವರ ಹಿರೇ ಮಗ ಸಾಹುಕಾರ ರಂಗಪೈಗಳು, ತನ್ನ ತಂದೆಯವರು ಕಾಯಕಷ್ಟದಿಂದ ಊರ್ಜಿತಕ್ಕೆ ತಂದ ಸಂಸ್ಥೆಯನ್ನು ವೃದ್ಧಿಸುವರೆ ಬದ್ಧಕಂಕಣರಾಗಿ ಈ ಸಂಸ್ಥೆಯ ಆದಾಯವನ್ನು ನಗದಿಯಿಂದ ರೂ. ೧೬,೦೦೦ ವ ೨೦೦೦ ಮುಡಿ ಅಕ್ಕಿಯು ಶಾಶ್ವತವಾಗಿ ಹುಟ್ಟುವಳಿ ಬರುವಂತೆ ಮಾಡಿದರು.



ರಥಸಪ್ತಮಿಯ ಮರುದಿನ ಕದಿರೆಯಲ್ಲಿ ಶ್ರೀ। ವೆಂಕಟ್ರಮಣ ಸ್ವಾಮಿಯ ಅವಭೃತ ಸ್ನಾನವಾಗುವುದಿದೆ, ಆಗ ತೆಗೆದ ಭಾವಚಿತ್ರ.
ಈ ಫೋಟೊ ಕೂಡ 35 ವರ್ಷಗಳ ಹಿಂದಿನದಾಗಿದೆ. ಇವೆರಡೂ ಫೋಟೊಗಳನ್ನು ಶ್ರೀ। ಜಿ. ಎ. ರಾವ್ ಕವಿ, ಇವರ ಸಂಗ್ರಹದಿಂದ ಆರಿಸಿ ತೆಗೆದಿರುವೆವು.



(ಈ ಫೊಟೋ ಶ್ರೀ। ಎಮ್. ಪದ್ಮನಾಭ ಕಮ್ತಿಯವರ ಸಂಗ್ರಹದಿಂದ)
ಮಂಗಳೂರು ಶ್ರೀ ವೆಂಕಟರಮಣ ದೇವಾಲಯದ ಗರ್ಭಗುಡಿಯೊಳಗಿನ ವೀರ ವೆಂಕಟರಮಣಸ್ವಾಮಿಯ ಸುಂದರ ವಿಗ್ರಹ.

ವರ್ಷಂಪ್ರತಿ ಮಾಘ ಶುದ್ಧ ಸಪ್ತಮಿಯ ದಿವಸ ಈ ದೇವಳ ರಥೋತ್ಸವವು ನಡೆಯುವುದು. ಇದನ್ನು ರಥಸಪ್ತಮಿಯೆಂದು ವಾಡಿಕೆಯಾಗಿ ಕರೆವರು. ತದಿಗೆಯ ದಿವಸ ಧ್ವಜಾರೋಹಣವಾಗಿ ಷಷ್ಠಿಯಂದು ಮೃಗಬೇಟೆಯೆಂಬ ಮಹಾ ಸಂಭ್ರಮದ ಉತ್ಸವವು ಜರಗುವುದು. ಊರಿನ ಮುಖ್ಯ ಬೀದಿಗಳಿಂದಾಗಿ ಅಂದೇ ಸಣ್ಣ ರಥದ ಉತ್ಸವವು ನಡೆದು ಸಪ್ತಮಿಯ ದಿನ ದೊಡ್ಡ ರಥದ ಉತ್ಸವವಾಗಿ ಅಷ್ಟಮಿಯ ದಿನ ಅವಭೃತ ಸ್ನಾನದೊಡನೆ ರಥೋತ್ಸವದ ಕಾರ್ಯಕ್ರಮಗಳು ಮುಗಿಯುವವು. ನಂತರ ಪೂರ್ಣಿಮೆಯ ವರೇಗೆ ವಾಹನಾದಿಗಳ ಉತ್ಸವವು ದಿನಂಪ್ರತಿ ನಡೆಯುತ್ತಿದೆ.

ದೇವಸ್ಥಾನದಲ್ಲಿ ಅತೀ ಸುಂದರವಾದ ಕೆತ್ತನೆಯ ಚಿನ್ನಾಭರಣಗಳೂ, ಬೆಳ್ಳಿ ಮುಚ್ಚಿದ ಅತೀ ನಾಜೂಕಾದ, ಪಲ್ಲಕ್ಕಿ, ಲಾಲಕಿಗಳೆಂಬ ವಾಹನಗಳೂ ಇರುವುವು. ಅಲ್ಲದೆ "ಬಂಡಿ"ಯೆಂಬ ವಾಹನದ ಮೇಲೆ ಪ್ರತಿಮೆಯನ್ನು ಕೂಡ್ರಿಸುವ ಅತೀ ದೊಡ್ಡದಾದ ಬೆಳ್ಳಿಯ ತಗಡು ಮುಚ್ಚಿದ ಗರುಡ, ಹನುಮಂತ, ಮಹಾಶೇಷನ ಪ್ರತಿಮೆಗಳು ಬಹು ಅಂದವಾದವುಗಳಾಗಿವೆ. ಇವೆಲ್ಲವನ್ನು ನಮ್ಮ ಜಿಲ್ಲೆಗೆ ಚಿತ್ತೈಸುವ ಅನೇಕ ಗವರ್ನರುಗಳು ನೋಡಿ, ಸಂತೋಷಪಟ್ಟಿರುವರು.

ಈ ರಥೋತ್ಸವದ ಸಲುವಾಗಿ ಆರು ದಿವಸಗಳಲ್ಲಿಯೂ ಏನೊಂದು ನ್ಯೂನತೆ ಇಲ್ಲದೆ ಬ್ರಾಹ್ಮಣ ಸಂತರ್ಪಣೆಯು ನಡೆಯುವದಾಗಿರುತ್ತದೆ. ಇತ್ತಲಾಗೆ ರೈಲು, ಮೋಟರು ವಾಹನಗಳ ಸೌಕರ್ಯವಿದೆ; ಸ್ವಜಾತಿಯವರು ಕೊಚ್ಚಿ, ಮಲಬಾರ ಕಡೆಗಳಿಂದಲೂ–ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ತಂಡೋಪತಂಡವಾಗಿ ಬಂದು, ಈ ಉತ್ಸವಕ್ಕಾಗಿ ನೆರೆಯುವರು.

ಇಲ್ಲಿ ಆಂಗ್ಲಭಾಷಾ ತತ್ಸ ಪ್ರಚರಿತ (But) "ಬಟ್" ಎಂಬ ಶಬ್ದವು ಉಪಯೋಗಿಸಬೇಕಾಗಿದೆ. ಮಠಸ್ಥಾಪನಾ ಕಮಿಟಿಯು ಏರ್ಪಡಿಸಿದಂದಿನಿಂದ ಈ ಸಂಸ್ಥೆಯು ಆ ಕಮಿಟಿಯ ಅಧೀನ ಕ್ಕೊಳಪಟ್ಟು ಅಂದಿನಿಂದ ಆ ಕಮಿಟಿಯ

ಪರವಾಗಿಯೇ ಈ ಸಂಸ್ಥೆಗೆ ಟ್ರಸ್ಟಿಗಳ ನೇಮಕವಾಗುವುದುಂಟು. ಟ್ರಸ್ಟಿಗಳಿಗೆ ಕಮಿಟಿಯ ಪರವಾಗಿ ಅವಧಿಯು ಇರುವುದಾದರೂ ಅವರಿಂದ ನೇಮಿಸಿದವರಲ್ಲಿ ಸಹಕಾರ, ಐಕ್ಯತೆಯಿಲ್ಲದೆ ಆಗ್ಗಾಗ್ಗೆ ತಮ್ಮ ಸ್ಥಾನಗಳಿಗೆ ರಾಜಿನಾಮೆಯನ್ನು ಕೊಡುವುದಿದೆ. ಬಹುಶಃ ಸಾರ್ವಜನಿಕ ಸೇವೆ ಮಾಡಿ ಅನುಭವವಿಲ್ಲದವರ ನೇಮಕವಾದರೆ, ಅವಧಿಯ ಮುಂಚಿತವಾಗಿಯೇ ರಾಜಿನಾಮೆ ಕೊಡುವ ಅಚಾತುರ್ಯಗಳು ನಡೆದು ಹೋಗುತ್ತಿರಬಹುದು.

ಇದೇ ತಿಂಗಳಲ್ಲಿ ಈ ಮೊದಲು ನೇಮಕಹೊಂದಿದ್ದ ಟ್ರಸ್ಟಿಗಳು ಈ ರಥೋತ್ಸವವು ಸಮಾಪಿಸುವ ಸಮಯದಲ್ಲಿಯೇ ತಮ್ಮ ಸ್ಥಾನಕ್ಕೆ ರಾಜಿನಾಮೆಯಿತ್ತರು. ಅಷ್ಟರೊಳಗಾಗಿಯೇ ಭಜ... ಸಾಹಸದಿಂದ, ಮತಸ್ಥಾಪನಾ ...ಟಿಸುವರಿಂದ ಈ ದೇವಳವನ್ನು ...ಪಿಸಿ, ವೃದ್ಧಿಸಿದ ಮನೆತನದ, ಹುರು... ಯೌವನಸ್ಥರನ್ನು ನೇಮಿಸಲಾ...ತು. ಚಿಕ್ಕ ಪ್ರಾಯದವರಾದರೂ ...ಶ್ಯವಂತರು, ಲೋಕದ ವ್ಯವಹಾರ...ನ್ನು ಅರಿತು ಸುರಿತ್ರನರಾಗಿರುವರು. ...ಹುಕಾರ ಪದ್ಮನಾಭ ಪೈ, ಸಾಹುಕಾರ ವೆಂಕಟೇಶ ಪೈ ಮತ್ತು ಗೌಡಸಾರಸ್ವತ ಸಮೂಹದ ಮೇಲ್ಮೆಗೆ ಬಹುಭಾಗ ಕಾರಣರಾಗಿ ಆಚಂದ್ರಾರ್ಕ ಕೀರ್ತಿಯನ್ನು ಪಡೆದು ತನ್ನ ಆತ್ಮವು ಇನ್ನೂ ನಿಮ್ಮ ಕೂಡೆಯೇ ಇರುವುದಾಗಿ ತನ್ನ ಸಮಾಜಕ್ಕೆ ತೋರ್ಪಡಿಸಿ ಶಿಲಾರೂಪವನ್ನು ತಾಳಿ ತಾನು ಸ್ಥಾಪಿಸಿದ, ವಿದ್ಯಾಸಂಸ್ಥೆಯಲ್ಲಿ ನೆಲೆಯಾಗಿ ನಿಂದಿರುವ ಸ್ವರ್ಗವಾಸಿ ಅಮ್ಮೆಂಬಳ ಸುಬ್ರಾಯ ಪೈಗಳ ಕುಟುಂಬದವರಾದ ಎಡ್ವೊಕೇಟ್ ದಾಮೋದರ ಪೈ ಇವರು,–ತಮ್ಮ ಜವಾಬ್ದಾರಿಯ ಸ್ಥಾನವರಿತು ಮುಂದುವರಿಯುವರಾಗಿ ಆಶಿಸಲಾಗಿದೆ.

ಈ ಮೂವರೂ ಈ ವರುಷ ನಡೆಯುವ ರಥೋತ್ಸವದ ಜಾತ್ರೆಯನ್ನು ಸಾಂಗ್ಯವಾಗಿ, ಅತೀ ವಿಜೃಂಭಣೆಯಿಂದ ಯಾವ ನ್ಯೂನತೆಯೂ ಇಲ್ಲದಂತೆ ನೆರವೇರಿಸುವರೆ ಈಗಾಗಲೇ ಎಂದಿನಂತೆ–ಈ ವರುಷ ಹೆಚ್ಚಿನ ಚಟುವಟಿಕೆಯುಳ್ಳ ಸೇವಾಸಮಿತಿಯನ್ನು ನೇಮಿಸಿರುವರು. ಮುಂದಿನವರು ಅದೇ ರೀತಿಯಿಂದ ನಡೆಯುವಂತೆ ತಾವು ಅವರಂತೆಯೇ ಬೇಜುಗಳನ್ನು ಧರಿಸಿ ನಡೆಸುವ ಶ್ರಮಸಹಿಷ್ಣುಗಳೂ ಆಗಿ ಆದರ್ಶರಾಗಿದ್ದಾರೆ. ಸ್ವಜಾತಿ ಬಾಂಧವರೆಲ್ಲ ಇವರೊಡನೆ ಸಹಕರಿಸಿದ್ದನ್ನು ಕಂಡರೆ ಇಂದಿನ ವರುಷದ ಜಾತ್ರೆಯು ತುಂಬಾ ಯಶಸ್ವಿಯಾಗಿ ನಡೆಯುವುದೆಂದು ಭರವಸೆಯಿಂದ ಹೇಳಬಹುದು. ಆ ಮಹಾ ಸ್ವಾಮಿಯು ಶಾಶ್ವತವಾಗಿ ಇವರಿಂದ ಸೇವೆಯನ್ನು ಕೈಗೊಳ್ಳುವವನಾಗಲಿ ಎಂದು ಪ್ರಾರ್ಥನೆ.

—"ನಾನು"

ಸಂಯುಕ್ತ ಘಟನೆ

(FEDERATION)



ನಿವೃತ್ತಿ ಹೊಂದುವ ಕೊಂಗ್ರೆಸ್ ಅಧ್ಯಕ್ಷರು ಫೆಡರೇಶನನ್ನು ತೀವ್ರ ಖಂಡಿಸಿರುತ್ತಾರೆ.

ಬ್ರಿಟಿಷ್ ಇಂಡಿಯದಿಂದಾರಿಸಿ ಬಂದ ಪ್ರತಿನಿಧಿಗಳೂ, ತುಂಡರಸರಿಂದ ನೇಮಕ ಮಾಡಲ್ಪಡುವ ಪ್ರತಿನಿಧಿಗಳೂ ಕೂಡಿ ಶಾಸನಗಳನ್ನು ನಿರ್ಮಿಸುವ ಮತ್ತು ಭಾರತ ಪ್ರಜಾವರ್ಗದ ಭವಿಷ್ಯವನ್ನು ಕೈಯಲ್ಲಿ ಪಡಕೊಳ್ಳುವ ಯೋಜನೆಯೇ ಸಮ್ಮಿಳಿತ ರಾಜ್ಯಭಾರ ಅಥವಾ "ಫಿಡರೇಶನ್" ಎನಿಸಲ್ಪಡುವುದು. ಬ್ರಿಟಿಷರ ದಯಾಛಾಯೆಯಲ್ಲಿರುವ ಸಂಸ್ಥಾನಾಧೀಶರು ನೇಮಕಮಾಡುವ ಪ್ರತಿನಿಧಿಗಳ ಕ್ರಮವಿದರಲ್ಲಿ ಕೊಂಗ್ರೆಸ್ಸಿಗೆ ಹಿತವಿಲ್ಲ.




ಅಧಿಕಾರ ವಹಿಸುವ ಕೊಂಗ್ರೆಸ್ ಅಧ್ಯಕ್ಷರು. "ಫೆಡರೇಶನನ್ನು ಪೂರ್ಣ ಹೋರಾಡುವೆವು" ಎನ್ನುತ್ತಾರೆ.

ಬ್ರಿಟಿಷ್ ಸಾಮ್ರಾಜ್ಯಾಧಿಕಾರಕ್ಕೊಳಪಟ್ಟಿರುವ ಭರತಖಂಡವು ಸಂಪೂರ್ಣ ಸ್ವಾತಂತ್ರ್ಯಾರ್ಜನೆಗಾಗಿ ಇತ್ತ ಐವತ್ತೊಂದು ವರ್ಷಗಳಿಂದ ವಿಶ್ವಪ್ರಯತ್ನಮಾಡುತ್ತಿದೆ. ನ್ಯಾಯ ಮತ್ತು ಶಾಂತರೀತಿಯ ಸಾಮೂಹಿಕ ಚಳವಳ ಮಾಡಿ ಬ್ರಿಟಿಷರಿಂದ ರಾಜ್ಯಾಭಾರಾಧಿಕಾರವನ್ನು ಸ್ವಲ್ಪ ಸ್ವಲ್ಪವಾಗಿ ಇಚ್ಛೆಗೆ ವಿರುದ್ಧವಾಗಿ ಬಲವಂತಪಡಿಸಿ ಭಾರತೀಯರು ಗಳಿಸಿಕೊಂಡು ಬಂದಿರುವರು. ಘಟನೆಗಳ ಮೇಲೆ ಘಟನೆಗಳು ಒಂದರ ಹಿಂದೊಂದು ನಿಯೋಜಿಸಲ್ಪಟ್ಟವು. ಆಯಾ ಘಟನೆಗಳನುಸಾರ ಅಧಿಕಾರದ ಅಲ್ಪಸ್ವ[illegible] ಭಾಗವು ಪ್ರಜಾಜನ ಸಮೂಹದ ಅ[illegible]ಯಲ್ಲಿ ಬಂತು. ಇಷ್ಟಾದರೂ ಸಂಪೂರ್ಣ ಸ್ವಾತಂತ್ರ್ಯವು ಮಾತ್ರ ನೂರರಲ್ಲೊಂದು ಪಾಲು ಕೂಡ ದೊರೆತಂತಾಗಲಿಲ್ಲವೆಂದು ಹೇಳಬೇಕಾಗುವುದು. ಕಾರಣ ಇಷ್ಟರವರೆಗೆ ದೊರೆತ ಪ್ರಜಾಧಿಕಾರಾಂಶವು ಅಷ್ಟು ಅಗಣ್ಯವಿದೆ. ಬ್ರಿಟಿಷರಿಂದ ಹಿಂದೂದೇಶಕ್ಕೆ ಕೊಡಲ್ಪಟ್ಟ ೧೯೩೫ನೇ ಆಕ್ಟಿನನ್ವಯದ ರಾಜ್ಯಾಭಾರಾಧಿಕಾರದ ಸ್ವಾತಂತ್ರ್ಯವು ದೇಶದ ಯಾವತ್ತೂ ಪ್ರಜೆಗಳಿಗೆ ಎಳ್ಳಷ್ಟೂ ತೃಪ್ತಿಕೊಟ್ಟಿಲ್ಲವೆಂಬುದೇ ಇದಕ್ಕೆ ತಕ್ಕ ನಿದರ್ಶನ.

ಕಂತುವಾರು ಸ್ವಾತಂತ್ರ್ಯ ದಾನ ಮಾಡುವ ಉದಾರತೆಯನ್ನು ಬ್ರಿಟಿಷ್ ಪ್ರಭುತ್ವದವರು ತೋರಿರುವರು. ಈ ರೀತಿಯ ಧೋರಣೆಯು ಸ್ವಾರ್ಥಪರ ಸಾಮ್ರಾಜ್ಯಶಾಹಿಯ ರಾಜತಂತ್ರ ಕೌಶಲ್ಯವನ್ನು ಪ್ರತ್ಯಕ್ಷ ತೋರುವುದು. ಅದಿರಲಿ.

ಅತಿಮಹತ್ವಿಕೆಯದೆಂದು ಹೇಳುವ ಹೊಸ ಇಂಡಿಯ ಆಕ್ಟಾದರೋ ಆದಾವ ರೀತಿಯ ಸ್ವಾತಂತ್ರ್ಯವನ್ನು ಹಿಂದೂದೇಶಕ್ಕಿತ್ತಿದೆಯೆಂದು ನೋಡುವ. ಈ ರಾಜ್ಯಾಂಗಘಟನೆಯನ್ನು ತಯಾರಿಸುವಲ್ಲಿ ಹಿಂದೂದೇಶದ ಪ್ರಜಾಜನ ಪ್ರತಿನಿಧಿಗಳ ಅಭಿಪ್ರಾಯವನ್ನು ಇಂಗ್ಲೆಂಡು ಮಾನ್ಯಮಾಡಿಲ್ಲ. ಮೊದಲಾಗಿ ಜನಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಸ್ವಾತಂತ್ರ್ಯವನ್ನು ಪ್ರಜೆಗಳಿಗಿತ್ತಿಲ್ಲ. ಬ್ರಿಟಿಷರ ಇಚ್ಛೆಗೆ ವಿರುದ್ಧವಾಗಿ ವರ್ತಿಸರೆಂದು ಅವರಿಗೆ ವಿಶ್ವಾಸವುಳ್ಳ ಕೆಲ ಹಿಂದೀ ಮಹನೀಯರುಗಳ ಮಂಡಳವೊಂದನ್ನು ಕೆಲ ಜನಪ್ರತಿನಿಧಿಗಳನ್ನೂ ಇಂಗ್ಲೆಂಡೇ ಆಮಂತ್ರಿಸಿತು. ಅವರನ್ನು ಕರೆಸಿತೇನೋ ಅಹುದು. ಆದರೆ ಅವರ ಅಭಿಪ್ರಾಯಗಳನ್ನು ಕೇಳಿಕೊಂಡು ಅದಕ್ಕನುಗುಣವಾಗಿ ಘಟನೆಯನ್ನು ನಿರ್ಮಿಸಲಿಲ್ಲವಾಗಿರುವುದರಿಂದಾಗಿಯೇ ಇಂದಿಗೆ ಅಂಥಾ ಮಹನೀಯರುಗಳು ಕೂಡ ವಿರೋಧಿಸುವಷ್ಟು ಹಾನಿಕರವಾದ ಘಟನೆಯು ನಮ್ಮ ದೇಶಕ್ಕೆ ಒದಗಿಬಂದಿರುವುದೆಂದೇ ಹೇಳಬೇಕಾಗುವುದು.

ಘಟನೆಯ ಪೂರ್ವಭಾಗವೇ ಪ್ರಾಂತೀಯ ಸ್ವಾಯತ್ತತೆ. ಈ ಆಕ್ಟಿನ ಭಾಗದ ನಿಯಮಗಳಂತೆ ಪ್ರಜಾಪ್ರತಿನಿಧಿಗಳಾದ ಮಂತ್ರಿಗಳೇ ಪ್ರಾಂತ್ಯಾಡಳಿತದ ಜವಾಬ್ದಾರಿಯನ್ನು ಪೂರ್ಣ ಹೊರಬೇಕಾಗಿದೆ. ಆದರೆ ಆ ಜವಾಬ್ದಾರಿಯನ್ನು ಜನಹಿತವಾಗುವಂತೆ ನಡೆಸುವುದಕ್ಕೆ ಬೇಕಾದ ಅಧಿಕಾರ ವ ಸ್ವಾತಂತ್ರ್ಯ ವ ಅನುಕೂಲತೆಗಳು ಮಾತ್ರ ಆ ಮಂತ್ರಿಗಳಿಗಿರುವುದಿಲ್ಲ. ಮಾತ್ರವಲ್ಲ ಗವರ್ನರರುಗಳಿಗೆ ಶಾಂತಿ, ನ್ಯಾಯ, ಅಲ್ಪಸಂಖ್ಯಾಕರ ರಕ್ಷಣೆಗಳ ಹೆಸರಲ್ಲಿ ಸರ್ವಾಧಿಕಾರ ನಡೆಸಿ ಅಂಥಾ ವಿಶೇಷಾಧಿಕಾರ ಪ್ರಯೋಗದಿಂದ ಸ್ವೇಚ್ಛಾವಿಹಾರವರ್ತಿಗಳಾಗಿ ಮೆರೆಯಲು ಸಂಪೂರ್ಣ ಅಧಿಕಾರವಿದೆ. ಆಕ್ಟಿನ ಉತ್ತರಭಾಗವಾದ ಸಂಯುಕ್ತ ರಾಜ್ಯಾಂಗ ಘಟನೆಯು ಅದೆಷ್ಟು ಅನಿಷ್ಟವಿದೆಯೆಂಬದನ್ನು ಆ ಘಟನೆಯ ನಿರ್ಮಾಣ ರೀತಿಯನ್ನು ನೋಡಿದರೆ ವ್ಯಕ್ತವಾಗುವುದು.



ಶ್ರೀ। ವಲ್ಲಭಭಾಯಿಯವರು. ಫೆಡರೇಶನು, ಈಗ ಇದ್ದಂತೆ ನಮಗೆ ಬೇಡ ಎನ್ನುತ್ತಿದ್ದಾರೆ.

ಹಿಂದೂದೇಶದ ಪ್ರಜೆಗಳಲ್ಲಿ ಏಳು ಕೋಟಿಗಳಷ್ಟು ದೇಶೀಯ ರಾಜ್ಯಗಳಲ್ಲಿರುತ್ತಾ, ಅಂಥಾ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕೇಂದ್ರಸಭೆಗೆ ಕಳುಹಿಸುವ ವ್ಯವಸ್ಥೆಯು ನ್ಯಾಯಸಮ್ಮತವಿದೆ. ಆದರೆ ಈ ಸಂಯುಕ್ತ ಘಟನೆಯಂತೆ ಅಂಥಾ ದೇಶೀಯ ಸಂಸ್ಥಾನಗಳ ಅರಸರು ನೇಮಕಮಾಡುವವರು ಕೇಂದ್ರಸಭೆಗೆ ಬರುವವರಿರುವರು. ಬ್ರಿಟಿಷರ ವಶವಿರುವ, ಹೊಸ ಆಕ್ಟಿನ ರೀತಿಗನುಸಾರವಾಗಿ ಜನಪ್ರತಿನಿಧಿಗಳಾದ ಮಂತ್ರಿಗಳ ಆಡಳಿತಕ್ಕೊಳಪಟ್ಟಿರುವ ಇಂಡಿಯದ ಹನ್ನೊಂದು ಬ್ರಿಟಿಷ್ ಸಂಸ್ಥಾನಗಳ ವತಿಯಿಂದ ಜನರಿಂದಲೇ ಆರಿಸಿಬರುವ ಪ್ರತಿನಿಧಿಗಳೂ ದೇಶೀಯ ಸಂಸ್ಥಾನಗಳ ಅರಸರ ಪ್ರತಿನಿಧಿಗಳೂ ಒಟ್ಟುಗೂಡಿ ಇಡೀ ದೇಶಕ್ಕೆ ಬೇಕಾದ ಕಾಯಿದೆಗಳನ್ನು ರಚಿಸುವಂತಾಗುವ ಈ ಘಟನೆಯಲ್ಲಿ ದೇಶೀಯ ಸಂಸ್ಥಾನಗಳಲ್ಲಿರುವ ಪ್ರಜೆಗಳ ಅಭಿಪ್ರಾಯಕ್ಕೆ ತಿಲಾಂಶವೂ ಸ್ಥಾನವಿಲ್ಲವಾಗಿದೆ. ಮಾತ್ರವಲ್ಲ, ರಾಜರುಗಳೆಂದರೆ ಬ್ರಿಟಿಷರು ಹಿಂದೂದೇಶದಲ್ಲಿರುವುದರಿಂದಾಗಿಯೇ ಉಳಿದಿರುವ ಅದೊಂದು ಅತಿ ಪ್ರಾಚೀನವಾದ ಮೇಲಾಳುಗಳ ಪಂಗಡವಿರುವುದು. ಇಂದಿನ ಪ್ರಜಾಪ್ರಭುತ್ವ ಪದ್ಧತಿಗೆ ಪ್ರತಿಕೂಲಪ್ರದ ಶಕ್ತಿಯಾದ ಈ ನಿರಂಕುಶಾಧಿಕಾರಿ ವರ್ಗವು ಅದೆಂತು ಜನಹಿತಕಾ[illegible]ಗಿ[illegible]ದೆಯೆಂಬುದು ಇಂದಿನ ದೇಶೀಯ ರಾಜ್ಯಗಳಲ್ಲಿಯ "ದಬ್ಬಾಳಿಕೆ"ಯ ಅಕ್ರಮಾಧಿಕಾರ ಚಲನೆಯಿಂದಲೇ ವ್ಯಕ್ತವಾಗುವುದು. ಇಂಥ ಅಪ್ರಾಗತಿಕ ಚಿತ್ತವೃತ್ತಿಯ ಅಳರಸುಗಳು ನಾಮಕರಣ ಮಾಡುವ ಸದಸ್ಯರುಗಳೂ, ದೇಶದ ಕೋಟ್ಯಾಧೀಶ ವರ್ಗದವರ ಪ್ರತಿನಿಧಿಗಳೂ, ಪ್ರಾಂತ್ಯಗಳಿಂದ ಬರುವ ಜನಪ್ರತಿನಿಧಿಗಳೂ ಒಟ್ಟುಗೂಡಿ ಏರ್ಪಡಲಿರುವ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಭಿಪ್ರಾಯಕ್ಕೆ ಎಷ್ಟು ಮಾನ್ಯ ದೊರೆತೀತು? ಪ್ರಜಾಜನಕೋಟಿಯ ಹಿತಕಾರಿ ರಾಜ್ಯಭಾರ ಕಾರ್ಯವು ಅದೆಷ್ಟು ಫಲಕಾರಿಯಾದೀತು ಎಂದು ನಮಗೆ ತಿಳಿಯಲು ಕಷ್ಟವಿಲ್ಲ. ಅಂಥ ಸಭೆಯಲ್ಲಿ ನಿಜವಾದ ಪ್ರಜಾಪ್ರತಿನಿಧಿಗಳಿಗೆ ಎಂದೆಂದಿಗೂ ಬಹುಮತ ದೊರೆಯಲಾರದು. ದೇಶದ ವಾಣಿಜ್ಯ, ಅರ್ಥ, ನಾಣ್ಯವಿನಿಮಯ, ಸೈನ್ಯ, ಪರರಾಷ್ಟ್ರಸಂಬಂಧ ಧೋರಣೆಗಳು ಪ್ರಜಾಪ್ರತಿನಿಧಿಗಳ ಅಂಕೆಯಲ್ಲಿಡಲ್ಪಟ್ಟಿಲ್ಲವೆಂಬುದೇ ಈ ಸಂಯುಕ್ತ ಘಟನೆಗೆ ಪ್ರಬಲ ವಿರೋಧವನ್ನು ದೇಶವಿಡೀ ಏಕ ಕಂಠದಿಂದ ಹೇಳಲು ಪ್ರಾಮುಖ್ಯ ಕಾರಣಗಳಾಗಿವೆ. ನಾಣ್ಯ ವಿನಿಮಯ ರೀತಿಯು ಈಗಿರುವಂತೆ ಇಂಗ್ಲಂಡಿನ ಹಿತಕ್ಕಿದೆ, ಮಾತ್ರವಲ್ಲ ಇಂಡಿಯಕ್ಕೆ ಹಾನಿಕರವಾಗಿದೆ. ಇದನ್ನು ಹಿಂದೂದೇಶದ ಹಿತದೃಷ್ಟ್ಯಾ ಬದಲುಮಾಡುವ ಅಧಿಕಾರವು ಹೊಸ ಆಕ್ಟು ಪ್ರಕಾರ ಜ್ಯಾ[illegible]ಯಲ್ಲಿ ಬರುವ ಸಂಯುಕ್ತ ನ್ಯಾಯವಿಧಾಯಕ ಸಭೆಗಿಲ್ಲ. ಹಾಗೆಯೇ ದೇಶದ ವ್ಯಾಪಾರ, ರೈಲ್ವೆ, ರಿಜರ್ವ ಬೇಂಕ್, ಸೈನ್ಯಗಳ ವಿಷಯದಲ್ಲೂ ನಮ್ಮ ಹಿತಕ್ಕೆ ಬೇಕಾದಂತೆ ಆಗಾಗ ಆಗಬೇಕಾದ ಏರ್ಪಾಡು-ಯಾ—ಮಾರ್ಪಾಡುಗಳನ್ನು ಮಾಡಲು ಕೇಂದ್ರ ಸಭೆಗೆ ಅಧಿಕಾರವಿಲ್ಲ. ಇಂಥ ಸಂಯುಕ್ತ ರಾಜ್ಯಾಂಗ ಘಟನೆಯನ್ನು ನದೆಬಡಿಯುವುದಕ್ಕೆ ಬದ್ಧ ಕಂಕಣವಾದ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯು ಇಂದು ಆ ಕಾರ್ಯಕ್ಕಾಗಿ ಸ[illegible]ಪ್ರಯತ್ನಮಾಡಲಿದೆ. ಈ ಸಂಯುಕ್ತ[illegible]ಘಟನೆಯು ಅನಂಗೀಕೃತ[illegible]ವಾಗಿ ಮಾಡುವುದೇ ನಮ್ಮ [illegible] ಕಾರ್ಯಕ್ರಮವು. ನಮ್ಮ ದೇಶದ ಎ[illegible] ಪ್ರಜೆಗಳೂ ತಂತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಆ ಮೂಲಕ ನಿಯೋಜಿಸಲಾಗುವ "ಲೋಕ ಸಂಘ"ದಲ್ಲಿ ನಿರ್ಣಯಿಸಲಾಗುವ ಹೊಸ ಕಾನೂನು ನಮ್ಮ ರಾಜ್ಯವನ್ನಾಳುವುದಕ್ಕೆ ಬೇಕೆಂದೂ, ಈಗಿನ ಸಂಯುಕ್ತ ಘಟನೆಯನ್ನು ಹಿಂದೆಗೆಯಬೇಕೆಂದೂ ಬ್ರಿಟಿಷ್ ಇಂಡಿಯದ ಸ್ವತಂತ್ರ ಪ್ರಾಂತೀಯ ಸರಕಾರಗಳೆಲ್ಲ ಈಗಾಗಲೇ ಬ್ರಿಟಿಷ್ ಸರಕಾರಕ್ಕೆ ತಿಳಿಸಿವೆ. ಒಂದೆಡೆ ಇಂಥಾ ಅನಿಶ್ಚಿತ ಸಂಯುಕ್ತ ರಾಜ್ಯಾಂಗ ಘಟನೆಯನ್ನು ನದೆಬಡಿಯುವುದಕ್ಕಾಗಿ ಕಾಂಗ್ರೆಸ್ಸಿಗೆ ಬೇಕಾದ ಸಾಮುದಾಯಿಕ ಬೆಂಬಲವೂ ಸುಸಜ್ಜಿತವಾಗುತ್ತಿದೆ. ಮಹಾಜನ ಹಿತಕಾರೀ ರಾಜ್ಯಭಾರ ಕ್ರಮವನ್ನು, ಅದೇ ಸಂಪೂರ್ಣ ಪ್ರಜಾಪ್ರಭುತ್ವ ತತ್ವಾನ್ವಿತ ರಾಜ್ಯಕಾರ್ಯ ನಿರ್ವಹಣ ವ್ಯವಸ್ಥೆಯನ್ನು—ನ್ಯಾಯಬದ್ಧ ಶಾಂತರೀತಿಯಲ್ಲಿ ಸ್ಥಾಪಿಸಿ ಭಾರತದ ಆರ್ಥಿಕ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳಿಗೆ ಸಂಪೂರ್ಣ ಸ್ವರಾಜ್ಯ ಸ್ಥಾಪನೆ

ಗಾಗಿ
ಲಭಾರತ ಕೆಲೆಂ, ಈ ಸಂಸ್ಥೆಗೆ ಟ್ರಸ್ಟಿಗಳ ಕವಾಗಿ ತನುಮನಧನಗಳು. ಟ್ರಸ್ಟಿಗಳಿಗೆ ದೇಶಸೇವೆಗಾಗಿ ಆತ್ಮಾರ್ಪಣಬುದ್ಧಿಯು ಇರುವುದೇ ಪ್ರತಿಯೊಬ್ಬ ಭಾರತ ಪುತ್ರನ ಆದ್ಯ ಕರ್ತವ್ಯವಾಗಿದೆ.

ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಸರಿನಲ್ಲೊಂದು ಗಾಂಭೀರ್ಯ, ಡೈರೆಕ್ಟರ್ ಮಂಡಲಿಯ ಕಾರ್ಯಧೋರಣೆಯಲ್ಲಿ ವಿಶ್ವಾಸ, ವರದಿಯ ಅಂಕೆ ಸಂಖ್ಯೆಗಳನ್ನು ಪ್ರತ್ಯಕ್ಷ ಕಾಣುತ್ತ ಪೂರ್ಣ ಭರವಸೆ—ಇಂತಹ ತ್ರಿಗುಣಾತ್ಮಕವಾದ ಒಂದು ವಿಮಾ ಸಂಸ್ಥೆಯನ್ನು ಬಯಸುವಾಗ ನಮ್ಮ ಮುಂದೆ ಮೈಸೂರು ಇನ್ಶೂರೆನ್ಸ್ ಕಂಪೆನಿಯ ಹೆಸರು ಮುಂದೆ ಬರುವುದು. ಇದರ ೧೯೩೭ನೇ ವರುಷದ ವರದಿಯು ಇನ್ನೂ ಪ್ರಕಟವಾಗಿ ನಮ್ಮ ಮುಂದಿಲ್ಲವಾದರೂ, ಅದು ಅತ್ಯಂತ ಯಶಸ್ಸಿನ ಕಾರ್ಯ ವೃತ್ತಾಂತವನ್ನೇ ನಮ್ಮ ಮುಂದಿಡುವುದೆಂದು ನಂಬಿರುವೆವು. ೧೯೩೬ನೇ ವರುಷದ ವರದಿಯನ್ನವಲೋಕಿಸುತ್ತ ನಮಗೆ ಅತ್ಯಾನಂದವಾಗಿದೆ.

ಕಂಪೆನಿಯ ತೆತ್ತು ಬಂಧ ಮೂಲ ರೂ. ೫೪,೬೩೦; ಶೇರು ಧನದ ಮನಿಧಿಯು ರೂ. ೮೮,೦೭೦ ಆಗಿದೆ! ...ರದಿಯ ವರುಷದಲ್ಲಿ ರೂ. ೮,೬೨,೦೨೫ ಮೌಲ್ಯದ ವಿಮಾ ಕಾರ್ಯವನ್ನು ಕಂಪೆನಿಯು ಪೂರೈಸಿರುವುದು. ಇದು ೧೯೩೫ನೇ ವರುಷಕ್ಕಿಂತ ಸುಮಾರು ೩ ಲಕ್ಷದಷ್ಟು ಹೆಚ್ಚು! ಸೇಕಡಾ ೬೭ರಷ್ಟು ವಿಮಾ ಕಾರ್ಯವನ್ನೀ ಕಂಪೆನಿಯು ಪೂರೈಸಬೇಕಾದರೆ, ಜನರಿಗೆ ಇದರ ಮೇಲಿನ ಆದರ-ವಿಶ್ವಾಸಗಳು ಹೆಚ್ಚುತ್ತಿವೆಯೆಂದೇ ಅರ್ಥ. ಆಡಳಿತ ವ್ಯಯವು ಕಡಮೆಯಾಗುತ್ತಿದೆ. ಭಾರತದ ಪ್ರಬಲ ವಿಮಾ ಕಂಪೆನಿಗಳ ಸಾಲಿನಲ್ಲೀ ಕಂಪೆನಿಯು ಮೆರೆವ ದಿನಗಳು ದೂರವಿಲ್ಲವೆಂದು ನಮಗೆ ಭರವಸೆಯಿದೆ. ಜನರಲ್ ಮ್ಯಾನೇಜರರಾದ ಶ್ರೀ। ಜೆ. ವಿ. ದೊಡ್ಡವೀರಪ್ಪನವರೂ ಚೆಯರ್‌ಮ್ಯಾನರ್‌ರಾದ ಶ್ರೀ। ವಿ. ವೆಂಕಟಪ್ಪನವರೂ ಶ್ರೀ। ಪಿ. ಶಿವಶಂಕರ ಮೊದಲಾದ ಡೈರೆಕ್ಟರರ ಹಾಗೂ ವಿಶ್ವಾಸೀ ಏಜಂಟರ ಸಹಕಾರದಿಂದ ಈ ಸಂಸ್ಥೆಯನ್ನು ಅಭಿವೃದ್ಧಿಪಥಕ್ಕೆ ತರುತ್ತಿರುವರು. ಇಷ್ಟು ಕಾಲ ಮೈಸೂರು ಸಂಸ್ಥಾನದೊಳಗೇ ತನ್ನ ಕಾರ್ಯಕ್ಷೇತ್ರವನ್ನು ಪರಿಮಿತಗೊಳಿಸಿದ್ದ ಸಂಸ್ಥೆಯು ಬ್ರಿಟಿಷ್ ಇಂಡಿಯಾ ಹಾಗೂ ಬರ್ಮಕ್ಕೂ ವಿಸ್ತರಿಸುವ ಮಹಾ ಸಾಹಸಕ್ಕೆ ಕೈಯಿಕ್ಕಿದೆ. ಈ ವಿಭಾಗದಲ್ಲಿ ಆಯಾ ಭಾಗಗಳಲ್ಲಿರುವ ಕನ್ನಡಿಗರೂ ಇತರ ದೇಶಪ್ರಿಯರೂ ಈ ಸಂಸ್ಥೆಗೆ ಕೈಗೊಟ್ಟು ಸಹಕರಿಸಬೇಕೆಂದು ಹಾರೈಕೆ.

ಮಂಗಳೂರು ಸ್ವದೇಶೀ ಸ್ಟೋರ್ಸ್

ಮಂಗಳೂರಿನ ಪ್ರಾಮುಖ್ಯ ಸ್ವದೇಶೀ ವಸ್ತುಗಳ ಸಂಸ್ಥೆಯಿದು. ಶುದ್ಧ ಖಾದಿಗೂ, ಸ್ವದೇಶೀ ಸರಕುಗಳಿಗೂ ಹೆಸರಾದುದು. ಶುದ್ಧ ಖಾದಿಯಲ್ಲಿ ಆಗಾಗ್ಗೆ ರೂಢಿಗೆ ಬರುವ ಫ್ಯಾಶನೇಬ್ಲ್ ಅರಿವೆಯನ್ನು ಇವರು ನಮ್ಮ ಜಿಲ್ಲೆಗೆ ಮೊದಲಾಗಿ ತಂದು ಪ್ರಚುರಗೊಳಿಸುತ್ತಿರುವರು. ಇತ್ತೀಚೆಗೆ ಜಿಲ್ಲೆಯ ಇತರ ಭಾಗಗಳಲ್ಲೂ ಜನರ ಸೌಕರ್ಯಕ್ಕಾಗಿ ಶಾಖೆಗಳನ್ನು ತೆರೆದಿರುವರು.


ಪೈಮನಿ ಬೇಂಕ್, ಲಿಮಿಟೆಡ್.

ಅನುಭವಿಗಳೂ ಸಮಾಜದ ಮುಂದಾಳುಗಳೂ ಆದ ಶ್ರೀ। ಕೆ. ಆರ್. ಗುರುಗಳು ಮೆನೇಜಿಂಗ್ ಡೈರೆಕ್ಟರರಾಗಿ ಈ ಬ್ಯಾಂಕು ಚೆನ್ನಾಗಿ ಕೆಲಸಮಾಡುತ್ತಿದೆ. ಕ್ರಮವಾಗಿ ನಡೆಸಲ್ಪಡುವ "ಕುರಿ"ಫಂಡಿನ ಇವರ ಯೋಜನೆಯು ಬಹು ಜನಾದರಹೊಂದಿದೆ. ಬ್ಯಾಂಕಿನ ಇತರ ವಹಿವಾಟುಗಳೂ ನಡೆಸಲ್ಪಡುವುವು.

ಸುವಾಸಿನಿ ಬೀಡಿ ವರ್ಕ್ಸ್, ಮಂಗಳೂರು

ಸುವಾಸಿನಿ ಬೀಡಿ ವರ್ಕ್ಸ್ ಈ ಸಂಸ್ಥೆಯ ಚಿಕ್ಕ ಪ್ರಮಾಣದಲ್ಲಿ ಆರಂಭಿಸಲ್ಪಟ್ಟಿದು, ಈಗ ಬಲು ಮುಂದರಿದಿದೆ. ಆಡಳಿತಗಾರರಾದ ಶ್ರೀ। ಯು. ರಾಮನಾಯ್ಕರು ಉತ್ಸಾಹಿ ತರುಣರು; ತುಂಬ ವ್ಯವಹಾರಜ್ಞಾನವಿದ್ದವರು. ಶಿಸ್ತು ಪಾಲಿಸುವುದರಲ್ಲಿ ಇರುವ ಇವರ ಪ್ರೇಮವು ಒಮ್ಮೆಗೇ ಕಾಠಿಣ್ಯವಾಗಿ ತೋರಿಬರಬಹುದಾದರೂ, ಕೆಲಸಗಾರರ ವಿಷಯಕವಾಗಿ ಇವರಿಗೆ ತುಂಬ ಕಾರುಣ್ಯವಿದೆ. ಕೆಲಸಗಾರರಿಗೆ ಅನೇಕ ವಿಧದಿಂದ ನೆರವಾದ ಉದಾಹರಣೆಗಳೆಷ್ಟೋ ಇವೆ. ಶ್ರೀಯುತರಿಗೆ ಯಶಸ್ಸನ್ನು ಕೋರುವೆವು.

ಉಡುಪಿ ಪರ್ಯಾಯ.



ಶ್ರೀ ಪೇಜಾವರ ಮಠದ ಸ್ವಾಮಿಗಳು ಫಲಿಮಾರು ಮಠದ ಸ್ವಾಮಿಜಿಯವರಿಗೆ ಪರ್ಯಾಯವನ್ನೊಪ್ಪಿಸಿಕೊಡುವರು.
(ಫೊಟೊ: ಐಡಿಯಲ್ ಸ್ಟುಡಿಯೊ, ಉಡುಪಿ.)
(ಜನವರಿ, ೧೯೩೮)